


# “ಅವತಾರಗಳು ಹಾಗೂ ಶ್ರೀ ಅರವಿಂದರ ಮಹಾಸಮಾಧಿ”

ಅಖಿಲ ಭಾರತ ಪತ್ರಿಕೆ
ಡಿಸೆಂಬರ್ – 2013



*"When mind is still, then Truth gets her chance to be heard in the purity of the silence."*

- Sri Aurobindo

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ಅವತಾರಗಳು ಹಾಗೂ ಶ್ರೀ ಅರವಿಂದರ ಮಹಾಸಮಾಧಿ"

**ಭಾಗ I: ಅವತಾರಗಳು – ಮನುಷ್ಯನಲ್ಲಿ ಭಗವಂತನ ಅವತಾರ**

**ಅನು : ಡಾ. ಕೆ.ಎಸ್. ಆಮೂರ**

ಅವತಾರವೆಂದರೇನು? 3

**ಅನು : ಶ್ರೀ ವೀರೇಂದ್ರ ಸಿಂಪಿ**

ಅವರೋಹಣ ಮಾಡಿದ ಅವತಾರ ಕೈಕೊಳ್ಳಬೇಕಾದ ಕಾರ್ಯ 5

ಅವತಾರಿ ಪುರುಷನ ಬಾಹ್ಯ ಕ್ರಿಯೆ 8

**ಅನು : ಡಾ. ಕೆ.ಎಸ್. ಆಮೂರ**

ಅವತಾರಿ ಪುರುಷನ ಆಗಮನದಿಂದಾಗುವ ಆಂತರಿಕ ಫಲ 9

ಸಾಧಕರ ಪ್ರಶ್ನೆಗಳಿಗೆ ಶ್ರೀ ಅರವಿಂದರ ಉತ್ತರಗಳು 10

ಶ್ರೀ ಅರವಿಂದರನ್ನು ಕುರಿತು ಶ್ರೀಮಾತೆಯವರು 14

**ಭಾಗ II: ಶ್ರೀ ಅರವಿಂದರ ಮಹಾಸಮಾಧಿ**

ಶ್ರೀ ಅರವಿಂದರ ಮಹಾಸಮಾಧಿಯನ್ನು ಕುರಿತು ಶ್ರೀಮಾತೆಯವರು 15

ಶ್ರೀ ಅರವಿಂದರ ದೇಹತ್ಯಾಗ – ಅದರ ಆಂತರಿಕ ಪ್ರಾಮುಖ್ಯತೆ ಮತ್ತು ಪರಿಣಾಮ 17

**ಅನುಬಂಧ :**

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮೃತ್ಯುವನ್ನು ಜಯಿಸುವುದು 41

**ವಾರ್ತಾಪತ್ರ** 44

### ಶ್ರೀ ಅರವಿಂದರ ಸಂಕೇತ

ಅವರೋಹಣ ಮಾಡುತ್ತಿರುವ ತ್ರಿಕೋನ ಸತ್–ಚಿತ್–ಆನಂದವನ್ನು ಪ್ರತಿನಿಧಿಸುತ್ತದೆ.

ಆರೋಹಣ ಮಾಡುತ್ತಿರುವ ತ್ರಿಕೋನ ಭೌತದ್ರವ್ಯ ಅಭೀಪ್ಸೆಪಡುವ ಉತ್ತರವನ್ನು ಜೀವನ, ಪ್ರಕಾಶ ಹಾಗೂ ಪ್ರೇಮ ಇವುಗಳ ರೂಪದಡಿಯಲ್ಲಿ ಪ್ರತಿನಿಧಿಸುತ್ತದೆ.

ಇವೆರಡರ ಸಂಗಮ ಸ್ಥಾನ – ನಡುವಿರುವ ಚೌಕ – ಪರಿಪೂರ್ಣ ಪ್ರಕಟನೆ, ಅದರ ಕೇಂದ್ರದಲ್ಲಿ ಪರಮೋಚ್ಚನ ಅವತಾರ – ಕಮಲ.

ಚೌಕದ ಒಳಗಿರುವ ಜಲ ಅನೇಕತೆಯುಳ್ಳ ಸೃಷ್ಟಿಯನ್ನು ಪ್ರತಿನಿಧಿಸುತ್ತದೆ.

**(13/27)** – ಶ್ರೀಮಾತೆ

# ಭಾಗ I: ಅವತಾರಗಳು – ಮನುಷ್ಯನಲ್ಲಿ ಭಗವಂತನ ಅವತಾರ

## ಅವತಾರವೆಂದರೇನು?

ಮನುಷ್ಯನಲ್ಲಿ ಭಗವಂತ ಅವತಾರ ತಾಳುವುದರ ರಹಸ್ಯ, ದೇವ ಪ್ರಮುಖನಿಂದ ಮಾನವ ಮಾದರಿಯನ್ನು, ಮಾನವ ಸ್ವಭಾವವನ್ನು ಸ್ವೀಕಾರ ಮಾಡುವುದರಲ್ಲಿದೆ, – ಇದು ಗೀತೆಯ ದೃಷ್ಟಿಯಲ್ಲಿ ಕೇವಲ ಸನಾತನ ರಹಸ್ಯದ ಇನ್ನೊಂದು ಬದಿ – ಸಾರದಲ್ಲಿ ಅದು ಯಾವಾಗಲೂ ಮಾನವ ಜನ್ಮ ಕುರಿತಾಗಿಯೇ ಇದೆ, ಅದು ಕೂಡ ಪವಾಡ ಸದೃಶವಾಗಿ ಸ್ವೀಕಾರ ಮಾಡುವು–ದಾಗಿದೆ, ಆದಾಗ್ಯೂ ಅದು ಗೋಚರ ರೂಪದಲ್ಲಿ ಜನ್ಮತಾಳುವಿಕೆಯಲ್ಲಿ ತೋರಿಬರುವಂತಹದಲ್ಲ. ಪ್ರತಿಯೊಬ್ಬ ಮಾನವ ಸತ್ತೆಯ ಸನಾತನ ಮತ್ತು ವಿಶ್ವಂಭರ ಆತ್ಮ ದೇವನಾಗಿರುತ್ತದೆ, ಅವನ ವ್ಯಕ್ತಿವಿಶಿಷ್ಟತೆಯ ಆತ್ಮ ಕೂಡ ಪ್ರಮುಖ ದೇವನ ಒಂದು ಭಾಗ 'ಮಮೈವಾಂಶಃ' – ಕೊಂಚ ಭಾಗವಲ್ಲ, ತುಂಡಲ್ಲ. ಏಕೆಂದರೆ, ನಿಶ್ಚಿತವಾಗಿ, ದೇವ ತುಂಡು ತುಂಡಾಗಿ ಚಿಕ್ಕ ಚೂರುಗಳಲ್ಲಿ ಮುರಿದು ಹೋಗಿರುತ್ತಾನೆಂದು ನಾವು ಯೋಚನೆ ಮಾಡುವುದು ಸಾಧ್ಯವಿಲ್ಲ, ಆದರೆ ಮನುಷ್ಯನದು ದೈವೀಪ್ರಜ್ಞೆಯ ಭಾಗಶಃ ಪ್ರಜ್ಞೆ, ಆ ಪ್ರಜ್ಞೆಯ ದೈವೀ ಸಾಮರ್ಥ್ಯದ ಭಾಗಶಃ ಸಾಮರ್ಥ್ಯ, ಸತ್ತೆಯ ಏಕ ಮತ್ತು ವಿಶ್ವಂಭರ ದಿವ್ಯಾನಂದವಾಗಿರುವುದರ ಭಾಗಶಃ ಸಂತೋಷ ಪಡುವಿಕೆ ಜಗತ್ತಿನ ಸತ್ತೆಯದು. ಹಾಗಾಗಿ ಪ್ರಕಟಣೆಯಲ್ಲಿ ಅಥವಾ ಪ್ರಕೃತಿಯಲ್ಲಿ ಅವನು ಏಕೈಕ ಅನಂತ ಹಾಗೂ ಸೀಮಾರಹಿತ ದೈವೀ ಸತ್ತೆಯ ಸೀಮಿತ ಮತ್ತು ಸಾಂತ ಸತ್ತೆ. ಈ ಸೀಮಿತತೆಯ ಮುದ್ರೆಯೆಂದಾಗಿ ಅಜ್ಞಾನವಿದೆ, ಈ ಅಜ್ಞಾನದ ಮೂಲಕ ತಾನು ಯಾವ ದೇವ ಪ್ರಮುಖನಿಂದ ಬಂದಿರುವೆನೆಂಬುದನ್ನು ಅಷ್ಟೇ ಅಲ್ಲ ತನ್ನೊಳಗೆ ಯಾವಾಗಲೂ ಜೊತೆಗಿರುವ ದೇವ ಪ್ರಮುಖನನ್ನು ಮರೆಯುತ್ತಾನೆ, ಆ ದೇವ ಪ್ರಮುಖ ಅವನದೇ ಸ್ವಭಾವದ ರಹಸ್ಯ ಹೃದಯದಲ್ಲಿ ಪರದೆಯ ಹಿಂದೆ ಆಂತರಿಕ ವೇದಿಕೆಯ ಮೇಲೆ ಪ್ರಜ್ವಲಿಸುತ್ತಿರುವ ಜ್ವಾಲೆಯ ಹಾಗೆ ಮಾನವ ಪ್ರಜ್ಞೆಯ ಅವನದೇ ದೇವ ಮಂದಿರದಲ್ಲಿ ಇರುತ್ತಾನೆ.

ಮನುಷ್ಯ ಅಜ್ಞಾನಿಯಾಗಿರುತ್ತಾನೆ, ಏಕೆಂದರೆ ಅವನ ಆತ್ಮದ ಕಣ್ಣುಗಳ ಮೇಲೆ ಮತ್ತು ಅದರ ಎಲ್ಲ ಅಂಗಗಳ ಮೇಲೆ ಪ್ರಕೃತಿಯ ಅಥವಾ ಮಾಯೆಯ ಮುದ್ರೆಯಿರುತ್ತದೆ, ಈ ಮಾಯೆಯ ಮೂಲಕ ಅವನನ್ನು ಭಗವಂತನ ಸನಾತನ ಸತ್ತೆಯಿಂದ ಪ್ರಕಟನೆಯಲ್ಲಿ ತಂದಿರಿಸಿರುವುದಾಗಿರುತ್ತದೆ, ಪ್ರಕೃತಿ ಅವನನ್ನು



ದೈವೀದ್ರವ್ಯದ ಬಹು ಅಮೂಲ್ಯ ಲೋಹದಿಂದ ಒಂದು ನಾಣ್ಯದ ಹಾಗೆ ಟಂಕಿಸಿದ ಹಾಗಿರುತ್ತದೆ, ಆದರೆ ಆ ನಾಣ್ಯದ ಮೇಲೆ ಅದರ ಗೋಚರ ರೂಪದ ಲಕ್ಷಣಗಳ ಆಚ್ಛಾದನವನ್ನು ದೃಢವಾಗಿ ಲೇಪಿಸಲಾಗಿರುತ್ತದೆ; ಆ ಲೇಪನದ ಮೇಲೆ ಅದರದೇ ಮುದ್ರೆ ಹಾಗೂ ಗುರುತನ್ನು ಪಶು ಸದೃಶ ಮಾನವತೆಯ ಮೇಲೆ ಮುದ್ರಿಸಲಾಗಿರುತ್ತದೆ. ದೇವ ಪ್ರಮುಖನ ರಹಸ್ಯ ಕುರುಹು ಅಲ್ಲಿದ್ದಾಗ್ಯೂ ಅದನ್ನು ಮೊದಲು ಭಿನ್ನವಾಗಿ ಗುರುತಿಸಲಾಗುವುದಿಲ್ಲ, ಅದು ಮೊದಲು ವ್ಯತ್ಯಾಸ ಗುರುತಿಸಲಾಗದಂತಹದಿರುತ್ತದೆ ಮತ್ತು ಯಾವಾಗಲೂ ಬಹಳ ಶ್ರಮದಿಂದ ಗುರುತಿಸಲು ಸಾಧ್ಯವಾಗುವಂತಹದು, ನಮ್ಮ ಸತ್ತೆಯ ರಹಸ್ಯದಲ್ಲಿ ದೀಕ್ಷೆ ಪಡೆಯುವುದರ ಹೊರತಾಗಿ ಅದನ್ನು ನಿಜವಾಗಿ ಶೋಧಿಸಲಾಗದಂತಹದು, ಆ ದೀಕ್ಷೆ ದೇವನತ್ತ ಮತ್ತು ಲೌಕಿಕದತ್ತ ಹೊರಳಿರುವುದನ್ನು ಭಿನ್ನವಾಗಿ ತೋರಿಸುತ್ತದೆ.

ದೈವಿಕವಾಗಿ ಜನ್ಮ ತಾಳಿದ ಅವತಾರಿ ಪುರುಷನಲ್ಲಿ ನಿಜವಾದ ದ್ರವ್ಯ ಆಚ್ಛಾದನೆಯೊಳಗಿಂದ ಹೊರಸೂಸಿ ಹೊಳೆಯುತ್ತದೆ, ಆ ಮುದ್ರೆಯ ಗುರುತು ರೂಪಕ್ಕಾಗಿ ಮಾತ್ರ ಇರುತ್ತದೆ, ದೃಷ್ಟಿ ಮತ್ತು ಜೀವನದ ಸಾಮರ್ಥ್ಯ ರಹಸ್ಯ ದೇವ ಪ್ರಮುಖನದಾಗಿರುತ್ತವೆ. ಧಾರಣ ಮಾಡಿದ ಮಾನವ ಸ್ವಭಾವದ ಮುದ್ರೆಗಳನ್ನು ಮುರಿದುಹಾಕಿ ಅವು ಹೊರಬರುತ್ತವೆ. ದೇವ ಪ್ರಮುಖನ ಕುರುಹು ಆಂತರಿಕ ಆತ್ಮದ ಕುರುಹಾಗಿರುತ್ತದೆ, ಬಾಹ್ಯದತ್ತ ಹೊರಳಿದುದಲ್ಲ, ಭೌತಿಕವಾದದ್ದಲ್ಲ, ಓದಬಲ್ಲವರಿಗೆ ಓದಲಾಗುವಂತೆ, ನೋಡಬಲ್ಲವರಿಗೆ ನೋಡಲಾಗುವಂತೆ ಸ್ಪಷ್ಟವಾಗಿರುತ್ತದೆ. ಏಕೆಂದರೆ ರಾಕ್ಷಸೀ ಸ್ವಭಾವ. ಈ ವಿಷಯಗಳಿಗೆ ಕುರುಡಾಗಿ–ರುತ್ತದೆ, ಅದು ದೇಹವನ್ನು ನೋಡುತ್ತದೆ, ಆತ್ಮವನ್ನಲ್ಲ, ಬಾಹ್ಯ ಸತ್ತೆಯನ್ನು ನೋಡುತ್ತದೆ ಆಂತರಿಕ ದೈವೀ ವ್ಯಕ್ತಿಯನ್ನಲ್ಲ, ಮುಖವಾಡವನ್ನು ನೋಡುತ್ತದೆ, ದೈವೀ ವ್ಯಕ್ತಿವಿಶಿಷ್ಟತೆಯನ್ನಲ್ಲ. ಸಾಮಾನ್ಯ ಮಾನವ ಜನ್ಮದಲ್ಲಿ ವಿಶ್ವಂಭರ ದೇವ ಧಾರಣ ಮಾಡುವ ಪ್ರಕೃತಿಯ ಮುಖ ಪ್ರಬಲವಾಗಿರುತ್ತದೆ, ಅವತಾರದ ಅದೇ ಗೋಚರ ವಿಷಯದಲ್ಲಿ ದೇವನ ಮುಖ ಅದರ ಸ್ಥಾನದಲ್ಲಿರುತ್ತದೆ. ಒಂದರಲ್ಲಿ ದೇವ ತನ್ನ ಭಾಗಶಃ ಸತ್ತೆಯನ್ನು ಮನುಷ್ಯ ತನ್ನ ವಶದಲ್ಲಿಟ್ಟುಕೊಳ್ಳುವುದಕ್ಕೆ ಮತ್ತು ಅದರ ಮೇಲೆ ಪ್ರಾಬಲ್ಯ ನಡೆಸುವುದಕ್ಕೆ ಅನುವು ಮಾಡಿಕೊಡುತ್ತಾನೆ, ಇನ್ನೊಂದರಲ್ಲಿ ಅವನು ಭಾಗಶಃ ಮಾದರಿಯದಾದದ್ದನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತಾನೆ ಮತ್ತು ಅದರ ಮೇಲೆ ದೈವಿಕವಾಗಿ ಪ್ರಾಬಲ್ಯ ಮೆರೆಸುತ್ತಾನೆ. ಇದನ್ನು ಅವನು ಗೀತೆ ಹೇಳಬಹುದಾದ ಹಾಗೆ ಉತ್ಕ್ರಾಂತಿಗೆ ಒಳಗಾಗುವ ಮತ್ತು ಆರೋಹಣ ಮಾಡಬೇಕಾದ ಸಾಮಾನ್ಯ ಮನುಷ್ಯನ ಹಾಗೆ ಮಾಡುವುದಿಲ್ಲ, ಆದರೆ

ಮಾನವತೆಯ ದ್ರವ್ಯದಲ್ಲಿ ನೇರವಾದ ಅವರೋಹಣದ ಮೂಲಕ ಮತ್ತು ಅದರ ಎರಕಗಳನ್ನು ಕೈಗೆತ್ತಿಕೊಳ್ಳುವುದರ ಮೂಲಕ ಮಾಡುತ್ತಾನೆ.

**(13/149–50)** – ಶ್ರೀ ಅರವಿಂದರು

*

ಸ್ಥೂಲವಾಗಿ ಹೇಳುವುದಾದರೆ ಅವತಾರಿ ಪುರುಷ ತನ್ನಲ್ಲಿ ಜನ್ಮ ತಾಳಿದ ಇಲ್ಲವೆ ಅವರೋಹಣ ಮಾಡಿದ ಮತ್ತು ಅಂತರಂಗದಿಂದ ತನ್ನ ಸಂಕಲ್ಪ, ಜೀವನ ಹಾಗೂ ಕ್ರಿಯೆಗಳ ಮೇಲೆ ಆಳಿಕೆ ನಡೆಸುವ ಭಗವಂತನ ಸಾನ್ನಿಧ್ಯ ಹಾಗೂ ಸಾಮರ್ಥ್ಯಗಳ ಬಗ್ಗೆ ಅರಿವುಳ್ಳವನಾಗಿರುತ್ತಾನೆ, ಆಂತರಿಕವಾಗಿ ಅವನು ಈ ದೈವೀ ಸಾಮರ್ಥ್ಯ ಹಾಗೂ ಸಾನ್ನಿಧ್ಯಗಳೊಡನೆ ತನ್ನನ್ನು ಗುರುತಿಸಿಕೊಂಡ ಭಾವನೆ ತಂದುಕೊಳ್ಳುತ್ತಾನೆ.

**(28/485)** – ಶ್ರೀ ಅರವಿಂದರು

*

## ಅವರೋಹಣ ಮಾಡಿದ ಅವತಾರ ಕೈಕೊಳ್ಳಬೇಕಾದ ಕಾರ್ಯ

ಆ ಆರೋಹಣಕ್ಕೆ ಇಲ್ಲವೆ ಉತ್ಕ್ರಾಂತಿಗೆ ಸಹಾಯ ಮಾಡಲು ಅವರೋಹಣವಾಗುತ್ತದೆ ಇಲ್ಲವೆ ಅದನ್ನು ಸ್ವೀಕರಿಸಲಾಗುತ್ತದೆ, ಇದನ್ನು ಗೀತೆ ಸ್ಪಷ್ಟವಾಗಿ ಹೇಳಿದೆ. ಭಗವಂತ ಮಾನವ ಸತ್ತೆಯಲ್ಲಿ ಪ್ರಕಟನಾಗುವ ಸಾಧ್ಯತೆಯನ್ನು ಉದಾಹರಿಸಲು ಅವತಾರವಿದೆ ಎಂದು ನಾವು ಹೇಳಬಹುದು. ಅದರಿಂದಾಗಿ ಮನುಷ್ಯ ಅದೇಂದರೇನು ಎಂಬುದನ್ನು ನೋಡಬಲ್ಲ ಮತ್ತು ಅದರೊಳಗೆ ಬೆಳೆಯಲು ಧೈರ್ಯ ತಂದುಕೊಳ್ಳಬಲ್ಲ. ಹಾಗೆಯೇ ಆ ಪ್ರಕಟಣೆಯ ಪ್ರಭಾವವನ್ನು ಪೃಥ್ವಿಯ ಸ್ವಭಾವದಲ್ಲಿ ಕಂಪಿಸುತ್ತ ಉಳಿದುಕೊಳ್ಳಲು ಬಿಟ್ಟುಕೊಡುವುದಾಗಿದೆ ಮತ್ತು ಆ ಪ್ರಕಟಣೆಯ ಆತ್ಮ ಊರ್ಧ್ವಮುಖ ಪ್ರಯತ್ನದ ಮೇಲೆ ಅಧ್ಯಕ್ಷತೆ ವಹಿಸುತ್ತಿರುತ್ತದೆ. ಅರಸುತ್ತಿರುವ ಆತ್ಮ ತನ್ನನ್ನು ಎಸೆದು ಬಿಡಲು ಅದಕ್ಕೆ ದೈವೀ ಮನುಷ್ಯನ ಆಧ್ಯಾತ್ಮಿಕ ಎರಕವನ್ನು ಕೊಡುವುದಾಗಿದೆ. ಅದು ಒಂದು ಧರ್ಮವನ್ನು ಕೊಡುವುದಕ್ಕಾಗಿದೆ – ಕೇವಲ ಒಂದು ಪಂಥವನ್ನಲ್ಲ, ಆದರೆ ಆಂತರಿಕ ಹಾಗೂ ಬಾಹ್ಯ ಜೀವನದ ಪದ್ಧತಿ – ಸ್ವಂತಕ್ಕೆ ಆಕಾರ ಕೊಡುವ ಒಂದು ಶಾಸನ ಮತ್ತು ಪದ್ಧತಿ ಇರುವ ಧರ್ಮದ ಮೂಲಕ ಅವನು ದೈವತ್ವದತ್ತ ಬೆಳೆಯಬಲ್ಲನು. ಈ ಬೆಳವಣಿಗೆ, ಈ ಆರೋಹಣ ಇದೆಲ್ಲ ಕೇವಲ ಪ್ರತ್ಯೇಕ ಮತ್ತು ವ್ಯಕ್ತಿಗತ ಇಂದ್ರಿಯಗ್ರಾಹ್ಯ ವಿಷಯವಲ್ಲ, ಆದರೆ ಜಗತ್ತಿನ ಎಲ್ಲ ದೈವೀ ಚಟುವಟಿಕೆಗಳಲ್ಲಿದ್ದ



ಹಾಗೆ ಸಾಮೂಹಿಕ ವ್ಯವಹಾರ, ಒಂದು ಕರ್ಮ, ಮಾನವ ಕುಲಕ್ಕಾಗಿ ಕೂಡ ಕೈಕೊಳ್ಳಬೇಕಾದ ಕರ್ಮವಾಗಿದೆ, ಅದು ಮಾನವರ ಮುನ್ನಡೆಗೆ ಸಹಾಯ ಮಾಡುವುದಕ್ಕಿದೆ, ಅದರ ಮಹತ್ತರ ಸತ್ವಪರೀಕ್ಷೆಯ ಕಾಲಗಳಲ್ಲಿ ಆ ಮುನ್ನಡೆಯನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿದೆ, ಕೆಳಗೆಳೆಯುವ ಶಕ್ತಿಗಳ ಒತ್ತಾಯ ಬಹಳ ಹೆಚ್ಚಾದಾಗ ಅವುಗಳನ್ನು ಭಗ್ನಗೊಳಿಸುವುದಕ್ಕಾಗಿದೆ, ಮನುಷ್ಯನ ಸ್ವಭಾವದಲ್ಲಿ ಭಗವಂತನತ್ತ ಕರೆದೊಯ್ಯುವ ಧರ್ಮವನ್ನು ಎತ್ತಿಹಿಡಿಯುವುದಕ್ಕಾಗಿ ಇಲ್ಲವೆ ಪುನರುಜ್ಜೀವನಗೊಳಿಸುವುದಕ್ಕಾಗಿ ಇದೆ, ಭಗವಂತನ ರಾಜ್ಯಕ್ಕಾಗಿ, ಅದೆಷ್ಟೇ ದೂರದಲ್ಲಿರಲಿ, ತಯಾರಿ ಮಾಡಿಕೊಳ್ಳುವುದಕ್ಕಾಗಿದೆ, ಮತ್ತು ಅನಿಷ್ಟ ಹಾಗೂ ಅಂಧಕಾರಗಳನ್ನು ಮುಂದುವರಿಸಿಕೊಂಡು ಹೋಗುವಂತಹ ರಾಜ್ಯವನ್ನು ಉರುಳಿಸುವುದಕ್ಕಾಗಿದೆ, ಇವೆಲ್ಲ ಅವತಾರದ ಅವರೋಹಣಕ್ಕಾಗಿ ಗುರುತಿಸಲಾದ ಉದ್ದೇಶಗಳು ಮತ್ತು ಸಾಮಾನ್ಯವಾಗಿ ಅವತಾರಿ ಪುರುಷನ ಕಾರ್ಯದಿಂದಾಗಿ ಜನ ಸಮೂಹ ಅವನನ್ನು ಭಿನ್ನ ರೀತಿಯಲ್ಲಿ ಅರಸುತ್ತಾರೆ ಮತ್ತು ಆ ಕಾರ್ಯಕ್ಕಾಗಿ ಪೂಜಿಸಲು ಸಿದ್ಧರಾಗಿರುತ್ತಾರೆ. ಈ ಬಾಹ್ಯ ಅವತಾರ ತಾಳುವಿಕೆ ಮಾನವ ಜೀವನದ ಸಂಕೇತದಲ್ಲಿ ಸನಾತನ ಆಂತರಿಕ ದೈವತ್ವದ ಒಂದು ಕುರುಹು, ಅವತಾರಿ ಪುರುಷ ತನ್ನದೇ ಮಾನವ ಮನಸ್ಸಿನ, ಪ್ರಕೃತಿಯ ಹಾಗೂ ಭೌತಿಕತೆಯ ಕ್ಷೇತ್ರದಲ್ಲಿ ತನ್ನನ್ನು ಪ್ರಕಟಿಸುತ್ತಾನೆ, ಅದರಿಂದಾಗಿ ಆ ಪ್ರಕಟಣೆಯೊಂದಿಗೆ ತಾವು ಏಕತೆ ಪಡೆಯಬಹುದು ಮತ್ತು ಅದರ ವಶಕ್ಕೊಳಗಾಗಬಹುದು ಎಂಬುದನ್ನು ಕೇವಲ ಆಧ್ಯಾತ್ಮವಾದಿಗಳು ಕಂಡುಕೊಳ್ಳುತ್ತಾರೆ. ಬಾಹ್ಯ ಮಾನವತೆಯಲ್ಲಿ ಕ್ರಿಸ್ತ, ಶ್ರೀಕೃಷ್ಣ ಹಾಗೂ ಬುದ್ಧ ಇವರ ದೈವೀ ಪ್ರಕಟಣೆಗೆ ಅನುಗುಣವಾಗಿ ಅದರ ಆಂತರಿಕ ಸತ್ಯದಲ್ಲಿ, ನಮ್ಮದೇ ಆಂತರಿಕ ಮಾನವತೆಯಲ್ಲಿ ಸನಾತನ ಅವತಾರದ ಅದೇ ಬಗೆಯ ಪ್ರಕಟಣೆ ಇರುತ್ತದೆ.

ಇದು ಅವತಾರ ತಾಳುವಿಕೆಯ ಉದ್ದೇಶ ...

*

ಅವತಾರಿ ಪುರುಷನ ಅವತರಣಕ್ಕೆ ದ್ವಂದ್ವಾರ್ಥಗಳಿರುತ್ತವೆ ಮತ್ತು ದ್ವಂದ್ವ ರೂಪಗಳಿರುತ್ತವೆ. ಅದಕ್ಕೆ ದೈವೀ ಶಕ್ತಿಯ ಒಂದು ಬಾಹ್ಯ ಬದಿಯಿದೆ, ಅದು ಬಾಹ್ಯ ಜಗತ್ತಿನ ಮೇಲೆ ದೈವೀ ನಿಯಮವನ್ನು ನಿರ್ವಹಿಸಿಕೊಂಡು ಹೋಗುವುದಿರುತ್ತದೆ ಮತ್ತು ಅದಕ್ಕೆ ಮರು ಆಕಾರ ಕೊಡುವುದಿರುತ್ತದೆ. ಅದರ ಮೂಲಕ ದೇವನತ್ತ ಪ್ರಯತ್ನ ನಿರ್ಧಾರಕ ವಿಮುಖಗತಿಯದಾಗದಂತೆ ಕಾಪಾಡಲಾಗುತ್ತದೆ ಮತ್ತು ಅದರ ಸ್ಥಾನದಲ್ಲಿ, ಕ್ರಿಯೆ ಪ್ರತಿಕ್ರಿಯೆಗಳೇನೇ ಇದ್ದಾಗ್ಯೂ, ಪ್ರಕೃತಿ ಮುಂದುವರಿದು–

ಕೊಂಡು ಹೋಗುವ ಮುನ್ನಡೆ ಹಾಗೂ ಮತ್ತೆ ಬಿದ್ದುಬಿಡುವಿಕೆಗಳ ಲಯಬದ್ಧತೆ ಇದ್ದಾಗ್ಯೂ ನಿರ್ಧಾರಕ ರೀತಿಯಲ್ಲಿ ಅದರ ಮುನ್ನಡೆಯತ್ತ ಕೊಂಡೊಯ್ಯ–ಲಾಗುತ್ತದೆ, ಅಂತರಂಗದಲ್ಲಿ ದೇವನತ್ತ ಹೊರಳಿರುವ ಪ್ರಜ್ಞೆಯ ದೈವೀಶಕ್ತಿಯ ಬದಿಯಿದೆ, ಅದು ವ್ಯಕ್ತಿಗತ ಆತ್ಮದ ಮೇಲೆ ಹಾಗೂ ಮನುಕುಲದ ಆತ್ಮದ ಮೇಲೆ ಕಾರ್ಯ ಕೈಕೊಳ್ಳುತ್ತದೆ. ಅದರಿಂದಾಗಿ ಆ ಆತ್ಮ ಮನುಷ್ಯನಲ್ಲಿ ದೇವನ ದಿವ್ಯಜ್ಞಾನದ ಹೊಸ ರೂಪಗಳನ್ನು ಸ್ವೀಕರಿಸಬಹುದು, ಮತ್ತು ಮೇಲ್ಮುಖದ ಸ್ವ–ತೆರೆದಿರಿಸಿ–ಕೊಳ್ಳುವಿಕೆಯ ಅದರ ಸಾಮರ್ಥ್ಯದಲ್ಲಿ ಪೋಷಣೆ, ಹೊಸ ರೂಪ ಹಾಗೂ ಸಮೃದ್ಧಿಗಳನ್ನು ಪಡೆಯಬಹುದು. ಅವತಾರಿ ಪುರುಷ ಕೇವಲ ಬಾಹ್ಯ ಕ್ರಿಯೆಗಾಗಿ ಅವತರಿಸಿದ್ದಾನೆಂದು ಮಾನವತೆಯಲ್ಲಿರುವ ವ್ಯಾವಹಾರಿಕ ಬುದ್ಧಿ ಬಹಳಷ್ಟು ಸಲ ಭಾವನೆಗೆ ತಂದುಕೊಳ್ಳುವ ಪ್ರಚೋದನೆಗೆ ಒಳಗಾಗಬಹುದು. ಕ್ರಿಯೆ ಹಾಗೂ ಘಟನೆ ಇವುಗಳಿಗೆ ತಮ್ಮದೇ ಆದ ಮೌಲ್ಯವಿಲ್ಲ, ಆದರೆ ಅವು ಪ್ರತಿನಿಧಿಸುವ ಶಕ್ತಿಯಿಂದಾಗಿ, ಸಂಕೇತಿಸುವ ವಿಚಾರಗಳಿಂದಾಗಿ, ಮತ್ತು ಅವುಗಳಿಗೆ ಸೇವೆ ಸಲ್ಲಿಸುವ ಶಕ್ತಿ ಅಲ್ಲಿರುವುದರಿಂದಾಗಿ ಮಾತ್ರ ತಮ್ಮ ಮೌಲ್ಯವನ್ನು ಪಡೆಯುತ್ತವೆ.

ಅವತಾರಿ ಪುರುಷ ತನ್ನನ್ನು ತೋರಿಸಿಕೊಳ್ಳುವ ಸತ್ವ ಪರೀಕ್ಷೆಯ ಕಾಲ, ಬಾಹ್ಯದಲ್ಲಿ ಕೇವಲ ಘಟನೆಗಳ ಹಾಗೂ ಶ್ರೇಷ್ಠ ಲೌಕಿಕ ಬದಲಾವಣೆಗಳ ಸತ್ವ ಪರೀಕ್ಷೆಯ ಕಾಲ ಎಂದು ಕಂಡುಬಂದಾಗ್ಯೂ, ಅದರ ಮೂಲದಲ್ಲಿ ಮತ್ತು ನಿಜವಾದ ಅರ್ಥದಲ್ಲಿ ಅದು ಮನುಕುಲದ ಪ್ರಜ್ಞೆಯ ಸತ್ವ ಪರೀಕ್ಷೆಯ ಕಾಲವಾಗಿರುತ್ತದೆ, ಆಗ ಅದು ಭವ್ಯ ಮಾರ್ಪಾಡಿಗೆ ಒಳಗಾಗಬೇಕಾಗುತ್ತದೆ ಮತ್ತು ಒಂದಿಷ್ಟು ಹೊಸ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿಸಬೇಕಾಗುತ್ತದೆ. ಬದಲಾವಣೆಯ ಈ ಕ್ರಿಯೆಗಾಗಿ ಒಂದು ದೈವೀಶಕ್ತಿಯ ಆವಶ್ಯಕತೆ ಇರುತ್ತದೆ, ಆದರೆ ಆ ಶಕ್ತಿ, ಯಾವಾಗಲೂ, ಅದು ಮೈವೆತ್ತ ಪ್ರಜ್ಞೆಯ ಸಾಮರ್ಥ್ಯದ ಪ್ರಕಾರ ವ್ಯತ್ಯಾಸಕ್ಕೊಳಗಾಗುತ್ತದೆ. ಆದ್ದರಿಂದ ದೈವೀಪ್ರಜ್ಞೆ ಮಾನವತೆಯ ಮನಸ್ಸು ಹಾಗೂ ಆತ್ಮ ಇವುಗಳಲ್ಲಿ ಪ್ರಕಟವಾಗುವುದರ ಆವಶ್ಯಕತೆ ಇದೆ. ನಿಜವಾಗಿ ಬದಲಾವಣೆ ಮುಖ್ಯವಾಗಿ ಬೌದ್ಧಿಕ ಹಾಗೂ ವ್ಯಾವಹಾರಿಕವಾಗಿದ್ದಲ್ಲಿ ಅವತಾರಿ ಪುರುಷನ ಮಧ್ಯಸ್ಥಿಕೆ ಇರುವುದಿಲ್ಲ, ಅಲ್ಲಿ ಪ್ರಜ್ಞೆಯ ಶ್ರೇಷ್ಠಮಟ್ಟದ ಮೇಲಕ್ಕೆತ್ತುವಿಕೆ ಹಾಗೂ ಸಾಮರ್ಥ್ಯದ ಶ್ರೇಷ್ಠ ಪ್ರಕಟಣೆ ಇರುತ್ತವೆ, ಅದರಲ್ಲಿ ಆ ಕಾಲದ ಮಟ್ಟಿಗೆ ಜನರನ್ನು ಅವರ ಸಾಮಾನ್ಯ ಮಟ್ಟದ ಮೇಲೆ ಔನ್ನತ್ಯಕ್ಕೇರಿಸಲಾಗಿರುತ್ತದೆ, ಪ್ರಜ್ಞೆಯ ಹಾಗೂ ಸಾಮರ್ಥ್ಯದ ಹೆಚ್ಚಳ ಅದರ ತರಂಗದ ಶಿಖೆಗಳನ್ನು ಕೆಲವು ಅಸಾಧಾರಣ ವ್ಯಕ್ತಿಗಳಲ್ಲಿ (ವಿಭೂತಿಗಳಲ್ಲಿ) ಕಂಡುಕೊಳ್ಳುತ್ತದೆ, ಸಾಮಾನ್ಯ ಕ್ರಿಯೆಯನ್ನು ಮುನ್ನಡೆಸಿಕೊಂಡು ಹೋಗುವ ಅವರ ಕ್ರಿಯೆ ಉದ್ದೇಶಿಸಿದ ಬದಲಾವಣೆಗಾಗಿ



ಸಾಕಷ್ಟಾಗಿರುತ್ತದೆ. ಯುರೋಪ ದೇಶದಲ್ಲಾದ ಧಾರ್ಮಿಕ ಕ್ರಾಂತಿ ಮತ್ತು ಫ್ರೆಂಚ್ ಕ್ರಾಂತಿ ಇವು ಈ ಗುಣಲಕ್ಷಣಗಳುಳ್ಳ ಸತ್ವ ಪರೀಕ್ಷೆಗಳಾಗಿದ್ದವು, ಅವು ಶ್ರೇಷ್ಠ ಆಧ್ಯಾತ್ಮಿಕ ಘಟನೆಗಳಲ್ಲ, ಆದರೆ ಬೌದ್ಧಿಕ ಹಾಗೂ ವ್ಯಾವಹಾರಿಕ ಬದಲಾವಣೆಗಳು, ಅವುಗಳಲ್ಲೊಂದು ಧರ್ಮದಲ್ಲಾಗಿತ್ತು, ಇನ್ನೊಂದು ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳು, ರೂಪಗಳು ಹಾಗೂ ಉದ್ದೇಶಗಳು ಇವುಗಳಲ್ಲಾಗಿತ್ತು. ಮತ್ತು ಸರ್ವ ಸಾಧಾರಣ ಪ್ರಜ್ಞೆಯಲ್ಲುಂಟಾದ ಮಾರ್ಪಾಡು ಬೌದ್ಧಿಕ ಹಾಗೂ ಕ್ರಿಯಾಶೀಲವಾದದ್ದಾಗಿತ್ತು, ಆದರೆ ಆಧ್ಯಾತ್ಮಿಕ ಮಾರ್ಪಾಡಾಗಿರಲಿಲ್ಲ. ಆದರೆ ಆ ಸತ್ವ ಪರೀಕ್ಷೆಯಲ್ಲಿ ಆಧ್ಯಾತ್ಮಿಕ ಬೀಜ ಇಲ್ಲವೆ ಉದ್ದೇಶವಿದ್ದರೆ ಆಗ ಮಾನವನೊಬ್ಬನ ಮನಸ್ಸಿನಲ್ಲಿ ಹಾಗೂ ಆತ್ಮದಲ್ಲಿ ಸಂಪೂರ್ಣ ಇಲ್ಲವೆ ಭಾಗಶಃ ದೈವೀ ಪ್ರಜ್ಞೆ ಅದರ ಪ್ರವರ್ತಕ ಇಲ್ಲವೆ ನೇತಾರ ಇವರ ರೂಪದಲ್ಲಿ ಬರುತ್ತದೆ. ಅದು ಅವತಾರ.

**(13/159–60)** **– ಶ್ರೀ ಅರವಿಂದರು**

*

ಮಾನವತೆಯಲ್ಲಿ ದೇವನ ಅವರೋಹಣದ ಮೂಲಕ ದೇವ ಪ್ರಮುಖನಲ್ಲಿ ಮನುಷ್ಯ ಮೇಲಕ್ಕೇರಿ ಹೋಗುವುದಿರದಿದ್ದರೆ, ಧರ್ಮದ ಸಲುವಾಗಿ ಅವತಾರತ್ವ ನಿರುಪಯುಕ್ತ ಗೋಚರ ಸಂಗತಿಯಾಗುತ್ತಿತ್ತು, ಏಕೆಂದರೆ ಕೇವಲ ಧರ್ಮ, ನ್ಯಾಯಪರತೆ ಇಲ್ಲವೆ ಸದ್ಗುಣಗಳ ಮಾನದಂಡಗಳು ಇವೆಲ್ಲವುಗಳನ್ನು ದೈವೀ ಸರ್ವಸಮರ್ಥತೆಯಿಂದ, ಯಾವಾಗಲೂ ಅದರ ಸಾಮಾನ್ಯ ಸಾಧನಗಳ ಮೂಲಕ ಎತ್ತಿಹಿಡಿಯಬಹುದಾಗಿತ್ತು, ಈ ಸಾಧನಗಳೆಂದರೆ ಶ್ರೇಷ್ಠ ಜನರು, ಶ್ರೇಷ್ಠ ಆಂದೋಲನಗಳು, ಋಷಿಗಳು, ರಾಜರು, ಮತ್ತು ಧಾರ್ಮಿಕ ಗುರುಗಳು ಇವರೆಲ್ಲರಾಗಿದ್ದಾರೆ, ಇವರ ಮೂಲಕ ಪ್ರತ್ಯಕ್ಷ ಅವತಾರವಿಲ್ಲದೆ ಅದನ್ನು ಕೈಕೊಳ್ಳಬಹುದಾಗಿತ್ತು.

**(19/148)** **– ಶ್ರೀ ಅರವಿಂದರು**

*

## ಅವತಾರಿ ಪುರುಷನ ಬಾಹ್ಯ ಕ್ರಿಯೆ

ಜಗತ್ತನ್ನು ರಂಗಮಂಚವನ್ನಾಗಿ ಮಾಡಿಕೊಂಡಿರುವ ಹೋರಾಟದ ಮೇಲೆ ಗೀತೆ ಒತ್ತುಕೊಟ್ಟು ಹೇಳುತ್ತದೆ, ಆ ಹೋರಾಟಕ್ಕೆ ಎರಡು ಬದಿಗಳಿವೆ, ವ್ಯಕ್ತಿಯ ಅಂತರಂಗದಲ್ಲಿರುವ ಶತ್ರುಗಳನ್ನು ಕುರಿತು ಆಂತರಿಕ ಹೋರಾಟ: ಆಸೆ, ಅಜ್ಞಾನ, ಅಹಂಮನ್ಯತೆ ಇವುಗಳನ್ನು ಕೊಂದುಹಾಕುವುದು ಒಂದು ವಿಜಯ. ಆದರೆ ಬಾಹ್ಯ

ಹೋರಾಟವೊಂದಿದೆ: ಅದು ಮಾನವರ ಸಮೂಹದಲ್ಲಿ ಧರ್ಮ ಹಾಗೂ ಅಧರ್ಮ ಇವುಗಳ ನಡುವಿರುವ ಹೋರಾಟ. ಧರ್ಮಕ್ಕೆ ಭಗವಂತನ, ಮನುಷ್ಯನಲ್ಲಿರುವ ದೈವಿಕ ಸ್ವಭಾವದ ಮತ್ತು ಅದನ್ನು ಪ್ರತಿನಿಧಿಸುವ ಇಲ್ಲವೆ ಮಾನವ ಜೀವನದಲ್ಲಿ ಅದನ್ನು ಸಿದ್ಧಿಸಿಕೊಳ್ಳಲು ಹೋರಾಡುತ್ತಿರುವವರ ಆಧಾರವಿರುತ್ತದೆ. ಅಧರ್ಮಕ್ಕೆ ರಾಕ್ಷಸರ, ಭೀಕರ ಅಹಂಕಾರವಿರುವ ರಾಕ್ಷಸೀ ಸ್ವಭಾವದವರ ಹಾಗೂ ಅದನ್ನು ಪ್ರತಿನಿಧಿಸುವ ಹಾಗೂ ಅದಕ್ಕೆ ತೃಪ್ತಿ ತಂದುಕೊಡುವ ಜನರ ಆಧಾರವಿರುತ್ತದೆ. ಶ್ರೀಕೃಷ್ಣ ಕೇಂದ್ರ ವ್ಯಕ್ತಿಯಾಗಿರುವ ಮಹಾಭಾರತದಲ್ಲಿಯ ಹೋರಾಟವನ್ನು ಆ ಪ್ರತೀಕದಲ್ಲಿ ಪ್ರತಿನಿಧಿಸಲಾಗಿದೆ. ಧರ್ಮದ ರಾಜ್ಯವನ್ನು ಸ್ಥಾಪಿಸಲು ಹೆಣಗುತ್ತಿದ್ದ ಪಾಂಡವರು ದೇವತೆಗಳ ಮಕ್ಕಳು, ಅವರ ಸಾಮರ್ಥ್ಯಗಳು ಮಾನವ ರೂಪದಲ್ಲಿರುವ ದೇವತೆಗಳ ಸಾಮರ್ಥ್ಯಗಳು, ಅಸುರರಾದ ಅವರ ವಿರೋಧಿಗಳು ದೈತ್ಯರ ಸಾಮರ್ಥ್ಯಗಳ ಅವತಾರಗಳು. ಈ ಬಾಹ್ಯ ಹೋರಾಟಕ್ಕೆ ಸಹಾಯ ನೀಡುವುದಕ್ಕಾಗಿಯೂ ಕೂಡ ಅವತಾರಿ ಪುರುಷ ಬರುತ್ತಾನೆ, ನೇರವಾಗಿ ಇಲ್ಲವೆ ಅಪರೋಕ್ಷವಾಗಿ, ದುಷ್ಟ ಕಾರ್ಯ ಮಾಡುತ್ತಿರುವ ಅಸುರರ ಆಳಿಕೆಯನ್ನು ನಾಶಮಾಡುತ್ತಾನೆ, ಮತ್ತು ಅವರಲ್ಲಿರುವ ಸಾಮರ್ಥ್ಯಗಳನ್ನು ತಗ್ಗಿಸುತ್ತಾನೆ, ಬಲವಂತಕ್ಕೊಳಗಾದ ಧರ್ಮದ ಆದರ್ಶಗಳಿಗೆ ಪುನರುಜ್ಜೀವನ ಕೊಡುತ್ತಾನೆ. ಪೃಥ್ವಿಯ ಮೇಲೆ, ಜನ ಸಮೂಹದಲ್ಲಿ ಸ್ವರ್ಗದ ರಾಜ್ಯ ಹೆಚ್ಚು ಹತ್ತಿರ ಬರುವಂತೆ ಮಾಡಲು ಹಾಗೂ ವ್ಯಕ್ತಿವಿಶಿಷ್ಟ ಮಾನವ ಆತ್ಮದಲ್ಲಿ ಸ್ವರ್ಗದ ರಾಜ್ಯ ನಿರ್ಮಾಣಗೊಳ್ಳುವಂತೆ ಮಾಡಲು ಅವನು ಬರುತ್ತಾನೆ.

**(13/165–66)** **– ಶ್ರೀ ಅರವಿಂದರು**

*

## ಅವತಾರಿ ಪುರುಷನ ಆಗಮನದಿಂದಾಗುವ ಆಂತರಿಕ ಫಲ

ಅವತಾರಿ ಪುರುಷನ ಆಗಮನದಿಂದ ಭಗವಂತನ ಜನ್ಮದ ನಿಜವಾದ ಸ್ವಭಾವವನ್ನು ಮತ್ತು ದೈವೀ ಕಾರ್ಯವನ್ನು ಅರಿತುಕೊಳ್ಳುವವರು ಆಂತರಿಕ ಫಲವನ್ನು ಗಳಿಸುತ್ತಾರೆ: ಅವನನ್ನು ತಮ್ಮ ಪ್ರಜ್ಞೆಯಲ್ಲಿ ಪೂರ್ತಿಯಾಗಿ ತುಂಬಿಕೊಂಡು ತಮ್ಮ ಇಡೀ ಸತ್ತೆಯಿಂದ ಅವನಿಗೆ ಶರಣಾಗತರಾಗುವವರು 'ಮನ್ಮಯಾ ಮಾಮ್ ಉಪಾಶ್ರಿತಃ', ತಮ್ಮ ಜ್ಞಾನದ ಸಿದ್ಧಿಸಿಕೊಳ್ಳುವ ಶಕ್ತಿಯಿಂದ ಪರಿಶುದ್ಧಗೊಂಡವರು, ತಮ್ಮ ನಿಮ್ನತರ ಸ್ವಭಾವದಿಂದ ಬಿಡುಗಡೆ ಪಡೆದವರು ದೈವೀ ಸತ್ತೆಯನ್ನು (ಮದ್ಭಾವಮ್) ಸಿದ್ಧಿಸಿಕೊಳ್ಳುತ್ತಾರೆ. ಮನುಷ್ಯನಲ್ಲಿ ನಿಮ್ನತರ ಸ್ವಭಾವದ ಮೇಲ್ಗಡೆಗಿರುವ ದೈವೀ ಸ್ವಭಾವವನ್ನು ಮತ್ತು ಮುಕ್ತ ಅಹಂಕಾರರಹಿತ



ಅನಾಸಕ್ತ, ಅವ್ಯೈಯಕ್ತಿಕ, ವಿಶ್ವಂಭರ, ದೈವೀ ಪ್ರಕಾಶ ಪ್ರೇಮ ಹಾಗೂ ಸಾಮರ್ಥ್ಯಗಳಿಂದ ಕೂಡಿದ ದೈವೀ ಕಾರ್ಯಗಳೆಂದರೇನೆಂಬುದನ್ನು ತೆರೆದು ತೋರಿಸಲು ಅವತಾರಿ ಪುರುಷ ಬರುತ್ತಾನೆ. ಅವನು ದೈವೀ ವ್ಯಕ್ತಿವಿಶಿಷ್ಟತೆಯ ರೂಪದಲ್ಲಿ ಬರುತ್ತಾನೆ, ಆ ರೂಪ ಮಾನವ ಸತ್ತೆಯ ಪ್ರಜ್ಞೆಯನ್ನು ತುಂಬಿಬಿಡುವುದು ಮತ್ತು ಸೀಮಿತ, ಅಹಂಕಾರದಿಂದ ಕೂಡಿದ ವ್ಯಕ್ತಿವಿಶಿಷ್ಟತೆಯನ್ನು ಸ್ಥಾನಪಲ್ಲಟ–ಗೊಳಿಸುವುದು, ಅದರಿಂದಾಗಿ ಆ ಮಾನವ ವ್ಯಕ್ತಿವಿಶಿಷ್ಟತೆ ಅಹಂಕಾರದಿಂದ ಮುಕ್ತವಾಗಿ ಅನಂತತೆಯಲ್ಲಿ, ವಿಶ್ವಂಭರತೆಯಲ್ಲಿ, ಜನ್ಮದಿಂದ ಮುಕ್ತವಾಗಿ ಅಮರತ್ವದಲ್ಲಿ ಸಾಗಿ ಹೋಗುವುದು. ದೈವೀ ಸಾಮರ್ಥ್ಯ ಹಾಗೂ ದೈವೀ ಪ್ರೇಮಗಳ ರೂಪದಲ್ಲಿ ಅವನು ಬರುತ್ತಾನೆ, ಆ ರೂಪ ಮನುಷ್ಯರನ್ನು ತನ್ನೆಡೆಗೆ ಬರಲು ಕರೆ ಕೊಡುತ್ತದೆ, ಅದರಿಂದಾಗಿ ಅವರು ಆ ರೂಪದಲ್ಲಿ ಆಶ್ರಯ ಪಡೆಯುವಂತಾಗುವುದು ಮತ್ತು ಈ ನಂತರ ಅಸಮರ್ಪಕ ಮಾನವ ಸಂಕಲ್ಪಗಳಲ್ಲಿ ಮತ್ತು ಮಾನವ ಭಯ, ಕ್ರೋಧ ಹಾಗೂ ಭಾವೋದ್ರೇಕಗಳ ಹೋರಾಟದಲ್ಲಿ ಇರದೆ, ಈ ಎಲ್ಲ ಅಶಾಂತತೆಯಿಂದ, ವೇದನೆಯಿಂದ ಮುಕ್ತರಾಗಿ ಭಗವಂತನ ಸ್ಥಿರವಾದ ದಿವ್ಯಾನಂದದಲ್ಲಿ ಜೀವಿಸುವಂತಾಗುವುದು.

**(13/166)** **– ಶ್ರೀ ಅರವಿಂದರು**

*

ಅನುಕಂಪದ ನಿಗೂಢ ನೆಲೆ, ಸದ್ದಡಗಿದ ಅಭಯಸ್ಥಾನವಾಗಿಹ
ಅವಳ ಆಂತರಿಕ ನೆರವು ಸ್ವರ್ಗದ ದ್ವಾರವನು ತೆರೆದಿರಿಸಿತು;
ಅವಳ ದೈವೀ ಪ್ರೇಮ ವಿಶ್ವಕ್ಕಿಂತ ವಿಸ್ತಾರವಾಗಿತ್ತು
ಅವಳ ಏಕೈಕ ಹೃದಯದಲಿ ವಿಶ್ವವಾಶ್ರಯವ ಪಡೆಯಬಹುದಿತ್ತು.

**(ಸಾವಿತ್ರಿ p.15)** **– ಶ್ರೀ ಅರವಿಂದರು**

*

## ಸಾಧಕರ ಪ್ರಶ್ನೆಗಳಿಗೆ ಶ್ರೀ ಅರವಿಂದರ ಉತ್ತರಗಳು

ಅವತಾರತ್ವದ ಗೋಚರ ಸಂಗತಿಗೆ ಎರಡು ಬದಿಗಳಿರುತ್ತವೆ: ಹಿಂದಿರಿಸಿಕೊಂಡಿರುವ ದೈವೀ ಪ್ರಜ್ಞೆ ಮತ್ತು ಉಪಕರಣ ರೂಪದ ವ್ಯಕ್ತಿವಿಶಿಷ್ಟತೆ. ದೈವೀಪ್ರಜ್ಞೆ ಸರ್ವಸಮರ್ಥವಾಗಿರುತ್ತದೆ, ಆದರೆ ಅದು ಪ್ರಕೃತಿಯ ವ್ಯಕ್ತಿವಿಶಿಷ್ಟ ಉಪಕರಣವನ್ನು ಮುಂದಿರಿಸಿರುತ್ತದೆ ಮತ್ತು ಅದನ್ನು ಪ್ರಕೃತಿಯ ಲೀಲೆಯ ನಿಯಮಗಳ ಪ್ರಕಾರ ಉಪಯೋಗಿಸುತ್ತದೆ – ಆದಾಗ್ಯೂ ಕೆಲವೊಮ್ಮೆ ಪ್ರಕೃತಿಯ

ಲೀಲೆಯ ನಿಯಮಗಳನ್ನು ಬದಲು ಮಾಡುವುದೂ ಇರುತ್ತದೆ. ಅವತಾರತ್ವ ಕೇವಲ ಹೊಳೆದು ಮಾಯವಾಗುವ ಪವಾಡವಾಗಿದ್ದರೆ ಅದರ ಉಪಯೋಗ ನನಗಾಗು–ವುದಿಲ್ಲ. ಆದರೆ ಅದು ಪ್ರಕೃತಿಯಲ್ಲಿ ಎಲ್ಲೆಡೆ ಇರುವ ಭಗವಂತನ ವ್ಯವಸ್ಥೆಯ ಪರಸ್ಪರ ಹೊಂದಾಣಿಕೆ ಇರುವ ಭಾಗವಾಗಿದ್ದರೆ ನಾನದನ್ನು ಅರ್ಥಮಾಡಿ–ಕೊಳ್ಳಬಲ್ಲೆ ಮತ್ತು ಸ್ವೀಕರಿಸಬಲ್ಲೆ.

*

ಮಾನವ ಕುಲ ಉಚ್ಚತರ ಪ್ರಜ್ಞೆಯತ್ತ ಸಾಗಿಹೋಗಲು ದೈವೀ ಮಾರ್ಗ–ವೊಂದನ್ನು ತೆರೆದಿರಿಸುವುದಕ್ಕಾಗಿ ಅವತಾರಿ ಪುರುಷ ಬರುತ್ತಾನೆ ಎಂದು ನಾನು ಹೇಳಿರುವೆ – ಯಾರೂ ಆ ದೈವೀ ಮಾರ್ಗವನ್ನು ಅನುಸರಿಸದಿದ್ದರೆ, ಆ ವಿಷಯದ ಬಗೆಗಿನ ನನ್ನ ಕಲ್ಪನೆ, ಕ್ರಿಸ್ತ, ಶ್ರೀಕೃಷ್ಣ ಹಾಗೂ ಬುದ್ಧ ಇವರ ಕಲ್ಪನೆಯೂ ಆಗಿದ್ದ ಅದು ಪೂರ್ತಿ ತಪ್ಪಾದದ್ದು ಇಲ್ಲವೆ ಅವತಾರಿ ಪುರುಷನ ಇಡೀ ಜೀವನ ಹಾಗೂ ಕ್ರಿಯೆ ನಿರರ್ಥಕವಾದದ್ದು. 'ಕ್ಷ'ನ ಪ್ರಕಾರ ಅವತಾರಿ ಪುರುಷನ ಹೋರಾಟಗಳು ಹಾಗೂ ವೇದನೆಗಳು ನೈಜವಾದವುಗಳಲ್ಲ ಮತ್ತು ಎಲ್ಲವೂ ಕಪಟಾಚಾರವಾದುದರಿಂದ ಅವುಗಳನ್ನು ಅನುಸರಿಸುವುದಕ್ಕೆ ಮಾರ್ಗವೆಂಬುದೇ ಇಲ್ಲ, ಸಾಧ್ಯತೆಯೂ ಇಲ್ಲ. ಇಂತಹ ಕಲ್ಪನೆ ಅವತಾರತ್ವದ ಇಡೀ ವಿಚಾರ ನಿರರ್ಥಕವಾಗುವಂತೆ ಮಾಡುತ್ತದೆ – ಅದರಲ್ಲಿ ತರ್ಕವಿಲ್ಲ, ಅದರ ಆವಶ್ಯಕತೆ ಇಲ್ಲ, ಅದಕ್ಕೆ ಅರ್ಥವೂ ಇಲ್ಲ. ಸರ್ವಸಮರ್ಥನಾದ ಭಗವಂತ ಪೃಥ್ವಿಯ ಮೇಲೆ ಬರುವ ತೊಂದರೆ ತೆಗೆದುಕೊಳ್ಳದೆ, ತಾನಿರುವಲ್ಲಿಯೇ ಇದ್ದು, ಜನರನ್ನು ಮೇಲಕ್ಕೆತ್ತಿ ಹಿಡಿಯಬಲ್ಲ. ಅವನು ಮನುಕುಲದ ಭಾರವನ್ನು ತನ್ನ ಮೇಲೆ ಹೊತ್ತುಕೊಳ್ಳಬೇಕು ಮತ್ತು ದೈವೀ ಮಾರ್ಗವನ್ನು ತೆರೆದಿರಿಸಬೇಕು ಎಂದಾದರೆ ಮಾತ್ರ ಅವತಾರತ್ವಕ್ಕೆ ಅರ್ಥವೊಂದಿರುತ್ತದೆ.

*

ಭಗವಂತ ಪೃಥ್ವಿಯ ಸ್ವಭಾವದ ಭಾರವನ್ನು ಕೈಗೆತ್ತಿಕೊಂಡಾಗ ಅದನ್ನು ಸಂಪೂರ್ಣವಾಗಿ, ನಿಷ್ಕಾಪಟ್ಯದಿಂದ ಮತ್ತು ಇಂದ್ರಜಾಲದ ಕೈಚಳಕವನ್ನಾಗಲಿ, ನಟನೆಯನ್ನಾಗಲಿ ಮಾಡದೆ ಹೊತ್ತುಕೊಂಡಿರುತ್ತಾನೆ ಎಂದು ನಾನು ಪುನಃ ಹೇಳುತ್ತೇನೆ. ಯಾವಾಗಲೂ ಆವರಣಗಳೊಳಗಿಂದ ಹೊರಹೊಮ್ಮುವಂತಹದು ಅವನ ಹಿಂದಿದ್ದರೆ, ಅದು ಹೆಚ್ಚಿನ ಪ್ರಮಾಣದಲ್ಲಿದ್ದರೂ, ಸಾರದಲ್ಲಿ ಇತರರ ಹಿಂದಿರುವಂತಹದೇ ಆಗಿರುತ್ತದೆ – ಅದನ್ನು ಜಾಗ್ರತಗೊಳಿಸುವುದಕ್ಕಾಗಿ ಅವನಲ್ಲಿರುತ್ತಾನೆ.



ಆಧ್ಯಾತ್ಮಿಕ ಮಾರ್ಗದಲ್ಲಿ ಸಾಗಲೆಂದು ಉದ್ದೇಶಿತರಾದವರಿಗೆ ಚೈತ್ಯಸತ್ತೆ ಒಂದೇ ಬಗೆಯದನ್ನು ಮಾಡುತ್ತದೆ, ಯೋಗವನ್ನು ಅನುಸರಿಸುವುದಕ್ಕೆ ಜನರು ಅಸಾಧಾರಣರಾಗಿರಬೇಕಿಲ್ಲ. – ಹಾಗೆ ತಿಳಿದುಕೊಳ್ಳುವ ತಪ್ಪನ್ನು ನೀನು ಮಾಡುತ್ತಿರುವಿ, ಕೇವಲ ಅತಿ ಶ್ರೇಷ್ಠರಾದವರಷ್ಟೇ ಆಧ್ಯಾತ್ಮಿಕರಾಗುವರೆಂದು ಬೇಜಾರು ತರಿಸುವಷ್ಟರ ಮಟ್ಟಿಗೆ ಹೇಳುತ್ತಿರುವಿ.

*

ಅವತಾರತ್ವಕ್ಕೆ ಉತ್ಕ್ರಾಂತಿಯ ಸಂಬಂಧವಿರದಿದ್ದರೆ, ಅದಕ್ಕೆ ಅತಿ ಕಡಿಮೆ ಅರ್ಥವಿರುತ್ತದೆ. ಹಿಂದೂ ಧರ್ಮದಲ್ಲಿ ಒಬ್ಬರ ನಂತರ ಒಬ್ಬರಂತೆ ಬರುವ ಅವತಾರಿ ಪುರುಷರ ಶ್ರೇಣಿಯೇ ಸ್ವತಃ ಉತ್ಕ್ರಾಂತಿಯ ದೃಷ್ಟಾಂತವಿದ್ದ ಹಾಗಿದೆ. ಮೊದಲು ಮತ್ಸ್ಯಾವತಾರ, ನಂತರ ಕೂರ್ಮಾವತಾರ, ನರಸಿಂಹಾವತಾರ, ಗಿಡ್ಡಾಕೃತಿಯ ವಾಮನಾವತಾರ – ಪೂರ್ಣ ಅಭಿವೃದ್ಧಿ ಹೊಂದಿರದ ಭೌತಿಕ ಜೀವನವಿದ್ದವನದು, ತನ್ನಲ್ಲಿ ದೈವತ್ವವನ್ನಿಟ್ಟುಕೊಂಡು, ಅಸ್ತಿತ್ವದ ಮೇಲೆ ಪ್ರಭುತ್ವ ಸಿದ್ಧಿಸಿಕೊಂಡವನದು. ಅನಂತರ ರಾಜಸಿಕ, ಸಾತ್ವಿಕ, ನಿರ್ಗುಣ ಅವತಾರಗಳು, ಇವು ಮಾನವ ಅಭಿವೃದ್ಧಿಯನ್ನು ಪ್ರಾಣಿಕ ಹಾಗೂ ರಾಜಸಿಕವಾದುದರಿಂದ ಸಾತ್ವಿಕ ಮನಸ್ಸಿನವರೆಗೆ ಹಾಗೆಯೇ ಆ ಮಟ್ಟದಿಂದ ಅಧಿಮಾನಸ ಅತಿಮಾನವನವರೆಗೆ ಮುನ್ನಡೆಸಿಕೊಂಡು ಹೋಗಿವೆ. ಶ್ರೀಕೃಷ್ಣ, ಬುದ್ಧ ಮತ್ತು ಕಲ್ಕಿ ಆಧ್ಯಾತ್ಮಿಕತೆಯ ಕೊನೆಯ ಈ ಮೂರು ಹಂತಗಳನ್ನು ಚಿತ್ರಿಸುತ್ತಾರೆ. ಬುದ್ಧ ಪರಮೋಚ್ಚ ಮುಕ್ತಿಯಾಚೆಗೆ ಸಾಗಿಹೋಗಲು ಪ್ರಯತ್ನಿಸುತ್ತಾನೆ, ಆದರೆ ಆ ಮುಕ್ತಿ ಇನ್ನೂ ನಕಾರಾತ್ಮಕವಾಗಿದೆ, ಪೃಥ್ವಿಯ ಮೇಲಿನ ಉತ್ಕ್ರಾಂತಿಯನ್ನು ಪೂರ್ತಿಗೊಳಿಸಲು ಸಕಾರಾತ್ಮಕವಾಗಿ ಹಿಂದಿರುಗಿ ಬರುವುದಿರುವುದಿಲ್ಲ. ಕಲ್ಕಿ ಭಗವಂತನ ರಾಜ್ಯವನ್ನು ಪೃಥ್ವಿಯ ಮೇಲೆ ತರುವುದರ ಮೂಲಕ ಹಾಗೂ ವಿರೋಧಿಸುವ ಆಸುರೀ ಶಕ್ತಿಯನ್ನು ನಾಶಮಾಡುವುದರ ಮೂಲಕ ಈ ಕೊರತೆಯನ್ನು ನಿವಾರಿಸಲಿದ್ದಾನೆ. ಆ ಮುನ್ನಡೆಯ ರೀತಿ ಗಮನಾರ್ಹವಾಗಿದೆ ಮತ್ತು ನಿಸ್ಸಂದಿಗ್ಧವಾಗಿದೆ.

ಅವತಾರಿ ಪುರುಷನಾಗಿ ಜೀವಿಸಲು ಬರುವಾಗಿನ ಮಧ್ಯೆ ಹಲವಾರು ಜೀವನಗಳಿರುವುದರ ಬಗ್ಗೆ ಮತ್ತು ಕೇವಲ ಪರಮೋಚ್ಚವಾದ ಜೀವನಗಳನ್ನಷ್ಟೇ ಅಲ್ಲ ಎಂಬುದರ ಬಗ್ಗೆ ಶ್ರೀಕೃಷ್ಣ ಹೇಳಿದುದನ್ನು ನೆನಪಿಗೆ ತಂದುಕೊಳ್ಳಬೇಕು ಮತ್ತು ಎರಡನೆಯದಾಗಿ ಶ್ರೀಕೃಷ್ಣ ತಾನು ಭಗವಂತನೆಂದು ಹೇಳಿದಾಗಲೂ ಗೀತೆಯ ಒಂದು ಶ್ಲೋಕದಲ್ಲಿ ತನ್ನನ್ನು ಒಬ್ಬ ವಿಭೂತಿಯೆಂದೂ ವರ್ಣಿಸಿ ಹೇಳಿದ್ದಾನೆ

"ವೃಷ್ಣೀನಾಮ್ ವಾಸುದೇವಃ". ಆದ್ದರಿಂದ ಬಹಳಷ್ಟು ಜನ್ಮಗಳಲ್ಲಿ ಅವನು ತನ್ನ ಸಂಪೂರ್ಣ ದೈವೀಪ್ರಜ್ಞೆಯ ಮೇಲೆ ಪರದೆಯಿರಿಸಿ ವಿಭೂತಿಯ ರೂಪದಲ್ಲಿ ಪ್ರಕಟನಾಗಿದ್ದನೆಂದು ಭಾವಿಸಬಹುದು. ಅವತಾರತ್ವದ ಉದ್ದೇಶ ಉತ್ಕ್ರಾಂತಿಯನ್ನು ಮುಂದುವರಿಸಿಕೊಂಡು ಹೋಗುವುದಿದೆ ಎಂಬುದನ್ನು ಒಪ್ಪಿಕೊಂಡರೆ ಇದು ಬಹಳ ತರ್ಕಬದ್ಧವಾದದ್ದು ಎನಿಸುತ್ತದೆ.

(ಇನ್ನೊಂದು ಸಂದರ್ಭದಲ್ಲಿ ಶ್ರೀ ಅರವಿಂದರು ಇನ್ನೂ ಹೆಚ್ಚಿನ ಸ್ಪಷ್ಟೀಕರಣ ನೀಡಿದರು.)

ಮುಂದಿನ ಸಾಮಾನ್ಯ ಹೆಜ್ಜೆ ಆಕಾರರಹಿತ ದೈವೀ ಆವಿರ್ಭಾವವಲ್ಲ. ಬುದ್ಧ ಮುಂದಿನ ಮಾರ್ಗವನ್ನು ಅರಸುತ್ತ ಹೋಗಿ ಶ್ರೀ ಶಂಕರಾಚಾರ್ಯರು ಮಾಡಿದಂತೆ ಮುಕ್ತಿಯ ಕ್ರಿಯಾಶೀಲ ಭಾಗವನ್ನು ಅಲಕ್ಷಿಸುವ ತಪ್ಪನ್ನೇ ಮಾಡಿದ. ಹಾಗಾಗಿ ಕಲ್ಕಿ ಆ ತಪ್ಪನ್ನು ತಿದ್ದಬೇಕಾಗಿದೆ.

ನಾನು ಸಹಜವಾಗಿ ಹತ್ತು ಅವತಾರಗಳನ್ನು ಉತ್ಕ್ರಾಂತಿಯ ದಂತಕತೆ ಎನ್ನುವ ರೀತಿಯಲ್ಲಿ ವ್ಯವಹರಿಸುತ್ತಿದ್ದೇನೆ, ಆ ದೃಷ್ಟಿಕೋನದಿಂದ ಮಾತ್ರ ಅದಕ್ಕೆ ವಿವರಣೆ ಕೊಡಬಹುದಾಗಿದೆ. ಆ ವಿಷಯ ಕುರಿತು ನನ್ನದೇ ದೃಷ್ಟಿಕೋನವನ್ನು ಕೊಡುತ್ತಿಲ್ಲ.

ಕಲ್ಕಿ ಕುರಿತು ಇರುವ ವಿವರಗಳಿಗೆ ಬಹಳ ಮಹತ್ವಕೊಡುವ ಆವಶ್ಯಕತೆ ಇಲ್ಲ. – ಅವು ಭವಿಷ್ಯ ಕುರಿತು ಪ್ರವಾದಿಯ ಹೇಳಿಕೆಗಳಿಂದ ಹೆಚ್ಚಾಗಿ ಸಾಂಕೇತಿಕ ರೂಪದವಾಗಿವೆ. ಅಭಿವ್ಯಕ್ತಪಡಿಸಲಾಗಿದ್ದುದು ಬರಲೇಬೇಕಾದುದನ್ನು ಕೇವಲ ಸಾಂಕೇತಿಕ ರೂಪದಲ್ಲಿ ಹೇಳಿದೆ, ಹೆಚ್ಚಿನದೇನನ್ನೂ ಅಲ್ಲ.

*

ನಾನು ಪ್ರಜ್ಞೆಗೆ ಹಾಗೂ ಭಾವನೆಗೆ ತಂದುಕೊಂಡಿರುವ ಏನೋ ಒಂದಿಷ್ಟನ್ನು ಪ್ರಕಟಿಸುವುದನ್ನು ಅರಸುತ್ತಿದ್ದೇನೆ – ಅದು ನನ್ನನ್ನು ಅವತಾರಿ ಪುರುಷನನ್ನಾಗಿ ಮಾಡುತ್ತದೆಯೋ ಇಲ್ಲವೋ ಎಂಬುದರ ಬಗ್ಗೆ ನನಗೆ ಕಿಂಚಿತ್ತೂ ಕಾಳಜಿಯಿಲ್ಲ. ಅದು ನನಗೆ ಸಂಬಂಧಿಸಿದ ಪ್ರಶ್ನೆಯಲ್ಲ. ಪ್ರಕಟಣೆಯ ಅರ್ಥ ಆ ಪ್ರಜ್ಞೆಯನ್ನು ಹೊರತಂದು ಹರಡುವುದಾಗಿದೆ, ಅದರಿಂದಾಗಿ ಇತರರು ಅದರ ಬಗ್ಗೆ ಭಾವನೆ ತಂದುಕೊಳ್ಳಬಹುದು, ಅದರಲ್ಲಿ ಪ್ರವೇಶಿಸಬಹುದು ಹಾಗೂ ಜೀವಿಸಬಹುದು.

**(22/408–09, 412, 401–03; 26/150)** **– ಶ್ರೀ ಅರವಿಂದರು**

*



## ಶ್ರೀ ಅರವಿಂದರನ್ನು ಕುರಿತು ಶ್ರೀಮಾತೆಯವರು

ಜಗತ್ತಿನ ಇತಿಹಾಸದಲ್ಲಿ ಶ್ರೀ ಅರವಿಂದರು ಪ್ರತಿನಿಧಿಸುತ್ತಿರುವುದು ಒಂದು ಬೋಧನೆಯನ್ನಲ್ಲ, ದಿವ್ಯಜ್ಞಾನವನ್ನೂ ಅಲ್ಲ, ಅದು ಪರಮೋಚ್ಚನಿಂದ ನೇರವಾಗಿ ಬಂದ ಒಂದು ನಿರ್ಧಾರಕ ಕ್ರಿಯೆ.

*

ಮನುಷ್ಯನ ಸೃಷ್ಟಿ ನಿನ್ನೆಯದು.

ಶ್ರೀ ಅರವಿಂದರು ನಾಳಿನ ಸೃಷ್ಟಿ ಕುರಿತು ಎಂದರೆ ಅತಿಮಾನಸ ಸತ್ತೆಯ ಆಗಮನ ಕುರಿತು ಘೋಷಿಸಿ ಹೇಳಲು ಬಂದಿದ್ದರು.

*

ಶ್ರೀ ಅರವಿಂದರು ಪೃಥ್ವಿಯ ಮೇಲೆ ಅತಿಮಾನಸ ಜಗತ್ತಿನ ಪ್ರಕಟಣೆಯನ್ನು ಕುರಿತು ಘೋಷಿಸಿ ಹೇಳಲು ಬಂದಿದ್ದರು. ಈ ಪ್ರಕಟಣೆಯನ್ನು ಕುರಿತು ಅವರು ಕೇವಲ ಘೋಷಣೆಯನ್ನಷ್ಟೇ ಮಾಡಲಿಲ್ಲ, ಆದರೆ ಅತಿಮಾನಸ ಶಕ್ತಿಯ ಒಂದು ಭಾಗವನ್ನು ತಮ್ಮ ದೇಹದಲ್ಲಿ ಧಾರಣೆ ಮಾಡಿದ್ದರು. ಅದನ್ನು ಪ್ರಕಟಿಸುವುದಕ್ಕಾಗಿ ಮನುಷ್ಯ ಮಾಡಿಕೊಳ್ಳಬೇಕಾದ ತಯಾರಿಯನ್ನು ತಮ್ಮ ಉದಾಹರಣೆಯ ಮೂಲಕ ತೋರಿಸಿಕೊಟ್ಟರು.

*

ಸಂಭೂತಿ (becoming) ಯ ಅನಂತತೆಯಲ್ಲಿ ಪ್ರತಿಯೊಬ್ಬ ಅವತಾರಿ ಪುರುಷ ಕೇವಲ ಘೋಷಣೆ ಮಾಡುವವನಾಗಿರುತ್ತಾನೆ, ಹೆಚ್ಚು ಪರಿಪೂರ್ಣ ಸಿದ್ಧಿಯ ಹರಿಕಾರ (forerunner) ನಾಗಿರುತ್ತಾನೆ.

ಆದಾಗ್ಯೂ ಭವಿಷ್ಯತ್ತಿನ ಅವತಾರಿ ಪುರುಷನನ್ನು ವಿರೋಧಿಸಿ ಗತಕಾಲದ ಅವತಾರಿ ಪುರುಷರನ್ನು ದೈವೀಕರಿಸಿ ಪೂಜಿಸುವ ಪ್ರವೃತ್ತಿ ಜನರಲ್ಲಿರುತ್ತದೆ.

ಈಗ ಮತ್ತೆ ಶ್ರೀ ಅರವಿಂದರು ನಾಳಿನ ಸಿದ್ಧಿ ಕುರಿತು ಘೋಷಿಸಲು ಬಂದಿದ್ದಾರೆ, ಅವರ ಸಂದೇಶಕ್ಕೆ ಹಿಂದಿನವರು ಎದುರಿಸುತ್ತಿದ್ದಂತಹ ವಿರೋಧವೇ ಇದೆ.

ಆದರೆ ಅವರು ತೆರೆದಿರಿಸಿ ತೋರಿಸಿಕೊಡುವ ಸತ್ಯವನ್ನು ನಾಳಿನ ದಿನಗಳು ಸಿದ್ಧಮಾಡಿ ತೋರಿಸುತ್ತವೆ ಮತ್ತು ಅವರ ಕಾರ್ಯ ಕೈಗೂಡುತ್ತದೆ.

**(13/4, 19–20, 17, 22)** **– ಶ್ರೀಮಾತೆ**

*

## ಶ್ರೀ ಅರವಿಂದರ ಮಹಾಸಮಾಧಿಯನ್ನು ಕುರಿತು ಶ್ರೀಮಾತೆಯವರು

ನಿಮ್ಮ ಕಾರ್ಯ ಸಿದ್ಧಿಸಿಕೊಳ್ಳುವವರೆಗೆ ನೀವು ನಮ್ಮೊಡನೆ ಇರುವಿರೆಂದು, ಮಾರ್ಗದರ್ಶನ ಮಾಡುವ, ಜ್ಞಾನೋದಯವನ್ನುಂಟು ಮಾಡುವ ರೂಪದಲ್ಲಿ ಮಾತ್ರವಲ್ಲ ಕ್ರಿಯೆಯಲ್ಲಿ ಕ್ರಿಯಾಶೀಲ ದೈವೀ ಸಾನ್ನಿಧ್ಯದ ರೂಪದಲ್ಲಿ ನಮ್ಮೊಡನೆ ಇರುವಿರೆಂದು ನನಗೆ ಇಂದು ಬೆಳಗಿನ ಜಾವದಲ್ಲಿ ಭರವಸೆ ನೀಡಿದ್ದೀರಿ. ನಿಮ್ಮೆಲ್ಲ ರೀತಿಯಿಂದ ಇಲ್ಲಿರುವಿರೆಂದು, ಪೃಥ್ವಿ ಪರಿವರ್ತನೆ ಹೊಂದುವವರೆಗೆ ಅದನ್ನು ಬಿಟ್ಟು ತೆರಳುವುದಿಲ್ಲವೆಂದು, ತಪ್ಪು ತಿಳಿವಳಿಕೆಗೆ ಆಸ್ಪದ ಕೊಡದ ರೀತಿಯಲ್ಲಿ, ವಚನವಿತ್ತಿದ್ದೀರಿ. ಈ ಅದ್ಭುತ ಸಾನ್ನಿಧ್ಯಕ್ಕೆ ನಾವು ಯೋಗ್ಯರಾಗಿರುವಂತೆ ಮತ್ತು ಈ ನಂತರ ನಮ್ಮಲ್ಲಿರುವ ಎಲ್ಲವೂ ಏಕಾಗ್ರಗೊಂಡಿರುವಂತೆ ಮತ್ತು ನಿಮ್ಮ ಘನತೆವೆತ್ತ ಕಾರ್ಯಕ್ಕಾಗಿ ಏಕೈಕ ಸಂಕಲ್ಪವುಳ್ಳವರಾಗಿ ಹೆಚ್ಚು ಹೆಚ್ಚಾಗಿ, ಪರಿಪೂರ್ಣವಾಗಿ ಮುಡಿಪಾಗಿರಿಸಿಕೊಂಡವರಾಗುವಂತೆ ಅನುಗ್ರಹಿಸಿರಿ.

ಡಿ. 8 ರಂದು ನಾನವರನ್ನು ತಮ್ಮ ದೇಹದಲ್ಲಿ ಮರಳಿ ಬರಬೇಕೆಂದು ಕೇಳಿಕೊಂಡಾಗ ಅವರು “ಉದ್ದೇಶಪೂರ್ವಕವಾಗಿ ನಾನು ಈ ದೇಹ ತ್ಯಜಿಸಿದ್ದೇನೆ, ನಾನದರಲ್ಲಿ ಮರಳಿ ಬರುವುದಿಲ್ಲ. ಅತಿಮಾನಸ ರೀತಿಯಿಂದ ನಿರ್ಮಾಣಗೊಂಡ ಮೊದಲ ಅತಿಮಾನಸ ದೇಹದಲ್ಲಿ ಮತ್ತೆ ನಾನು ಪ್ರಕಟನಾಗುತ್ತೇನೆ” ಎಂದು ಹೇಳಿದರು.

(Dec. 7, 1950)

*

ಶ್ರೀ ಅರವಿಂದರು ಸಿದ್ಧಿಯನ್ನು ತಮ್ಮದೇ ದೇಹದಲ್ಲಿ ಪಡೆಯುವುದನ್ನು ತ್ಯಜಿಸಿ, ಸಾಮೂಹಿಕ ಸಿದ್ಧಿಯು ಬೇಗ ಬರಲೆಂಬ ನಿಸ್ವಾರ್ಥದ ಉದ್ದೇಶದಿಂದ ತಮ್ಮ ದೇಹವನ್ನು ಬಿಟ್ಟುಕೊಡಬೇಕಾಯಿತು. ಪೃಥ್ವಿ ಹೆಚ್ಚು ಸ್ಪಂದನಶೀಲವಾಗಿದ್ದರೆ ಇದು ನಿಶ್ಚಿತವಾಗಿ ಅವಶ್ಯವಾಗುತ್ತಿರಲಿಲ್ಲ.

*

ನೀನು ಆಶ್ರಮದಲ್ಲಿ ವಿತರಿಸುತ್ತಿರುವ ಕರಪತ್ರದ ಅನುವಾದದ ಬಗ್ಗೆ ಕೇಳಿ



ನನಗೆ ಆಘಾತವಾಯಿತು. ನಮಗಾಗಿ ಇಡಿಯಾಗಿ ತ್ಯಾಗ ಮಾಡಿದ ನಮ್ಮ ಪ್ರಭುವಿನ ಬಗ್ಗೆ ನಿನ್ನಲ್ಲಿ ತಿಳಿವಳಿಕೆಯ, ಗೌರವವಿರುವುದರ ಕೊರತೆ ಇಷ್ಟರ ಮಟ್ಟಿಗೆ ಇರಬಹುದೆಂದು ನಾನೆಂದೂ ಕಲ್ಪನೆ ಮಾಡಿಕೊಂಡಿರಲಿಲ್ಲ. ಶ್ರೀ ಅರವಿಂದರು ಶಕ್ತಿಗುಂದಿರಲಿಲ್ಲ. ತಮ್ಮ ದೇಹ ತ್ಯಜಿಸುವ ಕೆಲವು ಗಂಟೆಗಳ ಮೊದಲು ಅವರು ತಮ್ಮ ಹಾಸಿಗೆಯ ಮೇಲಿಂದ ಎದ್ದುಬಂದು ಆರಾಮ ಕುರ್ಚಿಯಲ್ಲಿ ಕುಳಿತು–ಕೊಂಡರು ಮತ್ತು ತಮ್ಮ ಸುತ್ತಲಿದ್ದವರ ಜೊತೆಗೆ ಮುಕ್ತವಾಗಿ ಮಾತನಾಡಿದರು. ಶ್ರೀ ಅರವಿಂದರು ತಮ್ಮ ದೇಹ ತ್ಯಜಿಸುವ ಒತ್ತಾಯಕ್ಕೊಳಗಾಗಿರಲಿಲ್ಲ, ಅದಕ್ಕೆ ಕಾರಣಗಳು ಎಷ್ಟೊಂದು ಘನತೆವೆತ್ತವುಗಳಾಗಿವೆಯೆಂದರೆ ಅವು ಮಾನವ ಮನೋಧರ್ಮದ ಆಚೆಗಿವೆ.

*

**ಪ್ರಶ್ನೆ :** *ಶ್ರೀ ಅರವಿಂದರ ಜನ್ಮ ಕುರಿತು ಅದು ವಿಶ್ವದ ಇತಿಹಾಸದಲ್ಲಿ ಸನಾತನವಾದದ್ದು ಎಂದು ನೀವು ಹೇಳಿರುವಿರಿ. ‘ಸನಾತನ’ದ ನಿಖರವಾದ ಅರ್ಥವೇನು?*

**ಶ್ರೀಮಾತೆ :** ಆ ವಾಕ್ಯವನ್ನು ಪ್ರಜ್ಞೆಯ ನಾಲ್ಕು ಆರೋಹಣದ ಕ್ರಮದಲ್ಲಿರುವ ಸ್ತರಗಳಿಗನುಗುಣವಾಗಿ ನಾಲ್ಕು ಭಿನ್ನ ರೀತಿಗಳಲ್ಲಿ ಅರ್ಥಮಾಡಿಕೊಳ್ಳಬಹುದು:

1. ಭೌತಿಕವಾಗಿ ಆ ಜನ್ಮದ ಪರಿಣಾಮ ಜಗತ್ತಿಗೆ ಸನಾತನ (ಶಾಶ್ವತ) ಮಹತ್ವವನ್ನು ಪಡೆದದ್ದಾಗುವುದು.
2. ಮಾನಸಿಕವಾಗಿ ವಿಶ್ವಂಭರ ಇತಿಹಾಸದಲ್ಲಿ ಸನಾತನವಾಗಿ (ಶಾಶ್ವತವಾಗಿ) ನೆನಪಿನಲ್ಲಿ ಉಳಿಯುವಂತಾಗುವುದು.
3. ಚೈತ್ಯಾತ್ಮಿಕವಾಗಿ ಪೃಥ್ವಿಯ ಮೇಲೆ ಆ ಜನ್ಮ ಯುಗಯುಗಾಂತರಗಳಲ್ಲಿ ಮತ್ತೆ ಮತ್ತೆ ಆಗುವಂತಹದು.
4. ಆಧ್ಯಾತ್ಮಿಕವಾಗಿ ಅದು ಪೃಥ್ವಿಯ ಮೇಲೆ ‘ಸನಾತನ’ನ ಜನ್ಮ.

**(13/6–10)** **– ಶ್ರೀಮಾತೆ**

*

### (ಸಮಾಧಿಯ ಮೇಲೆ ಕೆತ್ತನೆಯಲ್ಲಿ ಬರೆದದ್ದು)

“ನಮ್ಮ ದೈವೀ ಪ್ರಭುವಿನ ಹೊರ ಆವರಣವಾಗಿದ್ದ ನಿಮಗೆ, ನಮ್ಮ ಅನಂತ ಕೃತಜ್ಞತೆಗಳು. ನಮಗಾಗಿ ಎಷ್ಟೊಂದು ಕಾರ್ಯ ಮಾಡಿದ, ಹೋರಾಡಿದ,

ವೇದನೆಗೊಳಗಾದ, ಭರವಸೆ ತಾಳಿದ, ಎಷ್ಟೊಂದನ್ನು ಸಹಿಸಿಕೊಂಡ ನಿಮ್ಮೆದುರಿಗೆ, ಎಲ್ಲವನ್ನೂ ಸಂಕಲ್ಪಿಸಿದ, ಎಲ್ಲದಕ್ಕಾಗಿ ಪ್ರಯತ್ನಿಸಿದ, ತಯಾರು ಮಾಡಿದ ಹಾಗೂ ಸಿದ್ಧಿಸಿಕೊಂಡ ನಿಮ್ಮೆದುರು ನಾವು ಬಾಗಿ ನಮಸ್ಕರಿಸುತ್ತೇವೆ ಮತ್ತು ಒಂದು ಕ್ಷಣ ಮಾತ್ರಕ್ಕಾದರೂ, ನಾವು ನಿಮಗೆ ಋಣಿಯಾಗಿರುವುದನ್ನು ಎಂದಿಗೂ ಮರೆಯದಂತಾಗಲಿ ಎಂದು ಮೊರೆಯಿಡುತ್ತೇವೆ."

**(13/7)** **– ಶ್ರೀಮಾತೆ**

(ಡಿ.9, 1950)

*

## ಶ್ರೀ ಅರವಿಂದರ ದೇಹತ್ಯಾಗ
## – ಅದರ ಆಂತರಿಕ ಪ್ರಾಮುಖ್ಯತೆ ಮತ್ತು ಪರಿಣಾಮ

– ಅಮಲ ಕಿರಣ

ಶ್ರೀ ಅರವಿಂದರ ನಿರ್ಧಾರಕವಾದ ಜೀವನ ಚರಿತ್ರೆಯನ್ನು ಬರೆಯುವ ಕಾರ್ಯವನ್ನು ಕೈಗೆತ್ತಿಕೊಂಡಾಗ "ನನ್ನ ಜೀವನ ಜನರು ನೋಡಿರಬಹುದಾದಂತೆ ಮೇಲ್ಮೈಯಲ್ಲಿ ಇರದೆ ಇರುವುದರಿಂದ ಅದನ್ನು ಯಾರೂ ಬರೆಯಲಾರರು" ಎಂದು ಶ್ರೀ ಅರವಿಂದರು ಹೇಳಿದ್ದರು. ಅದರಲ್ಲಿ ಸಂಶಯವಿಲ್ಲ. ಇಂಗ್ಲಂಡಿನಲ್ಲಿ ಅವರ ಪ್ರತಿಭಾಪೂರ್ಣ ಶಿಕ್ಷಣದ ಅವಧಿ, ಭಾರತದಲ್ಲಿ ಅವರು ಉತ್ಕಟ ಉತ್ಸಾಹದಿಂದ ರಾಜಕೀಯದಲ್ಲಿ ತೊಡಗಿಕೊಂಡಿದ್ದ ಅವಧಿ ಇವುಗಳ ಹೊರತಾಗಿ ಅವರ ಜನನ, ಕಟ್ಟಕಡೆಯ ಅರ್ಥದಲ್ಲಿ, ಉದ್ದೇಶದಲ್ಲಿ ಹಾಗೂ ಸಿದ್ಧಿಸಿಕೊಳ್ಳುವುದರಲ್ಲಿ ಆಂತರಿಕವಾಗಿ ಆಳಾತಿ ಆಳದ್ದಾಗಿತ್ತು, ಬಾಹ್ಯ ಘಟನೆಗಳಿಗೆ ಮನಶ್ಶಾಸ್ತ್ರೀಯ ವಿವರಣೆ ಕೊಡುವುದರ ಮೂಲಕ ಆ ಆಂತರಿಕ ಜೀವನದ ರಹಸ್ಯವನ್ನು ಬಿಡಿಸಿ ಹೇಳಲಾಗದು. ಅದನ್ನು ಕುರಿತು ಸ್ವಲ್ಪಮಟ್ಟಿಗಿನ ನೋಟವನ್ನು ದೊರಕಿಸಲು ನಾವು ಸಾಂಪ್ರದಾಯಿಕ ಆಧ್ಯಾತ್ಮಿಕ ಸಿದ್ಧಿಯ ವಿಶಾಲ ರಹಸ್ಯಗಳ ಬಗೆಗಷ್ಟೇ ಅಲ್ಲದೆ ಶ್ರೀ ಅರವಿಂದರು ಅತಿಮನಸ್ಸೆಂದು ಹೆಸರು ನೀಡಿದ, ಪೃಥ್ವಿಯನ್ನು ಪರಿವರ್ತನೆಗೊಳಪಡಿಸುವ, ಕಣ್ಣು ಕುಕ್ಕಿಸುವ ಹೊಸ ಪ್ರಕಾಶದ ಬಗೆಗೂ ಕೂಡ ಒಂದು ಸುಳಿವನ್ನು ನಾವು ಹಿಡಿದಿಟ್ಟುಕೊಳ್ಳಬೇಕು. ಆ ಅತಿಮನಸ್ಸನ್ನು ವೇದನೆಗೊಳಗಾದ ಮಾನವ ಕುಲಕ್ಕಾಗಿ ಇಡಿಯಾಗಿ ಕೆಳಗಿಳಿಸಿ ತರಲು ಅವರು ನಲವತ್ತು ವರ್ಷಗಳ ಕಾಲ ಪ್ರಯತ್ನ ಮಾಡಿದರು. ಅವರ ಜೀವನವಿದ್ದ ಹಾಗೆ, ಅವರ ಮರಣ ಕುರಿತು ಜಗತ್ತು ನೀಡಿದ ಗೋಚರ



ಸಂಗತಿಯೂ ಕೂಡ ರಹಸ್ಯಮಯವಾಗಿದೆ, ಶ್ರೀ ಅರವಿಂದರು ಮರಣ ಹೊಂದುವುದು ಅವರ ಜೀವನದಷ್ಟೇ ಆಂತರಿಕ ಹಾಗೂ ಗಾಢವಾಗಿರದೆ ಇರಲು ಸಾಧ್ಯವಿಲ್ಲ.

ಮರಣ ಕುರಿತಾಗಿರುವ ಸಾಮಾನ್ಯ ಅರ್ಥದಲ್ಲಿ ಯಾವ ಯೋಗಿಯೂ ದೇಹತ್ಯಾಗ ಮಾಡುವುದಿಲ್ಲ. ಅವನ ಪ್ರಜ್ಞೆ ಯಾವಾಗಲೂ ಭೌತಿಕ ದೇಹದ ಸೂತ್ರವನ್ನು ದಾಟಿ ಆಚೆಗಿರುತ್ತದೆ. ಅವನು ಜೀವಿಸುವ ಕಾಲದಲ್ಲಿರುವ ಅವನ ಭೌತಿಕ ಹೊದಿಕೆಯಾಚೆಗೆ ಶ್ರೇಷ್ಠ ರೀತಿಯಲ್ಲಿರುತ್ತಾನೆ ಮತ್ತು ಮನುಕುಲಕ್ಕಾಗಿ ಅವನು ಕೈಕೊಂಡ ಕಾರ್ಯ, ಸಾರಭೂತವಾಗಿ, ಅವನ ಮುಕ್ತ ಹಾಗೂ ಸಮೃದ್ಧ ಆತ್ಮದ ಮೂಲಕ ನಡೆದಿರುತ್ತದೆ, ಮಿತಿರಹಿತವಾದ ಸನಾತನ ದೈವೀ ಸತ್ತೆಯಲ್ಲಿ ಅಮರತ್ವದ ಪೂರ್ಣ ಅರಿವಿದ್ದ ಆತ್ಮಕ್ಕೆ ಜೀವನ ಹಾಗೂ ಮರಣ ಇವು ಚಿಕ್ಕ ಮುಖವಾಡಗಳು. ಶ್ರೀ ಅರವಿಂದರಂತಹ ಯೋಗದ ಪ್ರಭುವಿನ ದೇಹತ್ಯಾಗಕ್ಕೆ 'ಮರಣ' ಎಂಬ ಪದ ಎಳ್ಳಷ್ಟೂ ಅನ್ವಯವಾಗುವುದಿಲ್ಲ. ಏಕೆಂದರೆ ಪರಿವರ್ತನೆಗೊಳಪಡಿಸುವ ಅತಿಮಾನಸದ ಸಾಮರ್ಥ್ಯ ಅವರ ದೇಹದ ಜೀವಕೋಶಗಳಲ್ಲಿ ಕಾರ್ಯನಿರತವಾಗಿತ್ತು ಎಂಬುದು ಸುಪರಿಚಿತ ಸಂಗತಿ. ಆ ಸಾಮರ್ಥ್ಯಕ್ಕೆ ಮನಶ್ಶಾಸ್ತ್ರೀಯವಾದುದಕ್ಕಿಂತ ಕಡಿಮೆಯಲ್ಲದ ರೀತಿಯಲ್ಲಿ ಭೌತಿಕವಾದದ್ದರ ಮೇಲೆಯೂ ಕೂಡ ಅಧಿಕಾರವಿತ್ತು. ಇದಕ್ಕೆ ಪ್ರಮಾಣವೆಂದು ಅವರ ನೂರಾರು ಶಿಷ್ಯಂದಿರು ತಮ್ಮ ರೋಗಗಳ ಮೇಲೆ ಅದರ ವಾಸಿಮಾಡುವ ಪ್ರಭಾವವಿದ್ದುದನ್ನು ಹೇಳಬಲ್ಲರು. ಈ ಪರಿಣಾಮಕಾರಿತ್ವ ಶ್ರೀ ಅರವಿಂದರ ಆಶ್ರಮಕ್ಕಷ್ಟೇ ಸೀಮಿತವಾಗಿರಲಿಲ್ಲ. ಭಾರತದಲ್ಲಿರುವ ತಂತಿಸುದ್ದಿ(telegram) ಕಳಿಸುವ ಎಲ್ಲ ಕಚೇರಿಗಳು ಸಾಕ್ಷಿ ನೀಡಬಹುದಾದ ವಿಷಯಗಳಿವೆ: ನಾನಾ ಬಗೆಯ ರೋಗಗಳಿಗಾಗಿ (ವೈದ್ಯಕೀಯ ಶಾಸ್ತ್ರವನ್ನು ಸೋಲಿಸುವಂತಹ ರೋಗಗಳಿಗಾಗಿಯೂ ಕೂಡ) ಚಿಕಿತ್ಸೆ ಪಡೆಯಲು ದಿನಾಲು ತಂತಿಸುದ್ದಿಯ ಮೂಲಕ ಶ್ರೀ ಅರವಿಂದರಿಗೆ ಬೇಡಿಕೆಗಳು ಬರುತ್ತಿದ್ದವು ಮತ್ತು ನಂತರ ಆಧ್ಯಾತ್ಮಿಕ ಉಪಾಯಗಳ ಮೂಲಕ ರೋಗಮುಕ್ತರಾದುದಕ್ಕೆ ಧನ್ಯವಾದಗಳನ್ನರ್ಪಿಸುವ ಸಂದೇಶಗಳು ತಂತಿಸುದ್ದಿಯ ಮೂಲಕ ಬರುತ್ತಿದ್ದವು. ಅತಿಮನಸ್ಸಿನ ಯೋಗಿಯೂ, ಆಂತರಿಕ ಹಾಗೂ ಬಾಹ್ಯ ಸತ್ತೆಯೊಳಗೆ ಅವರೋಹಣ ಮಾಡುವಂತಹರೂ, ಪೃಥ್ವಿಯ ಮೇಲೆ ದೈವೀ ಜೀವನವನ್ನು ಮತ್ತು ಅದರ ಜೊತೆಗೆ ಆಚೆಗಿರುವ ಅನಂತ ಅಮರತ್ವವನ್ನು ತರುವಂತಹರೂ ಆಗಿದ್ದ ಅವರು ದೀರ್ಘ ವಯಸ್ಸಿನ ಕಾರಣದಿಂದಾಗಿ ಮತ್ತು ಭೌತಿಕ ಕಾರಣಗಳಿಂದಾಗಿ ಮರಣ

ಹೊಂದಿದರೆಂದು ಹೇಳಲಾಗದು. ಕೇವಲ ವೈದ್ಯಕೀಯವಾದ ಚಿತ್ರಣ ಏನೇ ಇರಲಿ, ಅದರ ಹಿಂದೆ ಅತ್ಯಂತ ಮಹತ್ವದ, ಅಳತೆಗೆ ಸಿಗದ ಅವರ ಮಹತ್ತರ ಭೌತಿಕ ಜೀವನಕ್ಕಿಂತಲೂ ಹೆಚ್ಚಿನದಾದ ಆಧ್ಯಾತ್ಮಿಕ ಸಿದ್ಧಿಯ ಸಮಗ್ರ ಪ್ರಾಮುಖ್ಯತೆ ಇರಲೇಬೇಕು.

ಪವಾಡ ಸದೃಶವಾಗಿ ಮಾಯವಾಗುವ ಜಾದುವಿನ ಸ್ಥಾನದಲ್ಲಿ ವೈದ್ಯಕೀಯ ಚಿತ್ರಣವೊಂದಿರಬೇಕು ಎಂಬುದು ಶ್ರೀ ಅರವಿಂದರ ಯೋಗದೊಂದಿಗೆ ನಿಖರವಾಗಿ ಹೊಂದಿಕೊಳ್ಳುವ ವಿಷಯ. ಅವರ ಯೋಗ ಉತ್ಕ್ರಾಂತಿಯ ಹಾಗೂ ಮುಂದುವರಿಕೆಯ ಒಂದು ವಿಧಾನ. ಅದರ ಗುರಿ ಮನುಷ್ಯನ ಸ್ವಭಾವದ ಕಣವನ್ನು ಬದಲು ಮಾಡದೆ ಉಳಿಸಿದ ದೈವೀ ಗುಣಗಳನ್ನು ದಿಗ್ಭ್ರಾಂತಿಗೊಳಿಸುವ ರೀತಿಯಲ್ಲಿ ಮೇಲಿರಿಸುವುದಾಗಿರಲಿಲ್ಲ, ಆದರೆ ಆಧ್ಯಾತ್ಮಿಕವಾಗಿ ವ್ಯವಸ್ಥಿತ ಅಂಗಗಳಿಂದ ರಚಿತವಾದ ಪ್ರಕಾಶಮಯ ಬೆಳವಣಿಗೆಗಾಗಿ ಉಚ್ಚತರ ಸ್ವಭಾವವನ್ನು ಸಾಮಾನ್ಯ ಸ್ವಭಾವ ಅರಗಿಸಿಕೊಳ್ಳುವಂತಹದು, ಅದ್ಭುತವಾದ ಆದಾಗ್ಯೂ ವಿಲಕ್ಷಣ ವರ್ತನೆಯದಾಗಿರದ ರೂಪಪರಿವರ್ತನೆ ಇರುವಂತಹದು, ಪೃಥ್ವಿಯ ಉತ್ಕ್ರಾಂತಿಗೆ ಪರಕೀಯವಾಗಿರದೆ ಇದ್ದುದನ್ನು ಒಂದು ಜೀವನ ಕಾಲದಲ್ಲಿ ಗಾಢವಾಗಿ ಕಾರ್ಯಗತಗೊಳಿಸಿಕೊಳ್ಳುವಂತಹದು ಆಗಿರಬೇಕಾಗಿತ್ತು. ಆ ಉತ್ಕ್ರಾಂತಿಯ ಆಳಾತಿ ಆಳದ ಅರ್ಥದಲ್ಲಿ ಅದರ ತೆರೆದಿರಿಸುವಿಕೆ ವಿಷಯಗಳ ತರ್ಕಬದ್ಧತೆಯಲ್ಲಿರುವಂತಹದು, ಅಂತಹದು ಸಾಮಾನ್ಯವಾಗಿ ಯುಗಗಳ ಕಾಲ ತೆಗೆದುಕೊಳ್ಳಬಹುದಾಗಿತ್ತು. ಶ್ರೀ ಅರವಿಂದರ ಅತಿಮಾನಸ ಯೋಗದಲ್ಲಿ ಉತ್ಕ್ರಾಂತಿಪರವಾದದ್ದು ಯಾವಾಗಲೂ ಕ್ರಾಂತಿಕಾರಕವಾದುದರೊಡನೆ ಬೆಸುಗೆ ಹೊಂದಿರುತ್ತಿತ್ತು. ಕಾವ್ಯದಲ್ಲಿ ಹಾಗೂ ಗದ್ಯದಲ್ಲಿ ಅವರು ತೋರಿಸಿದ ಕೆಚ್ಚೆದೆ ಯಾವಾಗಲೂ ಹೃದಯಂಗಮವಾಗಿರುತ್ತಿತ್ತು, ಸರಳತೆ ಹಾಗೂ ಯುಕ್ತತೆಗಳಿಂದ ತುಂಬಿಕೊಂಡಿರುತ್ತಿತ್ತು, ವೈಭವೋಪೇತವಾಗಿ ಸ್ವಭಾವಕ್ಕೆ ಹೊಂದಿಕೊಳ್ಳು–ವಂತಹದಾಗಿತ್ತು, ಅದನ್ನು ಮೀರಿ ನಡೆಯುವಂತಹದಾಗಿರಲಿಲ್ಲ, ಹಾಗೆಯೇ ದೇಹತ್ಯಾಗದ ಅವರ ಸಾಹಸ ಕೂಡ ಅತ್ಯಂತ ಅಸಾಮಾನ್ಯವೆನಿಸುವಂತಹದು ಆಗಿರುವುದು ಸಾಧ್ಯವಿರಲಿಲ್ಲ, ಆದರೆ ಅದರ ಗಾಢ ಭಾವ, ಅಸಾಧಾರಣ ರೀತಿ ಇವೆಲ್ಲವುಗಳಿದ್ದಾಗಲೂ, ನಿಶ್ಚಲತೆಯತ್ತ ಹಾಗೂ ಛಾಯೆಯಡಿ ಸಾಗುವಾಗ ಸಾಮಾನ್ಯ ಹೋಲಿಕೆಯನ್ನು ಅದು ಕೊಂಡೊಯ್ಯಬೇಕಾಗಿತ್ತು.

ಶ್ರೀ ಅರವಿಂದರು ಭೌತಿಕ ಕಾರಣಗಳ ಪರಿಣಾಮದಿಂದಾಗಿ ವಿಧಿವಶರಾಗಲಿಲ್ಲ ಎಂದು ಪ್ರತಿಪಾದಿಸುವ ವಿಷಯವನ್ನು ವೈದ್ಯಕೀಯ ವಿಜ್ಞಾನ ವಿರೋಧಿಸಿ ಕೊಡುವ



ಕಾರಣಗಳು ಆ ವಿಷಯಕ್ಕೆ ಹತ್ತಿರವಾದವುಗಳಲ್ಲ. ಪ್ರತಿಪಾದನೆ ಮಾಡುತ್ತಿರುವ ಈ ವಿಷಯಕ್ಕೆ ಈಗ ನಾವು ಸೇರಿಸಬಹುದಾದುದು ಹೀಗಿದೆ: ಆ ಪ್ರತಿಪಾದನೆಗೆ ಆಧಾರ ಶ್ರೀ ಅರವಿಂದರ ವಿಶೇಷ ಆಧ್ಯಾತ್ಮಿಕ ಹಿರಿಮೆಯಷ್ಟೇ ಅಲ್ಲ, ಆದರೆ ಅದಕ್ಕೆ ಆಧಾರ ನೀಡುವ ಅಸಾಧಾರಣ ಭೌತಿಕ ವಾಸ್ತವ ಸಂಗತಿಗಳಿವೆ, ಕಟ್ಟಕಡೆಯ ಯುರೇಮಿಕ್ (Uraemic)[1] ಸ್ಥಿತಿಯನ್ನು ತಲುಪಿದ ಅವರಿಗೆ ವೈದ್ಯರು ಕೊಟ್ಟ ಮಾದರಿ ರೂಪದ ಉದ್ದೀಪನಗೊಳಿಸುವ ಔಷಧಿಗಳಿಂದ ಅವರು ಚೇತರಿಸಿಕೊಳ್ಳದೆ ಆಳವಾದ ಕೋಮಾ[2] ಸ್ಥಿತಿಯನ್ನು ತಲುಪಿದ್ದರೆಂದು ಸಾರಲಾಗಿತ್ತು. ಹೊಸಬರಾದ ಪ್ರತಿಯೊಬ್ಬ ವೈದ್ಯ ತಿಳಿದಿರುವಂತೆ ಇಂತಹ ಸ್ಥಿತಿ ಪ್ರಜ್ಞೆ ಮರಳಿ ಬರುವುದಕ್ಕೆ ಅವಕಾಶಮಾಡಿಕೊಡುವುದಿಲ್ಲ. ಆದಾಗ್ಯೂ ಶ್ರೀ ಅರವಿಂದರಿಗೆ ಶುಶ್ರೂಷೆ ನೀಡುತ್ತಿದ್ದ ವೈದ್ಯರಿಗೆ ಆಶ್ಚರ್ಯವನ್ನುಂಟು ಮಾಡುವ ರೀತಿಯಲ್ಲಿ ಹಲವಾರು ಮಧ್ಯಂತರಗಳಲ್ಲಿ ಕಣ್ಣುಗಳನ್ನು ತೆರೆದಿರುತ್ತಿದ್ದರು, ಕುಡಿಯಲು ಏನಾದರೂ ಕೊಡಿರೆಂದು ಇಲ್ಲವೆ ವೇಳೆ ಎಷ್ಟಾಯಿತೆಂದು ಕೇಳುತ್ತಿದ್ದರು! ವೈಜ್ಞಾನಿಕವಾಗಿ ಅಸಾಧ್ಯವಾದದ್ದೆನಿಸುವ ಇಂತಹ ಸಂಗತಿಯ ಪುನರಾವರ್ತನೆ ಆಳವಾದ ಯುರೇಮಿಕ್ ಕೋಮಾದ ಜೊತೆಗೆ ದೈಹಿಕ ಉಪಕರಣದಿಂದ ಬಹಳ ಪ್ರಜ್ಞಾಪೂರ್ಣ ಯೌಗಿಕ ಸ್ವ–ಒಳಗೆಳೆದುಕೊಳ್ಳುವಿಕೆ ಮಿಶ್ರಣಗೊಂಡಿತ್ತು ಎಂದು ನಾವು ತೀರ್ಮಾನಿಸಬಹುದು. ಆ ಸ್ವ–ಒಳಗೆಳೆದುಕೊಳ್ಳುವಿಕೆಗೆ ಕಾರಣ ಆ ದೈಹಿಕ ಉಪಕರಣ ಸಾಮಾನ್ಯ ಉಪಯೋಗಕ್ಕೆ ಬಾರದಷ್ಟು ಹಾಳಾಗಿತ್ತಾದರೂ, ಅದರ ಯಜಮಾನನ ಅಸಾಧಾರಣ ಸಂಕಲ್ಪ ಶಕ್ತಿಯನ್ನು ತಡೆಯಲು ಅದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಕೇವಲ ಇಂಗಾಲ (ಕಾರ್ಬನ್), ಕಬ್ಬಿಣ ಮತ್ತು ರಂಜಕ (ಫಾಸ್ಫರಸ್)ಗಳಿಂದ ಕೂಡಿದ ಮಿದುಳಿರಲಿಲ್ಲ. ಆದರೆ ಇಲ್ಲಿ ಸೂಕ್ಷ್ಮಗೊಂಡ ಮನಸ್ಸಿನ ಸೇವಕನಂತಹದು ಒಂದಿತ್ತು, ಅದು ದೇವತೆಗಳ ಸಮೂಹದ ಮೇಲಿದ್ದುಕೊಂಡು ಎಲ್ಲ ಭೌತಿಕ ನಿಯತಿವಾದದ ಪ್ರತಿಸ್ಪಂದನವನ್ನು ಪಡೆಯುವ ಅಧಿಕಾರ ಹೊಂದಿತ್ತು. ಉಸಿರಾಟ ಮತ್ತು ಹೃದಯ ಬಡಿತಗಳು ನಿಂತುಹೋಗುವುದಕ್ಕಿಂತ ಅರ್ಧತಾಸು ಮೊದಲು ತಮ್ಮ ಸ್ಥಿರ, ಕರುಣಾಪೂರ್ಣ ದೃಷ್ಟಿಯಿಂದ ಹೊರನೋಟ ಬೀರಿದರು ಮತ್ತು ಬಳಿಯಿದ್ದ ವೈದ್ಯನಿಗೆ ಕುಡಿಯಲು ಸ್ವಲ್ಪ ನೀರು ಕೊಡು ಎಂದು ಕೇಳಿದರು. ಇದು ವೈದ್ಯಕೀಯ ಇತಿಹಾಸದಲ್ಲಿ ಅತ್ಯಂತ ವಿಚಿತ್ರ ಮೂತ್ರಪಿಂಡ ರೋಗವಾಗಿತ್ತು.

---

1. ಯುರೇಮಿಕ್ – ಮೂತ್ರಪಿಂಡಗಳಿಗೆ ಉಂಟಾದ ಅಸ್ವಸ್ಥತೆಯ ಸ್ಥಿತಿ
2. ಕೋಮಾ – ಕಾಯಿಲೆಯಿಂದ ಉಂಟಾದ ಗಾಢ ವಿಸ್ಮೃತಿ

ಯೋಗಿಗಳಲ್ಲಿ ವಿಶಿಷ್ಟ ಯೋಗಿಗಳಾಗಿದ್ದ ಅವರ ದೇಹತ್ಯಾಗದ ಈ ಅಸಾಧಾರಣ ಗುಣಲಕ್ಷಣ ಅಲ್ಲಿಗೇ ಮುಕ್ತಾಯಗೊಳ್ಳಲಿಲ್ಲ. ಅವರ ದೇಹದ ರಕ್ತದಲ್ಲಿ ವಿಷಪೂರಿತ ವಸ್ತುಗಳ ಸಂಗ್ರಹವಾಗಿತ್ತು, ಅದನ್ನು ಹೊರಗೆ ಹಾಕುವ ಕಾರ್ಯವನ್ನು ಮೂತ್ರಪಿಂಡಗಳು ಮಾಡುತ್ತಿರಲಿಲ್ಲ, ಹಾಗಾಗಿ ಆ ವಿಷ ದೇಹವನ್ನು ವ್ಯಾಪಿಸಿಕೊಂಡಿದೆ ಎಂದು ಹೇಳಲಾಗಿತ್ತು, ಪರಿಣಾಮವಾಗಿ ದೇಹ ಬಣ್ಣ ಕಳೆದುಕೊಂಡು ಸ್ವಲ್ಪೇ ಸಮಯದಲ್ಲಿ ಕಪ್ಪು ಬಣ್ಣದ್ದಾಗಬೇಕಿತ್ತು, ಮತ್ತು ವಿಘಟನೆ ಪ್ರಾರಂಭವಾಗಬೇಕಾಗಿತ್ತು. ಶ್ರೀ ಅರವಿಂದರ ಮರಣದ ಪ್ರಮಾಣ ಪತ್ರ ದೊರೆತು ಎರಡುವರೆ ದಿನಗಳಾದ ನಂತರ ಅವರ ದೇಹ ಸ್ಥಿತಿ ಕುರಿತು ಫ್ರೆಂಚ್ ಮತ್ತು ಭಾರತೀಯ ವೈದ್ಯರ ಸಲಹೆ ಕೇಳಿದಾಗ ಅವರ ದೇಹ ತನ್ನ ಸುಂದರ ಬಿಳಿ–ಬಂಗಾರ ವರ್ಣವನ್ನು ಉಳಿಸಿಕೊಂಡದ್ದು ಕಂಡುಬಂದಿತು. ಅವರ ಜೀವಿತ ಕಾಲದಲ್ಲಿ ಆ ಬಣ್ಣ ಅವರನ್ನು ವಿಶಿಷ್ಟ ವ್ಯಕ್ತಿಯೆಂದು ಗುರುತಿಸುವಂತಿತ್ತು. ಅವರ ದೇಹದಲ್ಲಿ ವಿಘಟನೆಯ ಲಕ್ಷಣ ಕಿಂಚಿತ್ತೂ ಇರಲಿಲ್ಲ. ಡಿ.5 ರ ಮುಂಜಾನೆ 1.26 ಗಂಟೆಗೆ ಅವರು ನಿಧನರಾಗಿದ್ದಾಗಿನ ಹಾಗೆಯೇ ದೇಹದ ಲಕ್ಷಣವಿತ್ತು. 41 ಗಂಟೆಗಳ ನಂತರ ಅವರ ದೇಹವನ್ನು ಸಮಾಧಿ ಸ್ಥಳದಲ್ಲಿ ಇರಿಸಬೇಕೆಂದು ನಿಗದಿಪಡಿಸಲಾಗಿತ್ತು. ಆದರೆ ಆಗ ಶ್ರೀಮಾತೆಯವರು ಆ ಕಾರ್ಯವನ್ನು ಅನಿಶ್ಚಿತ ಕಾಲದವರೆಗೆ ಮುಂದೂಡಲಾಗುವುದೆಂಬ ಪ್ರಸಿದ್ಧ ಹೇಳಿಕೆಯನ್ನಿತ್ತರು:

"ಶ್ರೀ ಅರವಿಂದರ ಅಂತಿಮ ಕ್ರಿಯೆಯನ್ನು ಇಂದು ಕೈಗೊಂಡಿಲ್ಲ, ಅವರ ದೇಹ ಅತಿಮಾನಸ ಪ್ರಕಾಶದಿಂದ ಎಷ್ಟೊಂದು ಉಜ್ವಲವಾಗಿದೆಯೆಂದರೆ ದೇಹದಲ್ಲಿ ವಿಘಟನೆಯ ಕುರುಹು ಒಂದಿಷ್ಟೂ ಕಂಡುಬರುತ್ತಿಲ್ಲ. ಆ ಪ್ರಕಾಶ ಸಂಪೂರ್ಣವಾಗಿ ಉಳಿದಿರುವವರೆಗೆ ಅವರ ದೇಹ ಹಾಸಿಗೆಯ ಮೇಲೆ ಒರಗಿಕೊಂಡಿರುತ್ತದೆ."

ಅವರ ದೇಹ ಕೆಲದಿನಗಳ ಕಾಲ ವಿಜಯೋತ್ಸಾಹದ ಅಚಂಚಲತೆಯ ಹಿರಿಮೆಯಿಂದ ಉಳಿದುಕೊಂಡಿತ್ತು. ಸಾವಿರಾರು ಜನರು ಅವರ ಅಂತಿಮ ದರ್ಶನ ಪಡೆದರು. ಡಿಸೆಂಬರ 9 ರಂದು ಸಾಯಂಕಾಲ 5 ಗಂಟೆಗೆ ಅವರ ದೇಹದ ಅಂತಿಮ ಕ್ರಿಯೆಯನ್ನು ಯಾವುದೇ ಪಂಥೀಯ ಸಮಾರಂಭವಿಲ್ಲದೆ ಮಾಡಲಾಯಿತು. ಆ ಕ್ರಿಯೆಗಾಗಿ ಆಶ್ರಮದ ಆವರಣದಲ್ಲಿಯೇ ನೆಲಮಾಳಿಗೆಯನ್ನು ತಯಾರಿಸಲಾಗಿತ್ತು. ಅವರ ದೇಹವನ್ನು ಶವ ಪೆಟ್ಟಿಗೆಯಲ್ಲಿರಿಸುವಾಗ ಅದು ಶಿಥಿಲವಾಗಿರಲಿಲ್ಲ, ಮೃತದೇಹದ ಕೆಟ್ಟವಾಸನೆ ಹೊಂದಿರಲಿಲ್ಲ, ಆದಾಗ್ಯೂ ಇಲ್ಲಿಯವರೆಗೆ ರಕ್ಷಿಸಿಕೊಂಡುಬಂದಿದ್ದ ರಕ್ಷಿಸುವ ಪ್ರಕಾಶ ಕುಂದುತ್ತಿರುವ ಲಕ್ಷಣಗಳು ಕಂಡುಬರುತ್ತಿದ್ದವು. ಆ ಅತಿಮಾನಸ ಪ್ರಕಾಶ 90 ಗಂಟೆಗಳಿಗಿಂತಲೂ



ಹೆಚ್ಚು ಕಾಲ ಸಂಪೂರ್ಣವಾಗಿ ಉಳಿದುಕೊಂಡಿತ್ತೆಂದು ಹೇಳಬಹುದು. ಪೌರ್ವಾತ್ಯ ಹವಾಮಾನದ ಪರಿಸ್ಥಿತಿಯಲ್ಲಿ ಮೃತದೇಹ ಕೊಳೆತುಹೋಗಬಹುದಾದ ಗರಿಷ್ಠ ಅವಧಿಯನ್ನು Lyons' Medical Jurisprudence ದಲ್ಲಿ ದಾಖಲಿಸಲಾಗಿದೆ. ಈ ಅವಧಿಯ ಎರಡು ಪಟ್ಟಿನಷ್ಟು ಕಾಲ ಶ್ರೀ ಅರವಿಂದರ ದೇಹ ಶಿಥಿಲವಾಗದೆ ಉಳಿದುಕೊಂಡಿತ್ತು.

ದೇಹಾವಸಾನ ಸಮೀಪಿಸುತ್ತಿರುವ ಸಂಕ್ರಮಣ ಕಾಲದಲ್ಲಿ ಮತ್ತು ನಂತರವೂ ಕೂಡ, ಮೃತ್ಯುವಿನ ದಟ್ಟಾವರಣದಲ್ಲಿ, ಭೌತದ್ರವ್ಯದ ಮೇಲೆ ಸವಾಲೊಡ್ಡುವ ರೀತಿಯಲ್ಲಿ ಅತಿಮನಸ್ಸಿನ ಪ್ರಭಾವ ಪ್ರಕಟವಾಯಿತು ಮತ್ತು ಅದರ ಸಾಮರ್ಥ್ಯ ಶ್ರೀ ಅರವಿಂದರಲ್ಲಿ ಹೆಚ್ಚಾಗುತ್ತ ಹೋಯಿತು ಎಂಬುದನ್ನು ನಿರಾಕರಿಸಲಾಗುವುದಿಲ್ಲ, ಆದರೆ ಅದನ್ನು ವಿರೋಧಾಭಾಸ ಎನ್ನುವ ರೀತಿಯಲ್ಲಿ ಪ್ರಮಾಣೀಕರಿಸಲಾಯಿತು. ಅತಿ ಕಡಿಮೆಯೆನಿಸುವ ಹಾಗೆ ಹೇಳುವುದಾದರೆ ಅವರ ದೇಹತ್ಯಾಗದ ಘಟನೆ ನೋಡಲು ತರ್ಕಬದ್ಧ, ಮಹತ್ವವುಳ್ಳ ಹಾಗೂ ಉದ್ದೇಶಪೂರ್ವಕ ಹೋರಾಟವಾಗಿತ್ತು. ಅದರ ಅಂತರಾರ್ಥಗಳನ್ನು, ಅತಿಮಾನಸ ಪ್ರಕಾಶದ ಬಗ್ಗೆ ಸ್ವಲ್ಪ ತಿಳಿದುಕೊಂಡು ಗ್ರಹಿಸಬೇಕು. ಆದರೆ ಇಲ್ಲಿ ಪ್ರಶ್ನೆಯೊಂದು ಮೇಲೆದ್ದು ಬರುತ್ತದೆ: ಹೋರಾಟ ಉದ್ದೇಶಪೂರ್ವಕವಾಗಿದ್ದರೆ ಅದು ನಡೆಯುವುದನ್ನು ಕುರಿತು ಅವರು ಯಾವುದಾದರೂ ಕುರುಹನ್ನು ಕೊಟ್ಟಿದ್ದರೆ? ಅದಕ್ಕೆ ಉತ್ತರ: ಹೌದು. ತಮ್ಮ ಶಿಷ್ಯರಿಗೆ ಪ್ರಕಾಶ ನೀಡುವ ಪತ್ರಗಳನ್ನು ಬರೆಯುವುದು ಪೂರ್ತಿ ನಿಂತುಹೋಗಿರದೆ ಇದ್ದಾಗಲೂ, ಅವರ ಸೂಕ್ಷ್ಮ ಹಾಸ್ಯಪ್ರವೃತ್ತಿ, ತನ್ನ ಜಿಗಿತವನ್ನು, ಹೊಳಪನ್ನು ಕಳೆದುಕೊಂಡಿರದೆ ಇದ್ದಾಗಲೂ, ಜಗತ್ತಿನ ಆಗುಹೋಗುಗಳ ಮೇಲಿನಿಂದ ತಮ್ಮ ದೃಷ್ಟಿಯನ್ನು ಆಚೆಗೆ ಹೊರಳಿಸದಿದ್ದಾಗಲೂ, ನಿಜವಾದ ಸಂಗತಿ ಎಂದರೆ, ಅವರು ಭವಿಷ್ಯತ್ತನ್ನು ಕುರಿತು ತಮ್ಮ ಯೋಜನೆಗಳ ಬಗ್ಗೆ ಹೆಚ್ಚು ಮಾತನಾಡುತ್ತಿರಲಿಲ್ಲ, ಅವರು ಹೆಚ್ಚು ಹೆಚ್ಚಾಗಿ ತಮ್ಮದೇ ಆಧ್ಯಾತ್ಮಿಕ ಕಾರ್ಯದಲ್ಲಿ, ಸಾಹಿತ್ಯಕ ಸೃಷ್ಟಿಯಲ್ಲಿ, ಅದರಲ್ಲೂ ವಿಶೇಷವಾಗಿ 'ಸಾವಿತ್ರಿ' ಮಹಾಕಾವ್ಯದ ರಚನೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಹೆಚ್ಚು ಮಾತನಾಡದೆ ಇರುವ ನಿಲುವನ್ನು ಅವರು ತೋರಿಸಿದಂದಿನಿಂದ ಮತ್ತು ಮಗ್ನರಾಗಿರುವಿಕೆಯಿಂದ, ತಮ್ಮ ಮಣಿಹದಲ್ಲಿ ಎದುರಿಸಬೇಕಾದ ವಿಪತ್ಕಾರಕ ಸಾಧ್ಯತೆಯನ್ನು ಕುರಿತು ಕೆಲವು ಸುಳಿವುಗಳು ಮಿನುಗು ನೋಟ ತೋರಿಸುತ್ತಿದ್ದವು.

ನವೆಂಬರ ತಿಂಗಳಲ್ಲಿ ಗುಜರಾತಿ ಜ್ಯೋತಿಷಿಯೊಬ್ಬನು ಬರೆದಿದ್ದ ಭವಿಷ್ಯವಾಣಿಯ ವಾಕ್ಯಗಳನ್ನು ಅವರೆದುರಿಗೆ ಓದಿ ಹೇಳಲಾಯಿತು. 1950ನೆಯ

ಹಾಗೂ 1964ನೆಯ ವರ್ಷಗಳಲ್ಲಿ ಸಂಭವಿಸಬಹುದಾದುರ ಬಗ್ಗೆ ಅದರಲ್ಲಿ ಬರೆಯಲಾಗಿತ್ತು. "1950ರಲ್ಲಿ ಅವರ ಜಾತಕದ ಹನ್ನೆರಡನೆಯ ಸ್ಥಾನದಲ್ಲಿ ಸೂರ್ಯ, ಚಂದ್ರರ ಕೂಟವುಂಟಾಗುವುದರಿಂದ ಶ್ರೀ ಅರವಿಂದರು ಸ್ವತಃ ದೇಹತ್ಯಾಗ ಮಾಡಲು ಪ್ರಯತ್ನಿಸುವ ಸಾಧ್ಯತೆ ಇದೆ." 1964ನೆಯ ವರ್ಷ ಕುರಿತು "ಆ ವರ್ಷದಲ್ಲಿ ಶ್ರೀ ಅರವಿಂದರ ಒಂದು ಶ್ರೇಷ್ಠ ಪವಾಡ ಎಲ್ಲರಿಗೂ ಗೋಚರವಾಗುವುದು. ತಮ್ಮ ಮಣಿಹವನ್ನು ಪೂರೈಸಿದ ಅವರು ತಮ್ಮ 93ನೆಯ ವರ್ಷದಲ್ಲಿ ತಮ್ಮದೇ ಸಂಕಲ್ಪದಿಂದ ದೇಹತ್ಯಾಗ ಮಾಡುವರು." ಅದನ್ನು ಕೇಳಿದ ಶ್ರೀ ಅರವಿಂದರು ತಮ್ಮ ಕೈಯನ್ನು ಮೇಲಕ್ಕೆತ್ತಿ ಅರ್ಧ ಹಾಸ್ಯದಿಂದ "ಓ ತೊಂಬತ್ತು ಮೂರು!" ಎಂದು ಹೇಳಿದರು. ಅದು ಅವರಿಗೆ ತಮ್ಮ ಮಣಿಹವನ್ನು ಸಿದ್ಧಿಸಿ–ಕೊಳ್ಳುವುದಕ್ಕೆ ಬಹಳ ದೀರ್ಘ ಕಾಲ ಎಂದು ಅವರಿಗೆ ಭಾಸವಾಗಿರಬಹುದು. 1950ರ ಮಹತ್ವವನ್ನು ಕುರಿತು ಅವರ ಒಬ್ಬ ಶಿಷ್ಯ ಹೇಳಿದ್ದು ಹೀಗಿದೆ: "ಶ್ರೀ ಅರವಿಂದರ ಆಧ್ಯಾತ್ಮಿಕ ಜೀವನದಲ್ಲಿ ಹನ್ನೆರಡು ವರ್ಷಗಳ ಅಂತರದ ಕಾಲಗಳಲ್ಲಿ ಅತ್ಯಂತ ಮಹತ್ವದ ಸಂಗತಿಗಳು ಸಂಭವಿಸಿವೆ. 1926 ಅವರ ಜೀವನದಲ್ಲಿ ಅತ್ಯಂತ ಮಹತ್ವದ ಮೈಲುಗಲ್ಲಾಗಿತ್ತು. ಆ ವರ್ಷವನ್ನು "ಸಿದ್ಧಿದಿನ" ಎಂದರೆ ವಿಜಯವನ್ನು ನಿಶ್ಚಿತಗೊಳಿಸುವ ದಿನ ಎಂದು ಕರೆಯಲಾಗಿದೆ, ಮತ್ತು ವ್ಯಾವಹಾರಿಕವಾಗಿ ಅದು ಶ್ರೀಮಾತೆಯವರ ಅಧ್ಯಕ್ಷತೆಯಲ್ಲಿ ಶ್ರೀ ಅರವಿಂದಾಶ್ರಮ ಪ್ರಾರಂಭಗೊಂಡುದುದನ್ನು ಸೂಚಿಸುತ್ತದೆ. ಆ ವರ್ಷದ ಹಂತದಿಂದ ಹನ್ನೆರಡು ವರ್ಷಗಳ ನಂತರದ ವರ್ಷ 1938ರಲ್ಲಿ ಅವರು ನೆಲದ ಮೇಲೆ ಬಿದ್ದಾಗ ಮೊಳಕಾಲಿನ ಎಲುಬಿನಲ್ಲಿ ಬಿರುಕುಂಟಾಯಿತು. ದೇಹತ್ಯಾಗ ಮಾಡಲು ಸ್ವ–ಇಚ್ಛೆ ಉಂಟಾಗುವ ವರ್ಷ 1950 ಮತ್ತೆ ಹನ್ನೆರಡು ವರ್ಷಗಳು ಕಳೆದ ನಂತರ ಬರುತ್ತದೆ. ಜ್ಯೋತಿಷಿ 93 ವರ್ಷದ ಭವಿಷ್ಯವನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದ. ಅವನ ಹೇಳಿಕೆಗಳನ್ನು ಕುರಿತು ಶ್ರೀ ಅರವಿಂದರು ಅವು ಕಲ್ಪನಾತಿರೇಕವಾದವುಗಳಾಗಿವೆ ಎಂದು ಪರಿಗಣಿಸಿರಲಿಲ್ಲ. "ಆ ಮನುಷ್ಯ ಸ್ವಲ್ಪ ಸತ್ಯವನ್ನು ಗ್ರಹಿಸಿದ್ದಾನೆ" ಎಂದು ಹೇಳಿದರು. ಆಗ "ನೀವು ಈ ವರ್ಷ ದೇಹತ್ಯಾಗ ಮಾಡುವುದನ್ನು ಕುರಿತು ಅವನು ಹೇಳಿದ್ದು ಅರ್ಥಶೂನ್ಯವಾಗಿದೆ ಅಲ್ಲವೆ? ನಿಜವಾಗಿ ನೀವು ನಮ್ಮನ್ನು ಅಗಲಿ ಹೋಗುವುದನ್ನು ಬಯಸುತ್ತೀರಾ?" ಎಂದು ಅವರನ್ನು ಕೇಳಲಾಯಿತು. ಯಾವುದಕ್ಕೂ ಅವಸರ ಮಾಡದ ಅವರು ಅದಕ್ಕೆ ಕೊಟ್ಟ ಗಂಭೀರ ಉತ್ತರ ಮರುಪ್ರಶ್ನೆ ಮಾಡುವ ಒಂದು ರಹಸ್ಯಪೂರ್ಣ ಶಬ್ದ "ಏಕೆ" ಎಂದಿತ್ತು.

ತಮ್ಮಲ್ಲಿ ಅತಿಮನಸ್ಸು ಹೆಚ್ಚಿನ ಪ್ರಮಾಣದಲ್ಲಿ ಇಳಿದು ಬರಲು



ಶ್ರೀ ಅರವಿಂದರು ಕೈಕೊಂಡ ಕ್ರಮದಿಂದಾಗಿ ಅದರ ಪರಿಣಾಮ ಅವರಿಗೆ ಅಸಾಮಾನ್ಯ ದೀರ್ಘಾಯುಷ್ಯ ಕೊಡುವಂತಾಗಬಹುದು ಎಂದು ನಿರೀಕ್ಷಿಸಿದವರೆಲ್ಲರಿಗೆ ಅವರು ನುಡಿದ ಶಬ್ದ ಬಹಳ ಆಶ್ಚರ್ಯವನ್ನುಂಟು ಮಾಡಿತು. ಇನ್ನೊಂದು ಆಶ್ಚರ್ಯಕಾರಿ ವಿಷಯವೆಂದರೆ ಭವಿಷ್ಯಸೂಚಕವಾದ ವಿಚಿತ್ರ ಸಂತೋಷವಿದ್ದುದಾಗಿತ್ತು. ಅವರ ಕೋಣೆಯಲ್ಲಿ ಅವರಿಗೆ ಶುಶ್ರೂಷೆ ಕೈಕೊಳ್ಳುವವರಿಗಾಗಿ, ಇಲ್ಲವೆ ಅಲ್ಲಿ ಕಾರ್ಯ ಮಾಡುವವರಿಗಾಗಿ ವೈಯಕ್ತಿಕ ಕೋಮಲಭಾವವಿರುವ ಕುರುಹು ಇರುವುದನ್ನು ತೋರಿಸಿಕೊಟ್ಟರು. ಶ್ರೀ ಅರವಿಂದರ ಸ್ವಭಾವ, ನಿಖರವಾಗಿ, ಪ್ರದರ್ಶನಾತ್ಮಕವಾಗಿರಲಿಲ್ಲ: ಎಲ್ಲವನ್ನೂ ವ್ಯಾಪಿಸಿಕೊಂಡಿರುವ ಆಕಾಶದ್ರವ್ಯ(ether)ದ ಹಾಗೆ ಅವರಲ್ಲಿ ಸೂಕ್ಷ್ಮರೂಪದ ಕರುಣೆಯಿತ್ತು ಮತ್ತು ಅವರು ಕೈಕೊಂಡಿದ್ದ ಶ್ರಮದಾಯಕ ಕಾರ್ಯದಲ್ಲಿ, ತೊಂದರೆಗೊಳಗಾಗಿದ್ದ ಸಾಧಕರಿಗೆ ಬರೆದ ಪತ್ರಗಳಲ್ಲಿ ಅವರ ಅತ್ಯಂತ ಹೆಚ್ಚಿನ ಕರುಣೆ ಇದ್ದಿತಾದರೂ, ಶ್ರೇಷ್ಠ ಪಿತೃವಿನ ಮನೋಭಾವ ಅವರ ಭೌತಿಕ ಅಭಿವ್ಯಕ್ತಿಯಲ್ಲಿ ಕಂಡುಬರುವುದು ಅಪರೂಪದ್ದಾಗಿತ್ತು. ಆದರೆ ಈಗ, ಸ್ವಲ್ಪಕಾಲದ ವರೆಗೆ, ತಮ್ಮ ಸೇವೆಯಲ್ಲಿರುವವರಿಗೆ ಪ್ರತಿಯೊಬ್ಬರಿಗೂ ಭಿನ್ನ ರೀತಿಯಲ್ಲಿ, ಭಿನ್ನ ಸಂದರ್ಭಗಳಲ್ಲಿ ಸ್ಪಷ್ಟವಾದ ಬಾಹ್ಯ ಮಮತೆಯಿರುವ ಇಂಗಿತ ಸೂಚನೆ ಇರುತ್ತಿತ್ತು. ಬಹಳ ತಡವಾಗುವುದಕ್ಕಿಂತ ಮೊದಲೇ ತಮ್ಮ ಮೆಚ್ಚುಗೆ ಅವರಿಗಾಗಿ ಇರುವುದನ್ನು ಅವರು ತಿಳಿದುಕೊಳ್ಳಲೆಂದು ಶ್ರೀ ಅರವಿಂದರು ಬಯಸಿದ ಹಾಗಿತ್ತು. ಆ ಇಂಗಿತ ಸೂಚನೆ ಅಸಾಧಾರಣವಾಗಿ ಮಧುರವಾದದ್ದು, ಸ್ವಾಗತಾರ್ಹವಾದದ್ದು ಆಗಿದ್ದಾಗ್ಯೂ ಕೂಡ ಅದು ತನ್ನಲ್ಲಿ, ಬೀಳ್ಕೊಡುವಿಕೆಯ ಸಾಧ್ಯತೆಯಿರುವ ತೀಕ್ಷ್ಣಭಾವನೆಯನ್ನು ಅಸ್ಪಷ್ಟವಾಗಿ ಹಿಡಿದಿಟ್ಟುಕೊಂಡಿತ್ತು.

ಮೂರನೆಯ ಆಶ್ಚರ್ಯಕರ ವಿಷಯವೊಂದನ್ನು ಇಲ್ಲಿ ದಾಖಲಿಸಬಹುದು: ಶ್ರೀ ಅರವಿಂದರು ಪತ್ರಕ್ಕಾಗಿ ಇಲ್ಲವೆ ಗ್ರಂಥಕ್ಕಾಗಿ ಇರುವ ವಿಷಯವನ್ನು ಬಾಯಿಂದ ಹೇಳಿ ಬರೆಸುತ್ತಿದ್ದರು, ಅದನ್ನು ಬರೆದುಕೊಳ್ಳುವವನ ಕಿವಿಯ ಮೇಲೆ ಬಿದ್ದ ಮಾತು ಅದಾಗಿತ್ತು. ಶ್ರೀ ಅರವಿಂದರು ಹಲವಾರು ವರ್ಷಗಳ ಕಾಲ ತಮ್ಮ ಮಹಾಕಾವ್ಯ 'ಸಾವಿತ್ರಿ'ಯ ರಚನೆಯಲ್ಲಿ ತೊಡಗಿಕೊಂಡಿದ್ದರು. ಮೊದಲು ರೂಪಿಸಿದ್ದನ್ನು ಪರಿಷ್ಕರಿಸುತ್ತಿದ್ದರು ಮತ್ತು ಅದಕ್ಕೆ ಹೊಸದಾದುದನ್ನು ಸೇರಿಸುತ್ತಿದ್ದರು, ಅದರ ಪ್ರಾಮುಖ್ಯತೆಗಳನ್ನು ವಿಸ್ತರಿಸುತ್ತಿದ್ದರು, ಕತೆಯನ್ನು ಶ್ರೀಮಂತಗೊಳಿಸುತ್ತಿದ್ದರು, ಸಾಂಕೇತಿಕತೆಯನ್ನು ವಿಶಾಲವಾಗಿರಿಸುತ್ತಿದ್ದರು, ತಮಗೆ ಲಭ್ಯವಿರುವ ಅಸ್ತಿತ್ವದ ಮತ್ತು ಪ್ರಜ್ಞೆಯ ಅತಿಮಾನಸ ಸ್ತರಗಳ ದರ್ಶನವನ್ನು ಹೆಚ್ಚು ಹೆಚ್ಚಾಗಿ ಗಾಢವಾಗಿ

ಹಿಡಿದಿಟ್ಟುಕೊಳ್ಳುತ್ತಿದ್ದರು, ಅವರು ಪರಿಚಯಿಸಿಕೊಂಡಿದ್ದ ದೇವತೆಗಳ ಲಯಬದ್ಧ ಚಲನೆಗಳಲ್ಲಿ ಕಂಡುಬರುವ, ಎಂದೆಂದಿಗೂ ಸತ್ಯವಾಗಿರುವ ತುಡಿತದಲ್ಲಿ ಉಸಿರಾಡಿಸುತ್ತಿದ್ದರು. ಆಳವನ್ನು ತಿಳಿಯಲಾಗದ ನಿಶ್ಚಲ ನೀರವತೆಯಿಂದ ಅವರು ಹೊಂಬಣ್ಣದ ಪದಗುಚ್ಛಗಳನ್ನು, ಭವಿಷ್ಯದ್ದರ್ಶನದ ಸಾಲುಗಳನ್ನು ಹೊರತೆಗೆಯುತ್ತಿದ್ದರು – ಹಲವಾರು ಯುಗಗಳು ಕಳೆದುಹೋದರೂ ಸರಿ ಎನ್ನುವ ಪ್ರಶಾಂತ ರೀತಿಯಲ್ಲಿ ಅವುಗಳಿಗಾಗಿ ಕಾದುಕೊಂಡಿರುತ್ತಿದ್ದರು. – ರಹಸ್ಯ ಅಲಂಕಾರಿಕ ನಿರೂಪಣೆಯ ಭವ್ಯ ನುಗ್ಗುವಿಕೆ ಮತ್ತು ತೆರೆದು ತೋರಿಸುವ ವರ್ಣನೆಗಳೊಂದಿಗೆ ಮುಂದುವರಿಯುತ್ತಿದ್ದರು – ವಿಸ್ತರಿಸುವುದಕ್ಕಾಗಿ, ತಪ್ಪು ಸರಿಪಡಿಸುವುದಕ್ಕಾಗಿ, ವಿರಾಮ ಚಿಹ್ನೆಗಳ ಇಲ್ಲವೆ ಶ್ರೇಣಿಯ ಅತ್ಯಂತ ಚಿಕ್ಕ ವಿವರಗಳತ್ತ ಕಣ್ಣಿಡುವುದಕ್ಕಾಗಿ ಹಿಂತಿರುಗುತ್ತಿದ್ದರು, ಮತ್ತೆ ವ್ಯಾಪಕ ಆದಾಗ್ಯೂ ಸೂಕ್ಷ್ಮ ವಿವರಗಳಿಗೆ ಮಿತಿಮೀರಿದ ಲಕ್ಷ್ಯಕೊಡುವ ಸ್ಫೂರ್ತಿಯೊಂದಿಗೆ ಒತ್ತಾಯ ಪೂರ್ವಕವಾಗಿ ಮುಂದುವರಿಯುತ್ತಿದ್ದರು. 'ಸಾವಿತ್ರಿ' ಮಹಾಕಾವ್ಯವನ್ನು ಅವರು ಶ್ರೀಮದ್ಗಾಂಭೀರ್ಯದ ಹಾಗೂ ನಿಧಾನ ಗತಿಯ ಶ್ರಮಸಾಧನೆಯಿಂದ ರಚಿಸಿದರು, ಅದನ್ನು ಪ್ರಾಚೀನ ಕಾಲದ ಮನೋಧರ್ಮದಲ್ಲಿರುವ ಒಂದಿಷ್ಟರಿಂದ ಕಲ್ಪನೆ ಮಾಡಿಕೊಂಡಿದ್ದರು, ಆ ಮನೋಧರ್ಮ ಬೃಹತ್‌ಪ್ರಮಾಣದ ರಚನೆಗಳಲ್ಲಿ ಸಂತೋಷ ಕಂಡುಕೊಂಡಿದೆ – ವಿಶೇಷವಾಗಿ ಅದು ರಾಮಾಯಣ, ಮಹಾಭಾರತಗಳಂತಹ ಮಹಾಕಾವ್ಯಗಳನ್ನು ರಚಿಸಿದವರ ಮನೋಧರ್ಮ–ವಾಗಿದೆ. ಅವು ಎಲ್ಲ ಮಾನವ ಜೀವನವನ್ನು ಮತ್ತು ಮಾನವ ಚಿಂತನವನ್ನು ತಮ್ಮ ವಿಶಾಲವಾದ ವ್ಯಾಪ್ತಿಯಲ್ಲಿ ತೆಗೆದುಕೊಂಡಿವೆ, ಮತ್ತು ಗುಪ್ತ ಲೋಕಗಳ, ದೇವತೆಗಳ, ರಾಕ್ಷಸರ, ದೈತ್ಯರ ಕಾರ್ಯಗತಿಗಳನ್ನು ಪೃಥ್ವಿಯ ಮೇಲಿನ ಕಾರ್ಯಗತಿಗಳೊಂದಿಗೆ ಸಮರಸವಾಗುವಂತೆ ಬೆರೆಸಿವೆ. ವಿಶ್ವವ್ಯಾಪಕತೆಯನ್ನು ಒಳಗೊಳ್ಳುವ ರೀತಿ ಶ್ರೀ ಅರವಿಂದರದಾಗಿತ್ತು. ತಮ್ಮ ಕವಿತೆ ಹಲವಾರು ಬದಿಗಳಿದ್ದ, ಅನೇಕ ವರ್ಣಗಳನ್ನು ಹೊಂದಿದ, ಅತಿಮಾನಸ ಯೋಗದ ದೈತ್ಯಾಕಾರದ ರಹಸ್ಯಗಳಿರುವ ಜಗತ್ತಿನ ಸಂಗೀತದಲ್ಲಿ ಕೊರೆದು ತೆಗೆದಂತಹದು ಆಗಿರಬೇಕೆಂಬುದು ಶ್ರೀ ಅರವಿಂದರ ಬಯಕೆಯಾಗಿತ್ತು. ಐವತ್ತು ಸಾವಿರಕ್ಕಿಂತ ಹೆಚ್ಚಿನ ಸಾಲುಗಳು ಈ ಅನನ್ಯ ದರ್ಶನಕ್ಕೆ ಮತ್ತು ಅಸದೃಶ ಅನುಭವಕ್ಕೆ ಸ್ಥಾನ ಮಾಡಿಕೊಡಲು ಅವಶ್ಯವೆಂದು ಭಾವಿಸಲಾಗಿತ್ತು. ಆ ದರ್ಶನ ಮತ್ತು ಆ ಅನುಭವಗಳ ಪ್ರಮಾಣದಷ್ಟೇ ವಿಶಾಲವಾದ ತಾಳ್ಮೆ ಈ ಮಹಾಕಾವ್ಯದೊಡನೆ ವ್ಯವಹರಿಸುತ್ತಿದ್ದಾಗ ಶ್ರೀ ಅರವಿಂದರಲ್ಲಿ ಕಂಡುಬಂದ ಲಕ್ಷಣವಾಗಿತ್ತು. ಅವರು ಆ ಕಾವ್ಯದ ಕೇಂದ್ರ ಆಕಾರದ್ದವೆನಿಸುವ ಸಾಲುಗಳನ್ನು ಬಾಯಿಂದ ಹೇಳಿ



ಬರೆಸುತ್ತಿದ್ದಾಗ ಕೊನೆಯಿಲ್ಲದ ಸಮಯ ಅವರ ಉಪಯೋಗಕ್ಕಾಗಿ ಇದೆ ಎಂಬಂತೆ ತೋರಿಬಂದಿತು:

> ನಿರ್ಮಲ ಭಾವಪರವಶತೆಗಳ ನೃತ್ಯದಲಿ ಪೂಜಾರಿಣಿ
> ದೈವೀ ಸತ್ಯವನು ತೆರೆದು ತೋರಿಸುವ ನೆಲಮಾಳಿಗೆಯೊಳಗಿಂದ
> ಸ್ಫೂರ್ತಿಗೊಂಡವಳಾಗಿ, ಅದರ ಆಳಿಕೆಗೆ ಒಳಗಾಗಿ
> ಪ್ರವಾದಿ ನೆಲಗವಿಗಳಲಿ ಚಲಿಸುತಿಹಳು,
> ಸಮೃದ್ಧ ಸೃಷ್ಟ್ಯಾತ್ಮಕ ಬಡಿತಗಳ ಸಂತಸದ ಹಸ್ತಗಳಲಿ
> ವಾಸಿಸಿದ ನಿಶ್ಚಲ ನೀರವತೆಯ ಹೃದಯವವಳು
> ಪರದೆಯ ಹಿಂದಿರುವ ದೈವತ್ವದ ನೆಲೆಯಂತೆ ತೋರಿಬರುವ
> ಇಲ್ಲವೆ ಆಚೆಗಿರುವ ವಿಷಯಗಳಿಗಾಗಿ ಸುವರ್ಣ ವರ್ಣದ
> ದೇವಾಲಯಕೆ ದ್ವಾರವಾಗುವ ಅರುಣೋದಯದ
> ದೃಷ್ಟಾಂತವಿರುವ ದೇಹವಿರುವಂತಹಳು.
>
> (ಸಾವಿತ್ರಿ)

ಆದರೆ ಇದ್ದಕ್ಕಿದ್ದಂತೆ, ಒಮ್ಮೆಗೆ ವಿಧಿನಿಶ್ಚಿತ ಡಿಸೆಂಬರ 5 ಕ್ಕಿಂತ ಒಂದೆರಡು ತಿಂಗಳುಗಳಿಗಿಂತ ಮೊದಲು "ನಾನು 'ಸಾವಿತ್ರಿ' ಕಾವ್ಯದ ರಚನೆಯನ್ನು ಬೇಗ ಮುಗಿಸಬೇಕಾಗಿದೆ" ಎಂದು ಹೇಳಿ ಶ್ರೀ ಅರವಿಂದರು ಬರೆದುಕೊಳ್ಳುವವನು ಬೆಚ್ಚಿ ಬೀಳುವಂತೆ ಮಾಡಿದರು.

ಸಹಜವಾಗಿ ಇದೆಲ್ಲವೂ ಅವರ ದೇಹತ್ಯಾಗದ ದಿನವನ್ನು ನಿಗದಿ–ಪಡಿಸುವುದಿಲ್ಲ, ಇಲ್ಲವೆ ದೇಹತ್ಯಾಗ ಮಾಡಬೇಕೆಂಬ ಅವರ ಆಸೆಯನ್ನೂ ತೋರಿಸುವುದಿಲ್ಲ. ಆದರೆ ಸ್ಪಷ್ಟವಾಗಿ, ಅವರು ತೊಡಗಿಕೊಂಡಿದ್ದ ಮತ್ತು ಆ ದಿನ ಅದು ಕೊನೆಗೊಂಡಿದ್ದ ಕಠಿಣ ಹೋರಾಟ ಅದಾಗಲೇ ಅಸ್ಪಷ್ಟವಾಗಿ ಹತ್ತಿರದ ಭವಿಷ್ಯತ್ಕಾಲದಲ್ಲಿ ಸಂಭಾವ್ಯತೆಯ ರೂಪದಲ್ಲಿ ಇರಬಹುದೆಂಬುದನ್ನು ತೋರಿಸುತ್ತಿತ್ತು ಮತ್ತು ಸಾವಿತ್ರಿ ಬಗೆಗಿನ ಒಂದು ವಾಸ್ತವ ಸಂಗತಿ ಇಲ್ಲಿ ಯಥಾಯೋಗ್ಯವಾದ ಸಾಂಕೇತಿಕತೆಯೊಂದಿಗೆ ಹೊಂದಿಕೊಳ್ಳುತ್ತದೆ. ಅವರು ಈ ಮಹಾಕಾವ್ಯವನ್ನು ಬೇಗ ಮುಕ್ತಾಯಗೊಳಿಸಲು ಹೆಣಗಿದರೂ ಅದು ಪೂರ್ಣವಾಗುವುದರಲ್ಲಿ ಕೊರತೆ ಕಂಡುಕೊಂಡಿತು. ಅದನ್ನು ಹನ್ನೆರಡು ಅಧ್ಯಾಯಗಳಲ್ಲಿ ಯೋಜಿಸಲಾಗಿತ್ತು, ಅವುಗಳ ಜೊತೆಗೆ ಉಪಸಂಹಾರದ ಅಧ್ಯಾಯವಿತ್ತು. ಉಪಸಂಹಾರವನ್ನು – ಕನಿಷ್ಠ ಪಕ್ಷ ಸಾಧಾರಣ ರೀತಿಯ ಮೊದಲ ಕರಡು ಪ್ರತಿಯ ರೂಪದಲ್ಲಿ – ಬರೆದ ನಂತರವೂ ಮತ್ತು ಪ್ರಾರಂಭದ ಅಧ್ಯಾಯ,

ದಿವ್ಯ ಲೋಕಗಳಲ್ಲಿ ಅಲೆದಾಡಿದ ಪ್ರಯಾಣಿಕನ ಅಧ್ಯಾಯ, ದೈವೀ ಮಾತೆಯ ಅಧ್ಯಾಯ, ಜನ್ಮ ಹಾಗೂ ಅನ್ವೇಷಣೆಯ ಅಧ್ಯಾಯ, ದೈವೀ ಜೀವನದ ಅಧ್ಯಾಯ, ದೈವೀ ಪ್ರೇಮದ ಅಧ್ಯಾಯ, ವಿಧಿಯ ಅಧ್ಯಾಯ ಮತ್ತು ಹಲವಾರು ಇನ್ನಿತರ ಅಧ್ಯಾಯಗಳು ಮುದ್ರಣಗೊಳ್ಳುತ್ತಿರುವ ಸ್ಥಿತಿಯಲ್ಲಿ ಇಲ್ಲವೆ ಹಸ್ತಪ್ರತಿಯ ರೂಪದಲ್ಲಿ ಇರುವಾಗ ಒಂದು ಅಧ್ಯಾಯ ಯಾವ ರೂಪದಲ್ಲೂ ಅಸ್ತಿತ್ವದಲ್ಲಿಲ್ಲ, ಅದು ಮೃತ್ಯುವಿನ ಅಧ್ಯಾಯ. – ಬಹಳ ದಿನಗಳ ಹಿಂದೆ ಅದನ್ನು ಚಿಕ್ಕ ಲೇಖನದ ರೂಪದಲ್ಲಿ ಬರೆಯಲಾಗಿತ್ತು, ಅದನ್ನು ವಿಸ್ತರಿಸುವ ಉದ್ದೇಶವಿತ್ತು ಮತ್ತು ಹೆಚ್ಚು ವಿಶಾಲ ರೂಪದಲ್ಲಿ ಇಡಿಯಾದದ್ದನ್ನಾಗಿ ಮಾಡಬೇಕಿತ್ತು. ಅತ್ಯಂತ ಸೂಚಕವೆನಿಸುವ ವಾಸ್ತವ ಸಂಗತಿಯೊಂದಿದೆ: ಮೃತ್ಯುವಿನ ನಿರ್ದಯ ಘೋರ ಕಲ್ಪನೆಯ ಜೊತೆಗೆ ವಾಸ್ತವವಾಗಿ ಕೈ ಕೈ ಮಿಲಾಯಿಸಿ ಹೋರಾಡುವವರೆಗೆ ಅವರು 'ಸಾವಿತ್ರಿ' ಮಹಾಕಾವ್ಯದ ಈ ಭಾಗವನ್ನು ರಚಿಸಲು ಸಾಧ್ಯವಾಗಿರಲಿಲ್ಲ, ಈ ಭಾಗವನ್ನು ಪ್ರಾರಂಭಿಸುವುದಕ್ಕಿಂತ ಮೊದಲು ತಮ್ಮದೇ ದೇಹದ ಅಸ್ತಿತ್ವಕ್ಕೆ ಸಂಬಂಧಿಸಿದ ಅತ್ಯಂತ ಪ್ರಬಲ ಸತ್ವ ಪರೀಕ್ಷೆಗಾಗಿ ಕಾದುಕೊಂಡು ಕುಳಿತಂತಿತ್ತು.

ಪ್ರತಿಯೊಂದೂ ಸಿದ್ಧಪಡಿಸಿ ತೋರಿಸುವುದೇನೆಂದರೆ ಡಿಸೆಂಬರ ತಿಂಗಳದ ದಿನದಲ್ಲಿ, ಬೆಳಗಾಗುವುದರ ಮೊದಲಿನ ಕೆಲವು ಗಂಟೆಗಳಲ್ಲಿ ಸಂಭವಿಸಿದ್ದು ಕೇವಲ ಭೌತಿಕ ಕಾರ್ಯಕಾರಣ ಸಂಬಂಧದ್ದಾಗಿರಲಿಲ್ಲ, ದೈವೀ ಜೀವನವನ್ನು ಅರಸುತ್ತಿರುವವರಿಗೆ ಉಂಟಾದ ಅಪಘಾತವಾಗಿರಲಿಲ್ಲ, ಆದರೆ ಮುಕ್ತವಾಗಿ ಸ್ವೀಕರಿಸಿದ ಭಯಾನಕ ನಷ್ಟಸಾಹಸವಾಗಿತ್ತು, ಇರಿಸಿಕೊಂಡ ಒಂದು ಉದ್ದೇಶಕ್ಕಾಗಿ ಅನುಭವಿಸಿದ ಭಯಭಕ್ತಿ ಹುಟ್ಟಿಸುವ ಪರೀಕ್ಷೆಯಾಗಿತ್ತು, ಗಾಯಗೊಳ್ಳಬಹುದಾದ ಎಲ್ಲ ವಿವರಗಳಲ್ಲಿ ತೆರೆದ ಕಣ್ಣಿನಿಂದ ಎದುರಿಸಿದ ಸಮರವಾಗಿತ್ತು ಮತ್ತು ಅದರ ಜೊತೆಗೆ ಅತ್ಯಂತ ಪ್ರತಿಭೆಯುಳ್ಳ, ವೈಭವದಿಂದ ಕೂಡಿದ ದೈಹಿಕ ಉಪಕರಣ ನಷ್ಟವಾಗಿ ಹೋಗುವ ಬೆದರಿಕೆ ಕೂಡಿಕೊಂಡಿತ್ತು, ಆ ಉಪಕರಣಕ್ಕೆ ಎಂದೆಂದಿಗೂ ಪ್ರಕಟಗೊಳ್ಳುತ್ತಿರುವ ದಿವ್ಯಾತ್ಮನಿಂದ ಆಕಾರ ದೊರೆತಿತ್ತು. ಆದರೂ ಉತ್ತರಕ್ಕಾಗಿ ಕಾದುಕೊಂಡಿರುವ ಒಂದು ಪ್ರಶ್ನೆ ಉಳಿದುಕೊಳ್ಳುತ್ತದೆ: ಆ ಅಪಾಯಕಾರಿ ಪ್ರಯೋಗದ ಕಾರಣ ಏನಾಗಿತ್ತು? ಕೇವಲ ಮನಸ್ಸಿನಿಂದ ಅಭಿವ್ಯಕ್ತಪಡಿಸ-ಬಹುದಾದ ಯಾವುದೇ ಉತ್ತರ ಇಡಿಯಾಗಿ ಸಮಾಧಾನಕರವಾಗುವುದು ಸಂಶಯಾಸ್ಪದ. ಬಹುಶಃ ಅಂತಹ ಪ್ರಯತ್ನ ವ್ಯರ್ಥವಾದದ್ದು. ಶ್ರೀ ಅರವಿಂದರು ತಮ್ಮದೇ ಸಂಕಲ್ಪದಿಂದ ತಮ್ಮ ಕಾರ್ಯದ ಮುಂದುವರಿಕೆಗಾಗಿ ಅತ್ಯಂತ ಅವಶ್ಯವಾದದ್ದು ಯಾವುದು ಎಂಬುದನ್ನು ಅರಿತುಕೊಂಡು ಅದನ್ನು ಕೈಕೊಂಡರು ಎಂಬ ಮನವರಿಕೆ ಮಾಡಿಕೊಳ್ಳಬೇಕು. ಆ ಪ್ರಶ್ನೆಯನ್ನು ಶ್ರೀ ಅರವಿಂದರ



ಕಾರ್ಯದಲ್ಲಿ ಪಾಲುಗೊಳ್ಳುತ್ತ ಬಂದಿರುವ ಶ್ರೀಮಾತೆಯವರಿಗೆ ಬಿಟ್ಟುಕೊಡಬೇಕು. ಭವಿಷ್ಯತ್ತಿನಲ್ಲಿ ಆಗಬೇಕಾದ ಸಮಗ್ರ ಯೋಗದ ಅಭಿವೃದ್ಧಿಗಾಗಿ ಆ ದೈವೀ ಪ್ರಭುವಿನ ನಿಜವಾದ ಸಂಕಲ್ಪದ ಪರಮೋಚ್ಚ ತರ್ಕಾಧಾರವನ್ನು ಬಿಚ್ಚಿ ತೆಗೆಯಲು ಅವರಷ್ಟೇ ಶಕ್ತರು. ಹಾಗಿದ್ದಾಗ್ಯೂ ಶ್ರೀ ಅರವಿಂದರೇ ಸ್ವತಃ ದಿವ್ಯಾತ್ಮನ ಅನೇಕ ಬಗೆಯ ಕ್ರಿಯೆಯನ್ನು ಗ್ರಹಿಕೆಗೆ ತಂದುಕೊಳ್ಳುವ ಮನಸ್ಸಿನ ಪ್ರಯತ್ನಗಳನ್ನು ಎಂದಿಗೂ ಧೈರ್ಯಗುಂದಿಸಿರಲಿಲ್ಲ. ನೇರ ಆಂತರಿಕ ಜ್ಞಾನಕ್ಕೆ ಬೌದ್ಧಿಕವಾಗಿ ಸೂತ್ರರೂಪ ಕೊಡುವಿಕೆ ಇಲ್ಲವೆ ದೈವೀ ಅಜ್ಞಾತನಾದವನ ಬಗ್ಗೆ ಅಂತರ್ಬೋಧೆಯಿಂದ ಹಿಡಿದಿಟ್ಟುಕೊಳ್ಳುವಿಕೆ ಇಂತಹವುಗಳನ್ನು ಅವರು ಪೋಷಿಸುತ್ತಿದ್ದರು ಮತ್ತು ಅವರದೇ ಪ್ರಕಾಶಮಯ ತತ್ವಜ್ಞಾನದೊಂದಿಗೆ ಒಂದು ಬಗೆಯ ಪ್ರೀತಿ, ವಿಶ್ವಾಸಗಳುಳ್ಳ ಸಂಬಂಧದೊಡನೆ ಶ್ರೀ ಅರವಿಂದರ ಅತಿಮನಸ್ಸಿನ ಉದ್ದೇಶದ ಮಾನಸಿಕ ಮಿನುಗು ನೋಟಗಳತ್ತ ತಲುಪಬಲ್ಲೆವಾದರೆ, ನಮ್ಮ ಸ್ಥೂಲ ಇಂದ್ರಿಯಗಳಾಚೆಗಿರುವ ಅವರೇ ಸ್ವತಃ ನಾವು ಕೈಕೊಳ್ಳಬೇಕಾದುದಕ್ಕೆ ಅನುಮತಿ ನೀಡುವುದನ್ನು ತಿರಸ್ಕರಿಸದೆ ಇರಬಹುದು.

*

## II

ಶ್ರೀ ಅರವಿಂದರ ತತ್ವಜ್ಞಾನ ಹಾಗೂ ಯೋಗ ಇವುಗಳ ತಿರುಳು ಕ್ರಿಯಾಶೀಲ ಸತ್ಯ–ಪ್ರಜ್ಞೆ (ಋತ್‌ಚಿತ್) ಅಥವಾ ಅತಿಮನಸ್ಸು. ಋತ್‌ಚಿತ್ ಎಂದರೆ ಭಗವಂತನ ಪ್ರಾಧಾನ್ಯ ಹಾಗೂ ಶಕ್ತಿ, ಅದು ಅವನ ಪರಿಪೂರ್ಣ ವಿಶ್ವಾತೀತತೆಯನ್ನು ಮತ್ತು ಅನೇಕವಾದವನು ಏಕಕಾಲಕ್ಕೆ ಏಕೈಕನೂ ಆದ ದಿವ್ಯಾತ್ಮನ ಸತ್ತೆ, ಅವನ ಲೀಲೆಗಳ ಸಂಭಾವ್ಯತೆಗಳ ಸಂಭೂತಿ ಇವೆಲ್ಲವುಗಳನ್ನು ಪರಿಪೂರ್ಣ ಪ್ರಕಟಣೆಯಲ್ಲಿ ಹೊರತರುತ್ತದೆ. ಈ ಪ್ರಕಟಣೆ ಸಂಪೂರ್ಣ ಸಾಮರಸ್ಯವುಳ್ಳದ್ದು, ಅದರಲ್ಲಿ ಸೃಷ್ಟ್ಯಾತ್ಮಕ ಕಾರ್ಯವಿಧಾನವಿದೆ, ದೋಷರಹಿತ ಮೂಲಗಳಿವೆ, ನಮ್ಮ ಅಪರಿಪೂರ್ಣ ವಿಶ್ವದಲ್ಲಿರುವುದೆಲ್ಲದರ ಅತ್ಯುತ್ತಮ ಆದಿರೂಪಗಳಿವೆ, ಆ ವಿಶ್ವದಲ್ಲಿ ಭಗವಂತ ಆತ್ಮವನ್ನು ಆಧಾರವಾಗಿರಿಸಿ ಭೌತದ್ರವ್ಯ, ಜೀವ–ಶಕ್ತಿ ಮತ್ತು ಮನಸ್ಸು ಇವೆಲ್ಲವುಗಳ ಉತ್ಕ್ರಾಂತಿಯನ್ನಿರಿಸಿದ್ದಾನೆ, ಈ ಉತ್ಕ್ರಾಂತಿ ವಿಶ್ವಾತೀತನಾದವನ ಅಧೋಲೋಕದ ಧ್ರುವವೆಂದು ವಿಶಾಲ ಅಚೇತನ, ಆದಿಕಾಲದ ಅಂಧಕಾರಗಳಿಂದ ಪ್ರಾರಂಭವಾಗುತ್ತದೆ. ಎರಡು ಧ್ರುವಗಳ ಮಧ್ಯೆ ಮತ್ತು ಉತ್ಕ್ರಾಂತಿ ಹೊಂದುತ್ತಿರುವ ಪೃಥ್ವಿಯ ಮೇಲೆ ಹಾಗೂ ಆದಿರೂಪದ ಅತಿಮನಸ್ಸಿನ ಕೆಳಗೆ ಅನೇಕ ರಹಸ್ಯ ಸ್ತರಗಳಿವೆ: ಸೂಕ್ಷ್ಮ ಭೌತಿಕ, ಪ್ರಾಣ, ಮನಸ್ಸು, ಅಧಿಮಾನಸ ಹಾಗೂ ಮೊದಲಿನ

ಮೂರು ವಿಷಯಗಳ ಹಿಂದೆ ಚೈತ್ಯ, ಅವುಗಳನ್ನು ಹೊಂದಿರುವ ಸತ್ತೆಗಳು ಹಾಗೂ ಚಲನೆಗಳು ಇವುಗಳನ್ನು ಒಳಗೊಂಡಂತಹವು ಮತ್ತು ವಿಶ್ವಗಳ ಇಡೀ ವ್ಯವಸ್ಥೆಯ ನಡುವೆ ಸಂಕೀರ್ಣ ಪರಸ್ಪರ ಕ್ರಿಯೆಯಿದೆ, ಪ್ರಾಚೀನ ಕಾಲದ ದಾರ್ಶನಿಕರಿಗೆ ಇದೆಲ್ಲ ಸರ್ವಸಾಮಾನ್ಯವಾಗಿ ತಿಳಿದುಬಂದಿತ್ತು ಮತ್ತು ಅವರು ಮನುಷ್ಯನಲ್ಲಿ ಸೂಕ್ಷ್ಮ ರೂಪದಲ್ಲಿರುವ ಮೂರು ಬಗೆಯ ನೈಜತೆ ಮೂರ್ತಗೊಂಡಿದ್ದನ್ನು ನೋಡಿದ್ದರು. ಈ ನೈಜತೆಗಳಿಗೆ ಅವರು ಬಾಹ್ಯ ಸ್ಥೂಲ ಶರೀರ, ಆಂತರಿಕ ಸೂಕ್ಷ್ಮ ಶರೀರ, ಉಚ್ಚತರ ಕಾರಣ ಶರೀರ ಎಂಬ ಹೆಸರುಗಳನ್ನು ಕೊಟ್ಟಿದ್ದರು. ಕೊನೆಯದು ಅತಿಮನಸ್ಸಿನ ಮೂಲತತ್ವ, ಅದು ಇಡೀ ಜ್ಞಾನದ ತನ್ನ ಸೃಷ್ಟ್ಯಾತ್ಮಕ ಪ್ರಕಾಶ, ಅನಂತ ಸಾಮರ್ಥ್ಯ, ಅಮರ ದಿವ್ಯಾನಂದ ಇವುಗಳೊಂದಿಗೆ ಒಟ್ಟುಗೂಡಿದೆ. ಪ್ರಾಚೀನ ಕಾಲದ ಜನರು ಪೃಥ್ವಿಯ ಮೇಲಿನ ಉತ್ಕ್ರಾಂತಿ (ಮಾನವ) ಸತ್ತೆಯನ್ನು ವಿಶ್ವವ್ಯಾಪಕ ದಿವ್ಯಾತ್ಮನಲ್ಲಿ, ಆಳಾತಿ ಆಳದಲ್ಲಿ, ಯಾವಾಗಲೂ ಹೆಚ್ಚಿನವಾಗಿರುವ ಪ್ರಜ್ಞೆಯ ಉಚ್ಚತರ ಸ್ಥಿತಿಗಳಲ್ಲಿ, ಜನ್ಮ–ಮೃತ್ಯುಗಳಿಗೆ ಅತೀತವಾದ ಸ್ಥಿತಿಯಲ್ಲಿ ಬಿಡುಗಡೆ ಮಾಡಬೇಕೆಂಬುದನ್ನಷ್ಟೇ ಅರಿತಿದ್ದರು, ಆದರೆ ಆ ಅತಿಮನಸ್ಸಿನ ಹರವುಗಳ ಕ್ರಿಯಾಶೀಲ ರೀತಿಗಳನ್ನು, ಅದರ ಆಳಗಳು, ಎತ್ತರಗಳು, ಕಟ್ಟಕಡೆಗೆ ಕಾರಣ ಶರೀರದ ಪರಮೋಚ್ಚ ಪರಿಪೂರ್ಣತೆ ಇವೆಲ್ಲವುಗಳನ್ನು ಪೃಥ್ವಿಗೆ ಅನ್ವಯವಾಗುವ ರೀತಿಯಲ್ಲಿ ತರಬೇಕೆಂಬುದನ್ನು ಅವರು ಅರಿತಿರಲಿಲ್ಲ. ಅವುಗಳನ್ನು ತರುವುದರಿಂದ ಪೃಥ್ವಿಯ ಸ್ಥಿತಿಗಳು ಫಲಪ್ರದತೆ ಕಂಡುಕೊಳ್ಳುವಂತಾಗುವುದು ಮತ್ತು ವಿಸ್ತಾರವಾದ, ಆಳವಾದ ಹಾಗೂ ಉಚ್ಚತರವಾದ ಉಜ್ವಲ ಬಿಂದುಗಳಲ್ಲಿ ಸಾಗಿ ಹೋಗುವುದಕ್ಕೆ ಮಾತ್ರ ಸೀಮಿತಗೊಳ್ಳುವಂತಾಗುವುದಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಪ್ರಾಚೀನ ಕಾಲದ ಜನರು ಅತಿಮನಸ್ಸಿನ ಉದ್ದೇಶ ಹಾಗೂ ಸಾಮರ್ಥ್ಯ ಇವುಗಳನ್ನು ವ್ಯವಸ್ಥೆಗೊಳಪಡಿಸಿದ ರೀತಿಯಲ್ಲಿ ತಮ್ಮವನ್ನಾಗಿ ಮಾಡಿಕೊಳ್ಳುವುದನ್ನು ಕಂಡುಕೊಂಡಿರಲಿಲ್ಲ, ಆಳಾತಿ ಆಳದ ಆತ್ಮದೊಂದಿಗೆ ಅತಿಮಾನಸ ಪ್ರಕಾಶದ ಬೆಸುಗೆ, ಮನಸ್ಸು ಹಾಗೂ ಪ್ರಾಣದ ಚೈತನ್ಯದಲ್ಲಿ ಹಾಗೆಯೇ ಭೌತಿಕ ದೇಹದಲ್ಲಿಯೂ ಕೂಡ ಆ ಪ್ರಕಾಶ ಅವರೋಹಣ ಮಾಡಿ ಅವುಗಳನ್ನು ಇಡಿಯಾಗಿ ಪರಿವರ್ತಿಸುವುದು ಹಾಗೂ ದೈವೀಕರಣಗೊಳಿಸುವುದು ಇದೆಲ್ಲ ಶ್ರೀ ಅರವಿಂದರ ವಿಶಿಷ್ಟ ಶೋಧ ಹಾಗೂ ಯೋಗ. ಅತಿಮಾನಸದ ಅವರೋಹಣದೊಂದಿಗೆ ಶ್ರೀ ಅರವಿಂದರು ಒಂದು ಹೊಸ ಮಾನವ ಕುಲವನ್ನು ಸೃಷ್ಟಿಸುವುದನ್ನು ಗುರಿಯಾಗಿರಿಸಿಕೊಂಡಿದ್ದರು. ಈ ಮಾನವ ಕುಲವು ನಿಜವಾದ ಆತ್ಮ ಪರಾಕಾಷ್ಠೆಯ ಸಂತೋಷ ಪಡೆಯುವಂತಹದು ಮತ್ತು ಪ್ರತಿಯೊಂದು ಕ್ಷೇತ್ರದಲ್ಲಿ ದೈವಿಕವಾಗಿ ಜೀವಿಸುವಂತಹದು. ಈ ಗುರಿಯೊಂದಿಗೆ ಹೊಸ



ಮನುಕುಲಕ್ಕಾಗಿ ಎರಡು ಕೇಂದ್ರಗಳು ಪ್ರಾರಂಭಗೊಳ್ಳಬೇಕಿತ್ತು, ಅದನ್ನು ತಾವು ಹಾಗೂ ಶ್ರೀಮಾತೆಯವರು ಅತಿಮಾನಸೀಕರಣಗೊಳ್ಳುವುದರೊಂದಿಗೆ ಮಾಡಬೇಕಿತ್ತು.

ಅತಿಮಾನಸೀಕರಣವು ಅದರ ಕೊನೆಯ ಅಂಶಗಳ ಮಧ್ಯೆ ರೋಗಗಳಿಂದ ಮುಕ್ತಿ, ಬಯಸಿದಷ್ಟು ಕಾಲ ಜೀವಿಸುವುದು, ದೇಹದ ಕಾರ್ಯ ವಿಧಾನಗಳಲ್ಲಿ ಬದಲಾವಣೆ ಇವೆಲ್ಲವನ್ನು ಒಳಗೊಳ್ಳಬೇಕು. – ಎಲ್ಲವೂ ಸಹಜವಾಗಿ ದೈವೀ ಸ್ವಭಾವದ ಅಭಿವ್ಯಕ್ತಿಯೆಂದು ಮಾನವ ಸ್ವಭಾವದಲ್ಲಿ ಹೊರಹೊಮ್ಮಬೇಕು, – ಆಂತರಿಕ ಅಹಂಕಾರದ ವಿಸ್ತರಣೆಯ ರೂಪದಲ್ಲಿ ಅಧಿಕಾರ, ಅಂತಸ್ತು ಮತ್ತು ಐಶ್ವರ್ಯಗಳಲ್ಲಿ ಬಾಹ್ಯ ಅಭಿವೃದ್ಧಿ ಪಡೆಯುವುದಲ್ಲ. ಅತ್ಯಂತ ಸುರಕ್ಷಿತವಾದ ಅತಿಮಾನಸದ ಪೃಥ್ವಿ–ಅಸ್ತಿತ್ವವನ್ನು ಸ್ಥಾಪಿಸಲು ಕೊನೆಯ ಈ ಮೂರು ಅಂಶಗಳನ್ನು ಸುತ್ತುವರಿಯಲು ಯೋಗಿ, ಕೊನೆಗೆ, ಉತ್ಕ್ರಾಂತಿ ಪ್ರಾರಂಭವಾಗಿ ಹೊರಹೊಮ್ಮುವಂತೆ ತೋರಿಬರುವ ಅಚೇತನದ ತಳದ ಶಿಲೆಯೊಂದಿಗೆ ಹಾಗೂ ಅಂಧಕಾರದ ಆಧಾರದೊಂದಿಗೆ ಸೆಣಸಬೇಕು. ಯುಗ ಯುಗಾಂತರಗಳಿಂದ ಕಂಡುಬಂದ ಮಾನವ ಸ್ವಭಾವದ ಎಲ್ಲ ತೊಂದರೆಗಳನ್ನು ಪ್ರತಿನಿಧಿಸುವ ಅಗ್ರಗಾಮಿಗಳೆಂದು ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಅದನ್ನೆಲ್ಲ ತಮ್ಮ ಮೇಲೆತ್ತಿಕೊಂಡು ಈ ತಳ–ಶಿಲೆಯ ಮೇಲೆ ಕಳೆದ ಒಂದುವರೆ ದಶಕದಿಂದ ಏಟು ನೀಡುತ್ತ ಬಂದಿದ್ದಾರೆ.

1936 ರಲ್ಲಿ ಶ್ರೀ ಅರವಿಂದರು ಶಿಷ್ಯನೊಬ್ಬನಿಗೆ ಪತ್ರದಲ್ಲಿ ಬರೆದದ್ದು ಹೀಗಿದೆ: "ಇಲ್ಲ, ಸ್ವರ್ಗದೊಂದಿಗೆ ನಾನು ವ್ಯವಹರಿಸುತ್ತಿಲ್ಲ. ಹಾಗೆ ವ್ಯವಹರಿಸುತ್ತಿರ–ಬೇಕಾಗಿತ್ತೆಂದು ನಾನು ಬಯಸುತ್ತೇನೆ. ಅದಕ್ಕೂ ಹೆಚ್ಚಾಗಿ ವಿಷಯಗಳ ವಿರುದ್ಧ ದಿಕ್ಕಿನಲ್ಲಿರುವುದರೊಂದಿಗೆ ಎಂದರೆ ಅಧೋಲೋಕದೊಂದಿಗೆ ವ್ಯವಹರಿಸ–ಬೇಕಾಗಿದೆ, ಅದರಲ್ಲಿ ಮುಳುಗು ಹಾಕಬೇಕಾಗಿದೆ. ಆ ಲೋಕ ಹಾಗೂ ಸ್ವರ್ಗಗಳ ನಡುವೆ ಸೇತುವೆ ನಿರ್ಮಾಣ ಮಾಡಬೇಕಾಗಿದೆ. ಅದು ಕೂಡ ನನ್ನ ಕಾರ್ಯಕ್ಕೆ ಅವಶ್ಯವಾಗಿದೆ ಮತ್ತು ನಾನದನ್ನು ಎದುರಿಸಲೇಬೇಕು."

ಮುಳುಗು ಹಾಕುವ ಈ ಕ್ರಿಯೆ ನಡೆದಾಗ, ರಹಸ್ಯ ಅಚೇತನದ ಪದರುಗಳನ್ನು ಒಂದೊಂದನ್ನಾಗಿ ಹರಿದು ಹಾಕಿದಾಗ ಮತ್ತು ಅವುಗಳ ಮೇಲೆ ಅತಿಮಾನಸದ ಪ್ರಕಾಶ ಕೆಳಗಿಳಿದು ಬರುವುದನ್ನು ಅರಸಿದಾಗ ಅನೇಕ ಭೀಕರ ಸಾಧ್ಯತೆಗಳು ಮೇಲೆದ್ದು ಬರುತ್ತವೆ ಮತ್ತು ದೊಡ್ಡ ಆಂತರಿಕ ಗಾಯಗಳನ್ನು ಹಾಗೆಯೇ ಕಠೋರ ದೈಹಿಕ ಉದ್ವಿಗ್ನತೆಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ. ಆದರೆ ಹೊರಾಟ

ನಡೆಯುತ್ತಿರುವ ಎಲ್ಲ ಕಾಲದಲ್ಲಿ ಅತಿಮಾನಸದ ಪ್ರಭು ರಕ್ಷೆ(talisman)ಯನ್ನು ಕೊಂಡೊಯುತ್ತಿರುತ್ತಾನೆ ಎಂಬುವಂತಿರುತ್ತದೆ. ಅದು ಮಾರಕ ಹೊಡೆತವನ್ನು ದೂರವಿರಿಸುತ್ತದೆ. ಅವರದೇ ದೇಹದಲ್ಲಿ ಅತ್ಯಂತ ಘನತೆವೆತ್ತ ಪ್ರಕಾಶವಿದ್ದಾಗಲೂ ಕೂಡ ಅವರು ಎದುರಿಸಬೇಕಾದ ಪರೀಕ್ಷೆಗಳು ಅಗಾಧವಾಗಿದ್ದವು, ಆದಾಗ್ಯೂ ಕೊನೆಗೆ ವಿಜಯಿಯಾಗಿ ಹೊರಬರುವ ಮತ್ತು ಕಟ್ಟಕಡೆಯ ವಿಜಯದ ಮಾರ್ಗವನ್ನು ತಮ್ಮ ಅನುಯಾಯಿಗಳಿಗೆ ತೋರಿಸಿಕೊಡುವ ಕ್ಷಮತೆ ಅವರಲ್ಲಿದೆ. ತತ್ವಜ್ಞಾನ ಕುರಿತಾಗಿರುವ ಅವರ ಬರಹಗಳಲ್ಲಿ ಹಾಗೂ ಅವರ ವೈಯಕ್ತಿಕ ಪತ್ರಗಳಲ್ಲಿ ಓದಿ ತಿಳಿದುಕೊಳ್ಳಬಹುದಾದ ಯೋಜನೆ ಈ ರೀತಿ ಹೊರಹೊಮ್ಮಿ ಬರುವುದಾಗಿತ್ತು. ಅವರ ಆ ಯೋಜನೆ ಹಾಗೂ ಅವತಾರಿ ಪುರುಷನ ಅಹಂಕಾರ ರಹಿತ, ಜಗದ್ವ್ಯಾಪಕ ಮನೋಭಾವ ಅವರು 1935ರಲ್ಲಿ ಬರೆದಿದ್ದ ಪತ್ರದಲ್ಲಿ ಧ್ವನಿತವಾಗುತ್ತದೆ:

"ನನ್ನ ಸಲುವಾಗಿ ನಾನು ಏನನ್ನೂ ಕೈಕೊಳ್ಳುತ್ತಿಲ್ಲ, ಏಕೆಂದರೆ ವೈಯಕ್ತಿಕವಾಗಿ ನನಗೆ ಮೋಕ್ಷದ ಇಲ್ಲವೆ ಅತಿಮಾನಸೀಕರಣದ ಆವಶ್ಯಕತೆ ಇಲ್ಲ, ನಾನು ಅತಿಮಾನಸೀಕರಣ ಕುರಿತು ಅರಸುತ್ತಿರುವುದಕ್ಕೆ ಕಾರಣ ಅದು ಪೃಥ್ವೀ ಪ್ರಜ್ಞೆಗಾಗಿ ಕೈಕೊಳ್ಳಬೇಕಾದ ವಿಷಯವಾಗಿದೆ. ಮತ್ತು ಅದನ್ನು ನನ್ನಲ್ಲಿಯೇ ಸಿದ್ಧಿಸಿಕೊಳ್ಳದಿದ್ದರೆ, ಬೇರೆಯವರಿಗಾಗಿ ಅದನ್ನು ಮಾಡಲು ಸಾಧ್ಯವಾಗುವುದಿಲ್ಲ."

ಹೌದು, ಶ್ರೀ ಅರವಿಂದರು ತಮ್ಮ ಅಧಿಕೃತ ಪ್ರಕಟಣೆಗಳಲ್ಲಿ ಆ ಆವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡಿದ್ದುದು ಕಂಡುಬರುತ್ತದೆ, ಹಾಗಾಗಿ ಅತಿಮಾನಸ ಮಾನವ ಕುಲಕ್ಕೆ ತಮ್ಮನ್ನು ಹಾಗೂ ಶ್ರೀಮಾತೆಯವರನ್ನು ಪ್ರಾರಂಭ ಬಿಂದುವಿನ ರೂಪದಲ್ಲಿ ನಿಯೋಜಿಸಿಕೊಳ್ಳುವ ನಿರೀಕ್ಷೆ ಅವುಗಳಲ್ಲಿದೆ. ಆದರೆ ಅವೇ ಅಧಿಕೃತ ಪ್ರಕಟಣೆಗಳಲ್ಲಿ ಭಿನ್ನ ನಿರ್ವಹಣಕ್ಕಾಗಿ ಚಿಕ್ಕ ಅವಕಾಶವಿರುವ ವ್ಯತ್ಯಾಸ ತೋರಿಸಿದ್ದಾರೆ. 1935ರ ಅವರ ಒಂದು ಪತ್ರ ಭಗವಂತನ ಪಾತ್ರೆಯ ಸರ್ವಸಾಧಾರಣ ರೀತಿಗಳನ್ನು ಕುರಿತು ಹೇಳುತ್ತದೆ:

"ದೈವಿಕತೆ ಮೇಲ್ಗಡೆಯಲ್ಲಿ ದೈವೀ ಸತ್ಯದ ಪ್ರಜ್ಞೆಗನುಗುಣವಾಗಿ ಹಾಗೂ ನಿಮ್ನ ಮಟ್ಟದಲ್ಲಿ ದೈವೀ ಲೀಲೆಗನುಗುಣವಾಗಿ ಕಾರ್ಯ ಕೈಕೊಳ್ಳುತ್ತದೆ. ಅದು ಏನನ್ನು ಕೈಕೊಳ್ಳಬೇಕು, ಏನನ್ನು ಕೈಕೊಳ್ಳಬಾರದು ಎಂಬುದು ಮನುಷ್ಯರ ವಿಚಾರಗಳಿ–ಗನುಗುಣವಾಗಿ ಇರುವುದಿಲ್ಲ."

ಭಗವಂತನ ನಿರ್ವಹಣೆಗಳಲ್ಲಿ ಅನಿರೀಕ್ಷಿತ ಹೊರಳುವಿಕೆಗಳನ್ನು ಕುರಿತು ಹೆಚ್ಚು ಸ್ಪಷ್ಟವಾದ ಸುಳಿವು ಅವರ 1935ರ ಒಂದು ಪತ್ರದಲ್ಲಿದೆ:



"ಭಗವಂತ ತನ್ನ ಎಲ್ಲ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಬೇಕೆಂದು ಅವನನ್ನೇಕೆ ಕಟ್ಟಿಹಾಕಬೇಕು? ವಿಫಲತೆ ಅವನಿಗೆ ಹೆಚ್ಚು ಯೋಗ್ಯವೆನಿಸಿದರೆ ಮತ್ತು ಕಟ್ಟಕಡೆಯ ಉದ್ದೇಶಕ್ಕೆ ಹೆಚ್ಚು ಒಳ್ಳೆಯ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ ಆಗ ನಾವೇನು ಮಾಡುವುದಿದೆ? ಭಗವಂತನನ್ನು ಕುರಿತಾದ ಕಟ್ಟುನಿಟ್ಟಿನ ಹಳೆಯ ವಿಚಾರಗಳಿಂದೇನು ಪ್ರಯೋಜನ?"

ಭಗವಂತನ ಅತ್ಯಂತ ಭವ್ಯ ಗುರಿ ಸಾಧನೆಯಲ್ಲಿಯ ತೋರಿಕೆಯ ಸೋಲು ಮರೆಯಲ್ಲಿರುವ ಯಶಸ್ಸು ಕೂಡ ಆಗಿರಬಹುದೆಂಬ ಮತ್ತು ಅದು ಆ ಗುರಿಯನ್ನು ತೀವ್ರಗತಿಯಿಂದ ನಿಖರವಾಗಿ ತಲುಪಬೇಕಾದ ವಿರೋಧಾಭಾಸದ್ದೆನಿಸುವ ಸಮರತಂತ್ರವಾಗಿರಬಹುದೆಂಬ ಸೂಚನೆ ನೀಡುತ್ತದೆ. ಎಲ್ಲ ಪರಿಸ್ಥಿತಿಗಳನ್ನು ಗಮನಿಸಿದಾಗ ಶ್ರೀ ಅರವಿಂದರು ಮೂತ್ರಪಿಂಡಗಳ ರೋಗಕ್ಕೆ ಬಲಿಯಾದರು ಎಂಬ ಮೇಲ್ಮೈ ನೋಟಕ್ಕೆ ಕಂಡುಬರುವ ಸಂಗತಿ ಅವರು ಉಪಯೋಗಿಸಿದ ಅಂತಹ ಸಮರ ತಂತ್ರದ್ದಾಗಿದೆ.

ಅತಿಮಾನಸದ ಇಡೀ ಯೋಗ ಈ ಮೊದಲು ಎಂದೂ ಯಾವ ಆಧ್ಯಾತ್ಮಿಕ ವ್ಯಕ್ತಿಯಿಂದಲೂ ಹೋರಾಟ ನಡೆಸಿರದ ಶಕ್ತಿಗಳ ವಿರುದ್ಧ ದಂಡಯಾತ್ರೆ ಕೈಕೊಳ್ಳುವ ರೀತಿಯದಾಗಿತ್ತು. ಅಪಾಯದ ಅಂಚಿನಲ್ಲಿರುವ ಪ್ರತಿಯೊಂದು ಸಾಮಾನ್ಯ ಅನುಭವದಲ್ಲಿ, ಯುಗಾಂತರಗಳಲ್ಲಿ ಕಂಡುಬಂದ ಮಾನವ ಜೀವನದ ಪ್ರತಿಯೊಂದು ನಿಲುವಿನಲ್ಲಿ, ಪ್ರತಿಯೊಂದು ಸುಸಂಬದ್ಧವಾದ ಆಧ್ಯಾತ್ಮಿಕ ಪರಂಪರೆಯಲ್ಲಿಯೂ ಕೂಡ ಈ ಯೋಗ ಭೌತದ್ರವ್ಯದ ತಳಹದಿಗಳನ್ನು ಬದಲು ಮಾಡುವ ಭರವಸೆಯನ್ನಿಟ್ಟುಕೊಂಡಿತ್ತು ಮತ್ತು ಕೋಟೆಯ ಜೇರುಗಿಂಡಿ–ಗಳಲ್ಲಿರುವಂತಹ ಅಂಧಕಾರದಲ್ಲಿ ಮುಂದುವರಿಯಿತು. ಶ್ರೀ ಅರವಿಂದರಂತಹ ನಿರ್ಭೀತ ಹೋರಾಟಗಾರರು, ಸಮರಾಸಕ್ತ ದಿವ್ಯಾತ್ಮವಿರುವ ಪ್ರತಿಭಾವಂತರು ಮಾತ್ರ ಉತ್ಕ್ರಾಂತಿಯಲ್ಲಿರುವ ಒಳ ಅರಿವಿನ ಪ್ರಬಲ ರಹಸ್ಯವನ್ನು ಅಂತರ್ಬೋಧೆಗೆ ತಂದುಕೊಂಡಿರಲು ಸಾಧ್ಯ, ಸ್ಥಾಪಿತಗೊಂಡಿರುವ ಸ್ವಭಾವದಲ್ಲಿ ಪರಿವರ್ತನೆ ತರಲು ಅದರ ಮೇಲೆ ಆಕ್ರಮಣ ಮಾಡುವ ಯೋಜನೆಯನ್ನು ರೂಪಿಸಿರುವುದು ಮತ್ತು ಅವರು ಇನ್ನೊಂದು ಪತ್ರದಲ್ಲಿ ವ್ಯಕ್ತಪಡಿಸಿರುವ ಮನೋಭಾವದಿಂದ ಮುಂದೆ ಸಾಗಿ ಹೋಗಿರುವುದು ಸಾಧ್ಯ.

"ಅತಿಮಾನಸವನ್ನು ಕೆಳಗಿಳಿಸಿ ತರುವುದನ್ನು ನಾನು ಕೈಕೊಳ್ಳುತ್ತಿರುವುದು ವೈಯಕ್ತಿಕ ಶ್ರೇಷ್ಠತೆಗಾಗಿಯಲ್ಲ. ಮಾನವರ ಅರ್ಥದಲ್ಲಿರುವ ಶ್ರೇಷ್ಠತನ, ಕೀಳುತನಗಳನ್ನು ಕುರಿತು ನಾನು ಚಿಂತಿಸುವುದಿಲ್ಲ. ಶ್ರೀಕೃಷ್ಣ ಕೈಕೊಳ್ಳದೆ ಇದ್ದುದನ್ನು

ನಾನು ಕೈಕೊಳ್ಳಲು ಹೊರಟುದದನ್ನು ಕುರಿತು ಮಾನವ ತರ್ಕ ನನ್ನನ್ನು ಒಬ್ಬ ಮೂರ್ಖನೆಂದು ಪರಿಗಣಿಸಿದರೆ ನನಗೆ ಅದರ ಬಗ್ಗೆ ಕನಿಷ್ಠಮಟ್ಟದ ಚಿಂತೆಯೂ ಇಲ್ಲ. ಅಂತಹ ವಿಚಾರದಲ್ಲಿ ತೊಡಗಿರುವವರು X ಅಥವಾ Y ಅಥವಾ ಯಾರೇ ಆಗಿರಲಿ ಚಿಂತೆಯಿಲ್ಲ. ಅದು ದೈವೀ ಸಂಕಲ್ಪ ಹೌದೋ ಅಲ್ಲವೋ, ಅದನ್ನು ಕೆಳಗಿಳಿಸಿ ತರುವುದಕ್ಕೆ ಇಲ್ಲವೆ ಅದರ ಅವರೋಹಣಕ್ಕೆ ಮಾರ್ಗ ಮಾಡಿಕೊಡುವುದಕ್ಕೆ ಇಲ್ಲವೆ ಅದು ಹೆಚ್ಚಿನ ಮಟ್ಟದಲ್ಲಿ ಸಾಧ್ಯವಾಗುವಂತೆ ಮಾಡುವುದಕ್ಕೆ ನನ್ನನ್ನು ಕಳಿಸಿಕೊಡಲಾಗಿದೆಯೋ ಇಲ್ಲವೋ ಎಂಬುದು ಭಗವಂತ ಹಾಗೂ ನನ್ನ ನಡುವಿರುವ ಪ್ರಶ್ನೆ. ಎಲ್ಲ ಜನರೂ, ಅವರಿಗೆ ಇಷ್ಟವಾದರೆ, ನನ್ನನ್ನು ಅಪಹಾಸ್ಯಕ್ಕೀಡುಮಾಡಲಿ, ನನ್ನ ಮಿತಿಮೀರಿದ ಆತ್ಮವಿಶ್ವಾಸಕ್ಕಾಗಿ ನರಕ ನನ್ನ ಮೇಲೆ ಬೀಳುವುದಿದ್ದರೆ ಬೀಳಲಿ – ಜಯಗಳಿಸುವವರೆಗೆ ಇಲ್ಲವೆ ನಾಶವಾಗಿ ಹೋಗುವವರೆಗೆ ನಾನು ಮುಂದೆ ಸಾಗುವೆ. ಈ ಮನೋಭಾವದಿಂದ ನಾನು ಅತಿಮನಸ್ಸನ್ನು ಅರಸುತ್ತಿರುವೆ, ನನಗಾಗಿ ಇಲ್ಲವೆ ಇತರರಿಗಾಗಿ ಶ್ರೇಷ್ಠತೆಯನ್ನು ಬೆಂಬತ್ತುವುದಕ್ಕಾಗಿಯಲ್ಲ."

ಸ್ವಾರ್ಥರಹಿತತೆಯ ಉಜ್ವಲ ವೀರೋಚಿತತೆ ಇಲ್ಲದೆ, ತಮ್ಮ ಉದ್ದೇಶಕ್ಕೆ ಹತ್ತಿರವಾಗುವಂತೆ ಒತ್ತಾಯ ತಂದುಕೊಳ್ಳುವುದಕ್ಕಾಗಿ ಯಾವುದೇ ಅಪಾಯವನ್ನು ಎದುರಿಸಲು ಶಕ್ತರು ಮತ್ತು ಸೂತ್ರ "ನಾನು ಜಯಿಸುವೆ ಇಲ್ಲವೆ ನಾಶವಾಗುವೆ" ಎಂದಿದ್ದರೂ "ವಿಜಯಿಯಾಗಲು ನಾನು ನಾಶವಾಗುವೆ" ಎಂಬ ಇನ್ನೂ ಹೆಚ್ಚು ಕೆಚ್ಚೆದೆಯ ಸೂತ್ರದ ಪ್ರಯೋಜನವನ್ನು ಸುಲಭವಾಗಿ ಪಡೆಯುವ ಮನಸ್ಸಿನ ಚೌಕಟ್ಟಿಲ್ಲಿದೆ. ಈ ಸೂತ್ರವನ್ನು ಅಪ್ಪಿಕೊಳ್ಳಲು ಇರಬೇಕಾದ ಭಾವನೆಯೆಂದರೆ ಅಚೇತನದ ಕಪ್ಪು ಶಕ್ತಿಗಳೊಡನೆ ಇರುವ ಕೊನೆಯ ಹೋರಾಟದಲ್ಲಿ ಅತಿಮಾನಸ ಪ್ರಕಾಶದಿಂದ ವರ್ಣರಂಜಿತವಾಗಿರುವ ದೇಹವನ್ನು ಬಲಿಕೊಡುವುದರಿಂದ ಆ ಕಪ್ಪು ಸಾಮರ್ಥ್ಯಗಳು ಭೀಕರವಾಗಿ ದಣಿದುಕೊಳ್ಳುವವು ಮತ್ತು ಮೇಲ್ಗಡೆಗಿರುವ ಸುವರ್ಣ ವರ್ಣದ ದೇವ ಪ್ರಮುಖ ಪೃಥ್ವಿಯೆಡೆಗೆ ಹಾಗೂ ಅತಿಮಾನಸ ಯೋಗದಲ್ಲಿ ಈ ದೇಹದ ಪಾಲುಗಾರನಾಗಿರುವವನೆಡೆಗೆ ಪ್ರಬಲ ಎಳೆತಕ್ಕೊಳಗಾಗುವನು. ಆ ಮಹತ್ವಪೂರ್ಣ ಭಾವನೆ ಉದಯವಾದ ಕೂಡಲೆ ಪರಮೋಚ್ಚ ಸೇವಾ ಪ್ರಮುಖರಾಗಿರುವ ಅವರು ಸಮರದ ಇಡೀ ಯೋಜನೆಯನ್ನು ಬದಲು ಮಾಡಲು, ಈ ಮೊದಲು ತಯಾರು ಮಾಡಿದ ಎಲ್ಲ ಕೋಟೆಗಳ ಇಡೀ ಸಾಲನ್ನು ತ್ಯಜಿಸಲು, ಮುನ್ನಡೆಯ ಹಳೆಯ ವಿಧಾನವನ್ನು ಕೈಬಿಡಲು, ಸರಿಯಾಗಿ ಯೋಜಿಸಿದ ದಿಸೆಯನ್ನು ಒಮ್ಮೆಗೆ ಬದಲಿಸಲು



ತಯಾರಾಗಿರುತ್ತಾರೆ, ಮತ್ತು ತಮ್ಮ ಭೌತಿಕ ಅಸ್ತಿತ್ವವನ್ನು ಅದರ ಎಲ್ಲ ವಿವರಗಳಲ್ಲಿ ಅತಿಮಾನಸೀಕರಣಗೊಳಿಸಲು ಪ್ರಯತ್ನಿಸುವುದರ ಬದಲಾಗಿ, ನಿರುದ್ವೇಗದಿಂದ ಯಾವುದೋ ಒಂದು ದೈತ್ಯಾಕಾರದ ಹೊಂಚುದಾಣದತ್ತ ಚಲಿಸುತ್ತಾರೆ, ಅತಿಮಾನಸ ಅವರಿಗೆ ನೀಡಿದ್ದ ರಕ್ಷೆಯನ್ನು ಎಸೆದುಬಿಡುತ್ತಾರೆ, ಎಲ್ಲವನ್ನು ರಹಸ್ಯದಲ್ಲಿ ಜಯಿಸಲು ಹೋರಾಡುತ್ತ ಸೋಲನ್ನು ಒಪ್ಪಿಕೊಳ್ಳುತ್ತಾರೆ, ಮೇಲ್ಮೈಯಲ್ಲಿರುವ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ.

ಶ್ರೀಮಾತೆಯವರ ಭೌತಿಕ ಪರಿವರ್ತನೆ ಹೆಚ್ಚು ತೀವ್ರಗತಿಯಿಂದಾಗಲಿ ಮತ್ತು ಅದು ಪರಿಪೂರ್ಣವಾಗಿ ರಕ್ಷಿತವಾಗಿರಲಿ, ಅದರ ಮೂಲಕ ಪೃಥ್ವಿಯ ಮೇಲೆ ಮಾನವರಿಗಾಗಿ ದೈವೀ ಜೀವನ ಬೇರೂರಲಿ, ಪುಷ್ಪಭರಿತವಾಗಲಿ ಎಂಬ ಉದ್ದೇಶಕ್ಕಾಗಿ ಮಾತ್ರ ಶ್ರೀ ಅರವಿಂದರ ಬೃಹತ್‌ಪ್ರಮಾಣದ ಸಮರತಂತ್ರದ ಬಲಿದಾನ ಅವಶ್ಯವಾಗಿತ್ತು – ಇದಲ್ಲದೆ ಅವರ ದೇಹತ್ಯಾಗಕ್ಕಾಗಿ ವಿವರ ನೀಡುವ ಬೇರಾವ ಕಾರಣವಿರದು. ಈ ಸಂಪೂರ್ಣಾಹುತಿಯಲ್ಲಿ ಸೂಚಿತವಾಗಿರುವ ಜಗತ್ತನ್ನು ರಕ್ಷಿಸುವ ಮಧುರ ಸಾಮರ್ಥ್ಯದ ಕ್ರಿಯೆಯನ್ನು ಕುರಿತು ಶ್ರೀ ಅರವಿಂದರು 1934ರ ಒಂದು ಪತ್ರದಲ್ಲಿ ಹೇಳಿದ್ದಾರೆ:

"ಪೃಥ್ವಿಯನ್ನು ಅದರ ಅಂಧಕಾರದಿಂದ ಮೇಲಕ್ಕೆತ್ತಿ ಭಗವಂತನತ್ತ ತೆರೆದಿರಿಸುವ ಏಕೈಕ ಗುರಿಗಾಗಿ ನಾನು ಹಾಗೂ ಅದಕ್ಕಾಗಿ ಇನ್ನಿತರ ಎಲ್ಲವನ್ನೂ ತ್ಯಾಗಮಾಡಿರುವವರು ಹೊರಬೇಕಾಗಿರುವ ಭಾರವನ್ನು ದೈವೀ ಪ್ರೇಮ ಮಾತ್ರ ಹೊರಬಲ್ಲದು."

ದೈವೀ ಪ್ರೇಮದ ಕವಚತೊಟ್ಟ ಆಧ್ಯಾತ್ಮಿಕ ಪ್ರಜ್ಞೆಯಿರುವ ಈ ಮನುಷ್ಯ ವಿಶಾಲ ಗಾತ್ರದ ವಿಷವನ್ನು ತನ್ನೊಳಗೆ ಎಳೆದುಕೊಳ್ಳದೇ ಹೋಗಿದ್ದರೆ ಕನಸಿನಲ್ಲೂ ಕಾಣಲಾಗದ ಅನಾಹುತವೊಂದು ಜಗತ್ತಿನ ಮೇಲೆ ಆಕ್ರಮಣ ಮಾಡಬಹುದಿತ್ತು, ಆ ದೈವೀ ಪ್ರೇಮ ಅವನನ್ನು ವಿಶ್ವಾತೀತನ ಸಂಕಲ್ಪ ಅವತರಣಗೊಳ್ಳುವಂತೆ ಮಾಡುವ ವಿಶ್ವಂಭರೀಕರಣಗೊಂಡ ವ್ಯಕ್ತಿಯನ್ನಾಗಿ ಮಾಡಿತ್ತು. ಶ್ರೀ ಅರವಿಂದರು ತಮ್ಮ ಯೋಗದಲ್ಲಿ ಎದುರಿಸುತ್ತಿದ್ದ ಅಡೆತಡೆಗಳು ನಿಜವಾಗಿ ವೈಯಕ್ತಿಕವಾಗಿರಲಿಲ್ಲ ಎಂಬ ವಾಸ್ತವ ಸಂಗತಿಯನ್ನು ಇಲ್ಲಿ ಮತ್ತೆ ನಾವು ಉಲ್ಲೇಖಿಸಬಹುದು. ಆ ಅಡೆತಡೆಗಳು ಮಾನವ ಕುಲಕ್ಕೆ ಸಂಬಂಧಿಸಿದವುಗಳನ್ನು ಪ್ರತಿನಿಧಿಸುತ್ತಿದ್ದವು, ಶ್ರೀ ಅರವಿಂದರು ಅವುಗಳ ಹಿಂದೆ ಜಗ್ಗುವ, ಅಪಾಯಕಾರಿ ಭಾರವನ್ನು ಸಂತೋಷದಿಂದ ಸ್ವೀಕರಿಸಿದರು, ಅದಕ್ಕೆ ಕಾರಣ ಬಹುಶಃ ಅವರಲ್ಲಿದ್ದ ಅಸಾಧಾರಣ ಸಹಜ ಪ್ರತಿಭೆ ಹಾಗೂ ಅರ್ಹತೆಗಳು. ಬಹಳ ವರ್ಷಗಳ ಹಿಂದೆ ಶ್ರೀಮಾತೆಯವರ ದೇಹದಲ್ಲಿ

ಉಂಟಾದ ತಾತ್ಕಾಲಿಕ ತೊಂದರೆ ಕುರಿತು ಕೇಳಿದ ಪ್ರಶ್ನೆಗೆ ಶ್ರೀ ಅರವಿಂದರು ಉತ್ತರ ಬರೆದಿದ್ದು ಹೀಗಿದೆ:

“ನಾವು ಪರಿಪೂರ್ಣತೆಯನ್ನು ನಮ್ಮ ಸಲುವಾಗಿ ಅರಸಿಲ್ಲ, ಆದರೆ ಸರ್ವಸಾಧಾರಣ ಬದಲಾವಣೆಗಾಗಿ – ಇತರರಿಗಾಗಿ ಪರಿಪೂರ್ಣತೆಯ ಸಾಧ್ಯತೆಯನ್ನು ಸೃಷ್ಟಿಸುವುದನ್ನು ಅರಸಿದ್ದೇವೆ: ಅದನ್ನು ನಾವು ಸಿದ್ಧಿಸಿಕೊಳ್ಳುವಾಗ ಹಾಗೂ ಪರಿವರ್ತನೆಗೊಳಪಡಿಸುವಾಗ ಬರುವ ತೊಂದರೆಗಳನ್ನು ಎದುರಿಸದೆ, ಸ್ವೀಕರಿಸದೆ ಹಾಗೂ ಅವುಗಳ ಮೇಲೆ ನಮಗಾಗಿ ಜಯ ಸಾಧಿಸದೆ ಮಾಡಲಾಗುತ್ತಿರಲಿಲ್ಲ. ಅದನ್ನು ಇತರ ಸ್ತರಗಳ ಮೇಲೆ ಸಾಕಷ್ಟು ಮಟ್ಟದವರೆಗೆ ಮಾಡಲಾಗಿದೆ – ಆದರೆ ಇನ್ನೂ ಭೌತಿಕ ಸ್ತರದ ಅತ್ಯಂತ ಭೌತಿಕವಾದುದರ ಮೇಲೆ ಮಾಡಲಾಗಿಲ್ಲ. ಅದನ್ನು ಕೈಕೊಂಡು ಪೂರೈಸುವವರೆಗೆ ಅಲ್ಲಿ ಹೋರಾಟ ಮುಂದುವರಿಯುವುದು. ... ಶ್ರೀಮಾತೆಯವರ ತೊಂದರೆಗಳು ಅವರವೇ ಅಲ್ಲ ಅವರು ಇತರರ ತೊಂದರೆಗಳನ್ನು, ಹಾಗೂ ಸರ್ವಸಾಧಾರಣ ಕ್ರಿಯೆಯಲ್ಲಿ ಮತ್ತು ಪರಿವರ್ತನೆಯ ಕಾರ್ಯದಲ್ಲಿ ಇರುವ ತೊಂದರೆಗಳನ್ನು ತಮ್ಮ ಮೇಲೆ ತೆಗೆದುಕೊಳ್ಳುತ್ತಾರೆ. ಅದು ಹಾಗಿರದೆ ಹೋಗಿದ್ದರೆ ವಿಷಯ ತೀರ ಬೇರೆಯದಾಗಿರುತ್ತಿತ್ತು.”

ಸ್ಪಷ್ಟವಾಗಿ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಮಾಡಿದ ತ್ಯಾಗ ಅವರ ವೈಯಕ್ತಿಕ ದೋಷಗಳಿಂದಾಗಿ ಅವರ ಮೇಲೆ ಹೇರಲಾದವುಗಳಲ್ಲ. ಅವರು ಅನನ್ಯ ಆಧಾರಗಳನ್ನು, ಯೋಗದ ವಾಹನಗಳನ್ನು ಒದಗಿಸಿದ್ದಾರೆ. ಆ ಆಧಾರಗಳನ್ನು ಕೇವಲ ತಮಗಾಗಿ ಉಪಯೋಗಿಸಿಕೊಂಡಿದ್ದರೆ ಪ್ರತಿಯೊಂದು ಅಡೆತಡೆಯ ಮೇಲೆ ವಿಜಯ ಸಾಧಿಸಬಹುದಾಗಿತ್ತು. ಇದು ಸದ್ಯದ ಸಂದರ್ಭದಲ್ಲಿ ಶ್ರೀ ಅರವಿಂದರ ದೇಹತ್ಯಾಗದ್ದಾಗಿದೆ, ಅವರು ತಮ್ಮಲ್ಲಿಯೇ ಇರುವ ಯಾವುದೋ ಒಂದು ದೋಷದಿಂದಾಗಿ ದೇಹತ್ಯಾಗ ಮಾಡುವ ನಿರ್ಬಂಧಕ್ಕೊಳಗಾಗಿದ್ದರು ಎಂದು ಅದರರ್ಥವಲ್ಲ. ಅದು ಪೃಥ್ವಿ–ಪ್ರಜ್ಞೆಯ ಉತ್ಕ್ರಾಂತಿಯಲ್ಲಿ ಅತಿ ಪ್ರಬಲವಾದ ಸತ್ವ ಪರೀಕ್ಷೆಯ ಕಾಲ – ಅದು ಅಚೇತನದ ಮೇಲೆ ದೈವಿಕವಾಗಿ ಆಕ್ರಮಣಕ್ಕೊಳಗಾದ ಯಾವುದೋ ಬಂಡಾಯಕಾರಿ ಮೋಡಕವಿಯುವಿಕೆ ಮೇಲೆದ್ದು ಬರುವುದಾಗಿದೆ. – ಅದನ್ನು ಅವರು ತಮ್ಮ ಜೀವನದ ಮೇಲೆ ತಿರುಗಿಸಿಕೊಂಡಿದ್ದಾರೆ, ಮೂತ್ರಪಿಂಡದ ರೋಗದಿಂದ ಉಂಟಾಗುವ ಪ್ರಜ್ಞಾರಹಿತ ಸ್ಥಿತಿಯಲ್ಲಿ ಮಾರಕ ಅಪಾಯವಾಗಿ ಅದು ಏಕಾಗ್ರಗೊಂಡಿದೆ. ನುರಿತ ಸಮರ ತಂತ್ರಜ್ಞರಾದ ಅವರು ಕೈಗೆತ್ತಿಕೊಂಡಿದ್ದ ತಮ್ಮ ಕಾರ್ಯಕ್ಕೆ ರಹಸ್ಯ ಅನುಕೂಲತೆ



ಪಡೆಯಲು ಅದನ್ನು ಉಪಯೋಗಿಸಿಕೊಂಡಿದ್ದಾರೆ. ಅವರಿಗೆ ವೈಯಕ್ತಿಕ ಪರಾಕಾಷ್ಠೆಗಿಂತ ಕಾರ್ಯ ಹೆಚ್ಚು ಮಹತ್ವದ್ದಾಗಿತ್ತು.

ತೀಕ್ಷ್ಣವಾಗಿ ಹೋರಾಡುತ್ತಿರುವ ವಿರೋಧದೊಂದಿಗೆ ವಿಶಾಲತರ ಹಾಗೂ ಪ್ರಶಾಂತ ಸ್ವೀಕರಿಸುವಿಕೆ ಕೂಡ ಇರಬೇಕಾದದ್ದು ದೇಹತ್ಯಾಗದ ಸಾರ ಹಾಗೂ ಸಮರ ತಂತ್ರ, ಅದು ಶ್ರೀ ಅರವಿಂದರ ಮಾದರಿಯದು. ಶ್ರೀ ಅರವಿಂದರು ಹೋರಾಡುತ್ತ ದೇಹತ್ಯಾಗ ಮಾಡಿದರು ಎಂದು ನಾವು ಹೇಳುತ್ತೇವೆ. ಪೃಥ್ವಿ – ಸ್ವಭಾವದಲ್ಲಿರುವ ಯಾವ ಕೊರತೆಗೂ ಮೌನವಾಗಿ ಎಂದಿಗೂ ಒಪ್ಪಿಗೆ ನೀಡದಿರುವುದು ಅವರ ಧ್ಯೇಯ ಸೂತ್ರವಾಗಿತ್ತು. ಏಕೆಂದರೆ ಪೃಥ್ವಿಯ ಸ್ವಭಾವದಲ್ಲಿ ಯಾವುದು ಮೇಲ್ನೋಟಕ್ಕೆ ಅಸಾಧ್ಯವಾದದ್ದೆನಿಸುವುದೋ ಅದು ಪ್ರಕಟವಾಗುವುದು ಉತ್ಕ್ರಾಂತಿಯ ರಹಸ್ಯವೆಂಬುದನ್ನು ಶ್ರೀ ಅರವಿಂದರು ಕಂಡುಕೊಂಡಿದ್ದರು – ತೋರಿಕೆಗೆ ಜೀವರಹಿತವಾದದ್ದೆನಿಸುವ ಭೌತದ್ರವ್ಯದಲ್ಲಿ ಜೀವ ಸತ್ವ ಹಾಗೂ ಸಂವೇದನೆಗಳ ಕಂಪನ, ತೋರಿಕೆಗೆ ಹುಟ್ಟುಗುಣದ ಪಶುತ್ವ ಎನಿಸುವುದರಲ್ಲಿ ಮನಸ್ಸು ಹಾಗೂ ತರ್ಕಗಳ ಮಿನುಗುವಿಕೆ, ಮೇಲ್ನೋಟದಲ್ಲಿ ತಡಕಾಡುತ್ತಿರುವ ಬುದ್ಧಿಮತ್ತೆ ಎಡವುತ್ತಿರುವ ಪ್ರಾಣಶಕ್ತಿ ಮತ್ತು ಮರ್ತ್ಯ ದೇಹ ಇವುಗಳಲ್ಲಿ ಅತಿಮಾನಸದ ತೆರೆದಿರಿಸುವಿಕೆ ಇವು ಆ ರಹಸ್ಯದಲ್ಲಿ ಕಂಡುಬರುವ ಸಂಗತಿಗಳು. ಹಾಗಾಗಿ ಜಗತ್ತಿನ ಸಾಮಾನ್ಯ ಸಂಗತಿಗಳಿಗೆ ಶರಣಾಗುವುದು ಇಲ್ಲವೆ ಜಗತ್ತಿನಿಂದ ದೂರ ಶಾಂತಿಯಲ್ಲಿ ಪಲಾಯನ ಮಾಡುವುದು ಇದೆಲ್ಲ ಶ್ರೀ ಅರವಿಂದರಿಗೆ ಸಾಧ್ಯವಿರಲಿಲ್ಲ. ಅಲಂಘನೀಯ (inviolable), ಕಾಲರಹಿತ ಶಾಂತಿಯನ್ನು ಅವರು 1908ರಲ್ಲಿ ಬಡೋದೆಯಲ್ಲಿ ಮೂರು ದಿನಗಳಲ್ಲಾದ ಮಹೋನ್ನತ ಅನುಭವದಿಂದ ಕಂಡುಕೊಂಡಿದ್ದರು, ಆಗ ಮನಸ್ಸನ್ನು ಸಂಪೂರ್ಣ ನಿಶ್ಚಲ ನೀರವತೆಯಲ್ಲಿ ಇರಿಸುವುದರ ಮೂಲಕ ನಿರ್ವಾಣದ ಪರಿಪೂರ್ಣ ಅನುಭವ ಪಡೆದಿದ್ದರು. ಆ ಹಂತ ಹಲವಾರು ಇತರ ಯೋಗಿಗಳಿಗೆ ಕೊನೆಯದಾಗಿರುತ್ತಿತ್ತು, ಆದರೆ ಆ ಹಂತ ಶ್ರೀ ಅರವಿಂದರಿಗೆ ಕೊನೆಯದಾಗಿರದೆ ಮುಂದೆ ದೊರಕಿಸಬೇಕಾಗಿದ್ದ ವಿಜಯಗಳಿಗೆ ಆಧಾರ ಮಾತ್ರವಾಗಿತ್ತು. ಶರಣಾಗತಿ ಕುರಿತು ಹೇಳುವುದಾದರೆ ಭಗವಂತನಿಗೆ ಹೊರತಾಗಿ ಬೇರಾವುದಕ್ಕೂ ಅವರು ಶರಣಾಗುತ್ತಿರಲಿಲ್ಲ. ಪರಿಣಾಮವಾಗಿ ಕೊನೆಯ ಉಸಿರಿರುವವರೆಗೆ ಅವರು ಅತಿಮನಸ್ಸಿನ ಅವರೋಹಣಕ್ಕಾಗಿ ಕಾದಾಡಿದರು – ಅಮರ ದಿವ್ಯಾತ್ಮದ ಸೂರ್ಯನಿಗೆ ಕೆಳಗಿಳಿದು ಬರಲು ಕರೆಕೊಟ್ಟರು, ತಮ್ಮ ಭೌತಿಕ ಆವರಣವನ್ನು ಭಾವೋದ್ರೇಕದಿಂದ ಅತಿಮಾನಸ ಪ್ರಕಾಶದಿಂದ ತುಂಬಿಕೊಂಡರು, ಅದೆಷ್ಟರ ಮಟ್ಟಿಗೆಂದರೆ, ನಿಜವಾಗಿ, ಹಲವಾರು ದಿನಗಳ ಕಾಲ ಆ ಆವರಣ ಬಣ್ಣಗೆಡದೆ,

ಕೊಳೆತಕ್ಕೀಡಾಗದೆ ಉಳಿದುಕೊಂಡಿತ್ತು. ದೇಹತ್ಯಾಗದ ಕೊನೆಯ ಗಳಿಗೆಯವರೆಗೆ ಈ ರೀತಿ ಹೋರಾಡಿದ್ದು ಅವರ ಇಡೀ ಜೀವನದ ಪ್ರಯತ್ನದೊಂದಿಗೆ ದನಿಗೂಡಿಸಿತ್ತು. ಒಂದು ಪತ್ರದಲ್ಲಿ ಅವರು ತೋರಿಕೆಯ ಪತನವಿರುವಾಗ ವಿಜಯ ದೊರಕಿಸುವ ತಂತ್ರವನ್ನು ಕುರಿತು ವಿಶದವಾಗಿ ಹೇಳಿರುವರಲ್ಲವೆ?

"ವಿರೋಧೀ ಪರಿಣಾಮವಿರುವುದನ್ನು ನಾನು ಪೂರ್ವಭಾವಿಯಾಗಿ ಕಂಡುಕೊಂಡಾಗಲೂ ಆಗಬೇಕಾಗಿರುವುದಕ್ಕಾಗಿ ಕಾರ್ಯ ಕೈಕೊಳ್ಳಬೇಕು, ಏಕೆಂದರೆ ಅದು ಶಕ್ತಿಯನ್ನು, ನಾನು ಸೇವೆ ಸಲ್ಲಿಸುತ್ತಿರುವ ದೈವೀ ಸತ್ಯದ ತತ್ವವನ್ನು ಜೀವಂತವಾಗಿರಿಸುತ್ತದೆ ಮತ್ತು ಅದಕ್ಕೆ ಈ ನಂತರ ವಿಜಯ ದೊರಕಿಸುವ ಸಾಧ್ಯತೆಯನ್ನು ಕೊಡುತ್ತದೆ, ಅದರಿಂದಾಗಿ ಸದ್ಯದ ಗಳಿಗೆಯ ವಿಧಿ ವಿರೋಧಿ ಸ್ವರೂಪದ್ದಾಗಿದ್ದರೂ ಅದು ಭವಿಷ್ಯತ್ತಿನಲ್ಲಿಯ ಅನುಕೂಲಕರ ವಿಧಿಗಾಗಿ ಕೈಕೊಳ್ಳುವ ಕಾರ್ಯದ ಭಾಗವಾಗುತ್ತದೆ."

ಗುರುವಿನ ಇಂತಹ ದೂರದೃಷ್ಟಿಯ ಪರಿಚ್ಛೇದಗಳನ್ನು ಉಲ್ಲೇಖಿಸುವು–ದರೊಂದಿಗೆ ನಾವು ರಹಸ್ಯವನ್ನು ಸರಳೀಕರಿಸುವ ನಮ್ಮ ಪ್ರಯತ್ನವನ್ನು ಮುಕ್ತಾಯಗೊಳಿಸಬೇಕು. ಆ ರಹಸ್ಯವೆಂದರೆ ಡಿಸೆಂಬರ 5ರ ಬೆಳಗಿನ ಸಮಯದಿಂದ 111 ಗಂಟೆಗಳ ಕಾಲ ಅವರು ತಮ್ಮ ಕೋಣೆಯಲ್ಲಿದ್ದ ಸರಳ ಹಾಸಿಗೆಯ ಮೇಲೆ ಮಹೋನ್ನತವಾಗಿ ಕಂಡುಬರುತ್ತಿದ್ದ ಧ್ಯಾನದಲ್ಲಿ ಲೀನರಾಗಿದ್ದರು, ಆ ಕೋಣೆಯಲ್ಲಿ ಅವರು ಎರಡು ದಶಕಗಳ ಕಾಲ ಗಾಢವಾದ ಜಗತ್ತಿನ ಕಾರ್ಯದಲ್ಲಿ ತೊಡಗಿಕೊಂಡಿದ್ದರು. "ಆಧ್ಯಾತ್ಮಿಕವಾಗಿ ಸಾಮ್ರಾಟ–ರಾದವರು" – ಇದು ಮಾತ್ರ ಆ ದೇಹದ ತೋರಿಕೆ ಕುರಿತು ಯೋಗ್ಯವಾದ ವರ್ಣನೆ: ಬಿಳಿಯ ಗಡ್ಡ, ವಿಶಾಲವಾದ ಹಣೆಯ ಮೇಲ್ಗಡೆ ಹರಡಿಕೊಂಡಿದ್ದ ಬಿಳಿ ಕೂದಲು, ಅಚಂಚಲವಾಗಿ ಮುಚ್ಚಿಕೊಂಡಿದ್ದ ಕಣ್ಣುಗಳು, ವಿಶಾಲ ಹೊರಳೆಗಳಿರುವ ಗರುಡ ಮೂಗು, ದೃಢವಾಗಿ ಮುಚ್ಚಿಕೊಂಡಿದ್ದ ತುಟಿಗಳು, ಅವುಗಳ ಕೊನೆಗೆ ಕಂಡುಬರುತ್ತಿದ್ದ ದಿವ್ಯಾನಂದ, ಅಗಲವಾದ ಮೃದು ಭುಜಗಳು, ಅದಮ್ಯ ಎದೆಯ ಮೇಲೆ ಇರಿಸಲು ಚಾಚಿಕೊಂಡಿದ್ದ ತೋಳುಗಳು, ಕಲಾತ್ಮಕ ಹಾಗೂ ಕ್ಷಮತೆಯುಳ್ಳ ಕೈಯೊಂದರ ಮೇಲೆ ಇರಿಸಿದ ಅಂತಹದೇ ಕೈ, ಬಲಿಷ್ಠವಾದ ಪುರುಷ ಸಹಜ ಟೊಂಕ, ಅದಕ್ಕೆ ಸುತ್ತಿಕೊಂಡಿದ್ದ ಬಂಗಾರ ವರ್ಣದ ರೇಶಿಮೆ ಅಂಚಿರುವ ಧೋತರ, ಆಂತರಿಕ ರಾಜಠೀವಿಯೊಂದಿಗೆ ಚಾಚಿಕೊಂಡಿದ್ದ ಕಾಲುಗಳು, ಅವು 79 ವರ್ಷಗಳ ಕಾಲ ತಮ್ಮ ಪವಿತ್ರ ಪಾದಗಳೊಂದಿಗೆ ಪೃಥ್ವಿಯನ್ನು ಆಶೀರ್ವದಿಸುತ್ತ, ವಶಪಡಿಸಿಕೊಳ್ಳುತ್ತ ಹೆಜ್ಜೆ ಇರಿಸಿದ್ದನ್ನು ನೆನಪಿಗೆ



ತಂದುಕೊಡುತ್ತಿದ್ದವು, ಆ ಕೋಣೆಯಲ್ಲಿಯ ವಾತಾವರಣ ನಿರ್ಮಲಗೊಳಿಸುವ, ಪ್ರಕಾಶ ಬೀರುವ ಪವಿತ್ರ ಸಾಮರ್ಥ್ಯದೊಂದಿಗೆ ಕಂಪಿಸುತ್ತಿತ್ತು, ಆ ಸಾಮರ್ಥ್ಯವು ಜಯಿಸುವ ವಿಶ್ರಾಂತಿಯಲ್ಲಿರುವ ಗುರುವಿನ ನಿಲುವಿನಿಂದ ಮತ್ತು ಅವರ ದರ್ಶನ ತೆಗೆದುಕೊಳ್ಳುತ್ತಿದ್ದ ಎಲ್ಲರ ಜನರ ಶಿರಗಳ ಮೇಲೆ ಒತ್ತಾಯ ತರುವ ಗಾಢತೆಯಿಂದ ಹೊರಹೊಮ್ಮುತ್ತಿರುವಂತೆ ತೋರಿಬರುತ್ತಿತ್ತು. ಶ್ರೀ ಅರವಿಂದರ ಸ್ವಾರ್ಥರಹಿತ ದೇಹತ್ಯಾಗದ ಕಾರಣದಿಂದಾಗಿ ಜೀವನದಲ್ಲಿ ರೂಪಪರಿವರ್ತನೆ ತರುವ ಅತಿಮಾನಸದ ದೈವೀಕೃಪೆ ದ್ವಿಗುಣಗೊಂಡ ಶಕ್ತಿಯಿಂದ ಮನುಕುಲದ ಮೇಲೆ ಸುರಿಯಿತು.

ಯಾವುದೋ ಅಜ್ಞಾತ ರೀತಿಯಲ್ಲಿ ಶ್ರೀ ಅರವಿಂದರ ವೈಯಕ್ತಿಕ ಸಾನ್ನಿಧ್ಯವೇ ಸ್ವತಃ ಗಾಢವಾಗಿ ಬೆಳೆಯಿತೆಂದು ಇಲ್ಲಿ ಅಧಿಕವಾಗಿ ಹೇಳಬಹುದು. ಇಲ್ಲಿಯವರೆಗೆ ಅವರು ಏಕಾಗ್ರತೆಯಲ್ಲಿದ್ದುಕೊಂಡು ಯೌಗಿಕ ಪರಿವರ್ತನೆಯ ವಿಧಾನವನ್ನು ತ್ವರಿತಗೊಳಿಸುವ ಕಾರ್ಯದಲ್ಲಿ ತೊಡಗಿಕೊಳ್ಳುವುದಕ್ಕಾಗಿ ತಮ್ಮನ್ನು ಒಂದು ಕೋಣೆಗೆ ಸೀಮಿತಗೊಳಿಸಿಕೊಂಡಿದ್ದರು. – ಶ್ರೀಮಾತೆಯವರು ತಮ್ಮ ಭೌತಿಕ ಸಾನ್ನಿಧ್ಯದ ಮೂಲಕ ಅಲ್ಲಿದ್ದ ಅದ್ಭುತ ದಿವ್ಯಾನಂದ ಹಾಗೂ ಕ್ರಿಯಾಸಾಮರ್ಥ್ಯಗಳು ಶಿಷ್ಯಂದಿರತ್ತ ಹರಿದು ಬರುವಂತೆ ಮಾಡುತ್ತಿದ್ದರು. ಶ್ರೀ ಅರವಿಂದರು ತಮ್ಮ ಅತ್ಯಂತ ಬಾಹ್ಯ ಭೌತಿಕ ಕೋಶವನ್ನು ಆಚೆಗಿರಿಸುವುದರ ಮೂಲಕ ತಮ್ಮ ಅನುಯಾಯಿಗಳೊಂದಿಗೆ ಹೊಸ ಆಪ್ತತೆಯಿಂದ ಕೂಡಿಕೊಂಡರು ಮತ್ತು ಆ ಅನುಯಾಯಿಗಳನ್ನು ಹೆಚ್ಚು ನೇರವಾಗಿ ತಮ್ಮ ಭವ್ಯ ಸತ್ತೆಯಲ್ಲಿ ತೆಗೆದುಕೊಂಡರು. ಅವರ ಸತ್ತೆ ಕೇವಲ ಸುತ್ತುವರಿಯುವ ಶ್ರೇಷ್ಠತೆಯದಾಗಿತ್ತೆಂದು ಹೇಳಿದರೆ ಅದಕ್ಕೆ ನ್ಯಾಯ ಒದಗಿಸಿದಂತಾಗುವುದಿಲ್ಲ. – ಭೌತಿಕ ಆವರಣದ ಹಿಂದೆ ಸಂಘಟಿತ–ಗೊಂಡ ಕೋಶಗಳಿರುತ್ತವೆ – ಸೂಕ್ಷ್ಮ ಹಾಗು ಕಾರಣ ಶರೀರಗಳು – ಮತ್ತು ಶ್ರೀ ಅರವಿಂದರು ದೂರದಲ್ಲಿದ್ದ ಕಾರಣ ಶರೀರದ ಪರಿಣಾಮಕಾರಿತ್ವವನ್ನು ಹತ್ತಿರವಿರುವ ಸೂಕ್ಷ್ಮ ಶರೀರದಲ್ಲಿ ತಂದಿದ್ದರು ಮತ್ತು ಅವರು ತಮ್ಮ ಸಮರ ತಂತ್ರರೂಪದ ದೇಹತ್ಯಾಗದ ಸಮಯದಲ್ಲಿ ಬಾಹ್ಯ ಕೋಶ(ಸ್ಥೂಲ ಶರೀರ)ದಲ್ಲಿ ಒತ್ತಿ ತುಂಬುತ್ತಿದ್ದರು. ಅವರ ಶಬ್ದಗಳನ್ನೇ ಪುನಃ ಉಲ್ಲೇಖಿಸಿ ಹೇಳುವುದಾದರೆ ಅವು ಹೀಗಿವೆ: "ಇತರ ಸ್ತರಗಳಲ್ಲಿ ಪರಿವರ್ತನೆಯ ಕಾರ್ಯವನ್ನು ಸಾಕಷ್ಟಾಗುವಂತೆ ಮಾಡಲಾಗಿದೆ." ಇದರರ್ಥ: ಅವರು ತಮ್ಮ ಸೂಕ್ಷ್ಮ ಶರೀರದಲ್ಲಿ ಅತಿಮನಸ್ಸನ್ನು ಧಾರಣ ಮಾಡಿ ಹಿಡಿದಿಟ್ಟುಕೊಂಡಿದ್ದರು. ಮರುಜನ್ಮ ತಾಳುವು–ದಕ್ಕಾಗಿ ಹೊಸ ಸೂಕ್ಷ್ಮ ಶರೀರ ಹಾಗೂ ಬಾಹ್ಯ ಭೌತಿಕ ಶರೀರಗಳೊಂದಿಗೆ ಬರುವುದಕ್ಕಾಗಿ ಆತ್ಮ ವಿಶ್ರಾಂತಿ ಪಡೆಯುವ ಯಾವುದೋ ಒಂದು ಸ್ತರಕ್ಕೆ ಅವರು

ಹಿಂತಿರುಗಿ ಹೋಗುವುದಕ್ಕಾಗಲಿ ಇಲ್ಲವೆ, ಸೂಕ್ಷ್ಮ ಶರೀರವನ್ನು ತ್ಯಜಿಸುವುದಕ್ಕಾಗಲಿ ರಹಸ್ಯ ಆವಶ್ಯಕತೆ ಇರಲಿಲ್ಲ, ಸೂಕ್ಷ್ಮ ಪ್ರಕೃತಿಯ ನಿಯಮವಿರಲಿಲ್ಲ. ಶ್ರೀ ಅರವಿಂದರು ದೇಹತ್ಯಾಗದ ಗಳಿಗೆಯಲ್ಲಿ, ಅವತಾರ ತಾಳಿದ ತಮ್ಮ ವ್ಯಕ್ತಿವಿಶಿಷ್ಟತೆಯ ಮೂಲಕ ಅತಿಮಾನಸ ಯೋಗ ಮಾಡಿದ ವಿಶ್ವವ್ಯಾಪಕ ವಿಶ್ವಾತೀತ ಪುರುಷನಿಗಿಂತ ಬಹಳ ಹೆಚ್ಚಿನದನ್ನು ಕೈಕೊಳ್ಳುವ ಸ್ಥಾನದಲ್ಲಿದ್ದರು. ಅವರು ಒಂದೇ ವೇಳೆಗೆ ಮಾನವ ಹಾಗೂ ದೈವಿಕವಾದ ಸೂಕ್ಷ್ಮ ದೇಹದಲ್ಲಿ ಕ್ರಿಯಾಶೀಲರಾಗಿರ–ಬಲ್ಲವರಾಗಿದ್ದರು. ಪ್ರಾಚೀನ ಕಾಲದ ಋಷಿಗಳು, ಪ್ರವಾದಿಗಳು ಹಾಗೂ ಅವತಾರಗಳು ಇವರೆಲ್ಲರನ್ನು ಕುರಿತು ಅನುಭಾವಿಗಳು ದರ್ಶನ ಮಾಡಿಕೊಂಡ ರೂಪಗಳಿಗಿಂತ ಅವರು ಭೌತಿಕ ಜಗತ್ತಿನೊಡನೆ ಅತಿ ಹೆಚ್ಚು ನೇರವಾದ ಭೌತಿಕ ಸಂಪರ್ಕದಲ್ಲಿ ಸತತ ಇರಬಲ್ಲವರಾಗಿದ್ದರು. ಹಾಗಾಗಿ ಅದ್ಭುತ ರೀತಿಯ ಸಹಜ ಪ್ರತಿಭೆಯುಳ್ಳ, ಉಪಕಾರ ಸ್ವಭಾವದ ಶ್ರೀ ಅರವಿಂದರು ಅತಿ ವಿಶಿಷ್ಟ ಅರ್ಥದಲ್ಲಿ ಇನ್ನೂ ಕಾರ್ಯನಿರತರಾಗಿದ್ದಾರೆ ಮತ್ತು ಅದನ್ನು ಕುರಿತು ಶ್ರೀಮಾತೆಯವರು ಮೂರ್ತ ಸ್ವರೂಪದ ಒಂದು ಸತ್ಯವನ್ನು ಅಭಿವ್ಯಕ್ತಪಡಿಸಿದ್ದಾರೆ, ಅವರು ಹೇಳಿದ್ದು ಹೀಗಿದೆ: "ಶ್ರೀ ಅರವಿಂದರ ದೇಹತ್ಯಾಗ ಕುರಿತು ದುಃಖಿತರಾಗುವುದು ಅವರಿಗೆ ಅಪಮಾನ ಮಾಡಿದಂತೆ, ಅವರು ಪ್ರಜ್ಞಾಪೂರ್ಣರಾಗಿ, ಜೀವಂತವಾಗಿ ಇಲ್ಲಿ ನಮ್ಮೊಡನೆ ಇದ್ದಾರೆ." ಅದೇ ಮೂರ್ತ ಸ್ವರೂಪದ ಸತ್ಯವನ್ನು ಕುರಿತು ಡಿಸೆಂಬರ 7 ರಂದು ಕೊಟ್ಟ ಸಂದೇಶದಲ್ಲಿ ಮತ್ತೆ ಹೇಳಲಾಗಿದೆ, ಶ್ರೀ ಅರವಿಂದರೊಡನೆ ಪ್ರಜ್ಞೆಯಲ್ಲಿ ಏಕವಾಗಿರುವ ತಮ್ಮ ಆಳಗಳಿಂದ ಆ ಮಾತನ್ನು ಅವರು ಸಾರಿ ಹೇಳಿದರು:

"ದೈವೀ ಪ್ರಭುವೆ, ನಿನ್ನ ಕಾರ್ಯ ಸಿದ್ಧಿಸಿಕೊಳ್ಳುವವರೆಗೆ ನೀವು ಕೇವಲ ಮಾರ್ಗದರ್ಶನ ಮಾಡುವ, ಪ್ರಕಾಶ ನೀಡುವ ಪ್ರಜ್ಞೆಯ ರೂಪದಲ್ಲಿ ಅಷ್ಟೇ ಅಲ್ಲ, ಆದರೆ ಕ್ರಿಯೆಯಲ್ಲಿ ತೊಡಗಿಕೊಂಡಿರುವ ಪ್ರೇರಕ ಶಕ್ತಿಯಿರುವ ದೈವೀ ಸಾನ್ನಿಧ್ಯದ ರೂಪದಲ್ಲಿಯೂ ಕೂಡ ನಮ್ಮೊಡನೆ ಉಳಿದುಕೊಳ್ಳುವಿರಿ ಎಂದು ಈ ದಿನ ಬೆಳಗಿನ ಸಮಯದಲ್ಲಿ ಆಶ್ವಾಸನೆ ನೀಡಿದ್ದೀರಿ. ಪೃಥ್ವಿ ಪರಿವರ್ತನೆ ಹೊಂದುವವರೆಗೆ ನೀವು ಪೃಥ್ವಿಯ ವಾತಾವರಣದಲ್ಲಿ ತಪ್ಪು ಅರ್ಥ ಮಾಡಿಕೊಳ್ಳಲು ಅವಕಾಶ ಕೊಡದ ರೀತಿಯಲ್ಲಿ ನಿಮ್ಮೆಲ್ಲ ಸತ್ವದೊಂದಿಗೆ ಇಲ್ಲಿಯೇ ಇರುವಿರಿ ಎಂದು ವಚನ ನೀಡಿದ್ದೀರಿ. ಈ ಅದ್ಭುತ ದೈವೀ ಸಾನ್ನಿಧ್ಯಕ್ಕೆ ನಾವು ಅರ್ಹರಾಗಲೆಂದು, ನಿಮ್ಮ ಘನತೆವೆತ್ತ ದೈವೀ ಕಾರ್ಯದ ನೆರವೇರಿಕೆಗಾಗಿ ನಾವು ಹೆಚ್ಚು ಹೆಚ್ಚಾಗಿ ನಮ್ಮನ್ನು ಮುಡಿಪಾಗಿರಿಸಿಕೊಳ್ಳುವಂತಾಗಲೆಂದು, ಈ ನಂತರ, ನಮ್ಮಲ್ಲಿರುವ ಪ್ರತಿಯೊಂದೂ ಐಕ್ಯೈಕ ದೈವೀ ಸಂಕಲ್ಪದ ಮೇಲೆ ಏಕಾಗ್ರಗೊಳ್ಳುವಂತೆ ಅನುಗ್ರಹಿಸಿರಿ."



ಹಾಗಾಗಿ ಕಾರ್ಯ ನಡೆದುಕೊಂಡು ಹೋಗುತ್ತಿದೆ, ಭವಿಷ್ಯತ್ತಿನ ಮುಂಚೂಣಿಯಲ್ಲಿ ಶ್ರೀಮಾತೆಯವರಿದ್ದಾರೆ, ದೈವೀ ಪ್ರಭು ಸೂಕ್ಷ್ಮ ಭೌತಿಕ ರೂಪದಲ್ಲಿ ಅವರ ಜೊತೆಗಿದ್ದಾರೆ. ಆ ಕಾರ್ಯ ನೆರವೇರಿಕೆ ಕಂಡುಕೊಳ್ಳುತ್ತದೆ ಎಂದು ನಂಬಿದವರಿಗೆ, ಏನು ಸಂಭವಿಸಲಿದೆ ಎಂಬುದನ್ನು ತಿಳಿದುಕೊಂಡವರಿಗೆ ಭರವಸೆಯೊಂದಿದೆ, ಅದು ವಿಶಿಷ್ಟವಾದ, ಹೃದಯಕ್ಕೆ ಅತ್ಯಂತ ಸಮಾಧಾನ ತಂದುಕೊಡುವ ಸಾಧ್ಯತೆಯಿಂದ ಭವಿಷ್ಯತ್ತು ಗರ್ಭಿತವಾಗಿದೆ ಎಂಬುದನ್ನು ನೋಡುತ್ತದೆ. ಅತಿಮನಸ್ಸಿನ ಅವರೋಹಣ ರಕ್ತ, ಮಾಂಸಗಳಲ್ಲಿ ಸಂಪೂರ್ಣವಾಗಿ ಆಗಲಿರುವ ಸಮಯ ಕುರಿತು ಶ್ರೀ ಅರವಿಂದರು ಬರೆದಿದ್ದಾರೆ:

"ರಹಸ್ಯವಾದಿಗಳ ಸಿದ್ಧಾಂತದಲ್ಲಿ ಮತ್ತು ನಮ್ಮ ಸತ್ತೆಯ ವ್ಯಾಪ್ತಿಗಳು ಹಾಗೂ ಸ್ತರಗಳು ಇವುಗಳ ಮುನ್ನಡೆಯ ಹಂತಗಳ ಬಗ್ಗೆ ಯೋಗದ ಬಗೆಗಿನ ಜ್ಞಾನ ಒದಗಿಸುವ ರೂಪರೇಷೆಗಳಲ್ಲಿ ಸೂಕ್ಷ್ಮ ಭೌತಿಕದ ಶಕ್ತಿ ಇದೆಯಷ್ಟೇ ಅಲ್ಲ, ಆದರೆ ಪ್ರಾಣ ಮತ್ತು ಇಂದ್ರಿಯ ಗೋಚರ ಭೌತದ್ರವ್ಯ ಇವುಗಳ ಮಧ್ಯೆ ಪ್ರವೇಶಿಸುವ ಸೂಕ್ಷ್ಮ ಭೌತದ್ರವ್ಯವೂ ಕೂಡ ಇದೆ, ಈ ಸೂಕ್ಷ್ಮ ಭೌತಿಕದ ದ್ರವ್ಯದಲ್ಲಿ ಸೃಷ್ಟಿ ಮಾಡುವುದು ಮತ್ತು ಈ ರೀತಿ ಸೃಷ್ಟಿ ಮಾಡಿದ ರೂಪಗಳು ನಮ್ಮ ಇಂದ್ರಿಯ ಗೋಚರ ಭೌತದ್ರವ್ಯದಲ್ಲಿ ಕೆಳಗಿಳಿಯುವಂತೆ ಮಾಡುವುದು ಕಾರ್ಯ ಸಾಧ್ಯವಿದೆ. ಈ ಸೂಕ್ಷ್ಮ ಭೌತಿಕದ ದ್ರವ್ಯದಲ್ಲಿ ರೂಪಿಸಿದ ವಸ್ತುವೊಂದು ಅದರ ಸೂಕ್ಷ್ಮತೆಯಿಂದ ಇಂದ್ರಿಯ ಗೋಚರ ಭೌತದ್ರವ್ಯದ ಸ್ಥಿತಿಯಲ್ಲಿ ಸಂಕ್ರಮಣ ಮಾಡುವುದು ಸಾಧ್ಯವಾಗಬೇಕು ಮತ್ತು ಅದು ಸಾಧ್ಯವಿದೆ ಎಂದು ನಂಬಲಾಗಿದೆ, ಅದನ್ನು ನೇರವಾಗಿ ರಹಸ್ಯ ಶಕ್ತಿಯ ಮಧ್ಯಸ್ಥಿಕೆಯಿಂದ ಹಾಗೂ ವಿಧಾನದಿಂದ ಮಾಡಬಹುದು, ಅದಕ್ಕೆ ಸಹಾಯಕವೆಂದಾಗಿ ಯಾವುದೋ ಒಂದು ಇಂದ್ರಿಯ ಗೋಚರ ವಿಧಾನವಿರಬಹುದು ಇಲ್ಲವೆ ಇರಲಿಕ್ಕಿಲ್ಲ. ದೇಹವೊಂದರಲ್ಲಿ ಪ್ರವೇಶಿಸಲು ಇಲ್ಲವೆ ತನಗಾಗಿ ದೇಹವೊಂದನ್ನು ರೂಪಿಸಲು ಮತ್ತು ಆ ದೇಹದ ಮೂಲಕ ಪೃಥ್ವಿಯ ಮೇಲೆ ದೈವೀ ಜೀವನದಲ್ಲಿ ಭಾಗವಹಿಸಲು ಬಯಸುವ ಆತ್ಮ ಹಾಗೆ ಮಾಡಲು ಸಹಾಯ ದೊರಕಿಸಬಹುದು ಇಲ್ಲವೆ ನೇರ ರೂಪಪರಿವರ್ತನೆಯ ಈ ವಿಧಾನದಿಂದ ಅದಕ್ಕೆ ಒಂದು ರೂಪವನ್ನು ಒದಗಿಸಬಹುದು, ಈ ಪರಿವರ್ತನೆಯ ವಿಧಾನದಲ್ಲಿ ಲೈಂಗಿಕ ವಿಧಾನದಲ್ಲಿ ಸಾಗಿ ಹೋಗಿ ಜನ್ಮತಾಳುವುದಿರುವುದಿಲ್ಲ ಇಲ್ಲವೆ ಯಾವುದೇ ಬಗೆಯ ಅವನತಿಗೆ ಒಳಗಾಗುವುದಿರುವುದಿಲ್ಲ, ಇಲ್ಲವೆ ಮನಸ್ಸು ಹಾಗೂ ಭೌತಿಕ ದೇಹ ಇವುಗಳ ಬೆಳವಣಿಗೆ ಹಾಗೂ ಅಭಿವೃದ್ಧಿಗಳಲ್ಲಿ ನಮ್ಮ ಸದ್ಯದ ಅಸ್ತಿತ್ವದ ರೀತಿಯಲ್ಲಿ ಅನಿವಾರ್ಯವಾದ ಭಾರವಾದ ಮಿತಿಗಳಿಗೆ

ಒಳಗಾಗುವುದಿರುವುದಿಲ್ಲ. ಹಾಗಾಗಿ ಆ ಆತ್ಮ ಒಮ್ಮೆಗೆ ನಿಜವಾದ ಭೌತಿಕ ದೇಹದ ಕಾರ್ಯ ವಿಧಾನಗಳನ್ನು, ಶ್ರೇಷ್ಠತರ ಸಾಮರ್ಥ್ಯಗಳನ್ನು, ರಚನೆಯನ್ನು ಧಾರಣ ಮಾಡಬಹುದು ಮತ್ತು ಅದು ಒಂದು ದಿನ, ಪ್ರಗತಿಪರ ಉತ್ಕ್ರಾಂತಿಯಲ್ಲಿ, ದೈವಿಕವಾಗಿಸಿದ ಪೃಥ್ವಿ ಸ್ವಭಾವದಲ್ಲಿ, ಪ್ರಾಣ ಹಾಗೂ ರೂಪಗಳ ಇಡಿಯಾದ ಪರಿವರ್ತನೆ ಹೊಂದಿದ ಅಸ್ತಿತ್ವದತ್ತ ಹೊರಹೊಮ್ಮಬಹುದು.''

ಈಗಾಗಲೆ ದೈವೀಕರಣಗೊಂಡ ಸೂಕ್ಷ್ಮ ಭೌತಿಕ ಕೋಶವನ್ನು ಹೊಂದಿರುವ ಶ್ರೀ ಅರವಿಂದರು ಪ್ರಕಟಣೆಯ ಅತಿಮಾನಸದ ವಿಧಾನವನ್ನು ಭೌತದ್ರವ್ಯದ ಪ್ರಾಂತದಲ್ಲಿಯೇ ಸ್ವತಃ ಹೊಸ ಮಾನವ ಕುಲದ ಮೇಲೆ ಅಧ್ಯಕ್ಷತೆ ವಹಿಸುವುದಕ್ಕಾಗಿ ಬಳಸಬಹುದೆಂದು ಅವರ ಈ ಶಬ್ದಗಳು ನಿರೀಕ್ಷೆಯನ್ನು ಹುಟ್ಟಿಸುತ್ತವೆ, ಇದರ ಪ್ರಾರಂಭ ಶ್ರೀಮಾತೆಯವರಿಂದಾಗುತ್ತದೆ. ಅತ್ಯುತ್ಕೃಷ್ಟತೆಯ ಆ ಅರುಣೋದಯದಲ್ಲಿ ಸ್ವಾಭಾವಿಕವಾಗಿ ಜನ್ಮತಾಳುವ ದೇಹಗಳ ಸರಣಿಯ ಮೂಲಕ ದೈವೀ ದೇಹವನ್ನು ಸಿದ್ಧಿಸಿಕೊಳ್ಳುವವರಲ್ಲಿ ಶ್ರೀಮಾತೆಯವರು ಮೊದಲಿಗರಾಗುತ್ತಾರೆ, ಅವರು ತಮ್ಮ ಸಿದ್ಧಿಯ ಮೂಲಕ ನೀಡುವ ಆಧಾರದಿಂದ ಶ್ರೀ ಅರವಿಂದರು ಅತಿ ಸ್ವಭಾವ (Super Nature) ದಿಂದ ದ್ರವ್ಯವನ್ನು, ಆಕಾರವನ್ನು ಪ್ರಕ್ಷೇಪಿಸುವುದರ ಮೂಲಕ ಪರಿವರ್ತನೆಯ ಭೌತಿಕ ಹೊದಿಕೆಯನ್ನು ಧರಿಸುವ ಮೊದಲ ಸತ್ತೆಯಾಗಬಹುದು. ಆದರೆ ನಾವು ಕಂಡುಕೊಂಡ ಸಾಧ್ಯತೆ, ಮಾನವನಾಚೆಗಿರುವ ತಣಿಸಲಾಗದ ಮತ್ತು ವಿಜಯಿಯಾದ ಪ್ರಕಾಶ ಕುರಿತು ನಾವು ದೊರಕಿಸಿದ ಮಿನುಗು ನೋಟದೊಂದಿಗೆ ಏಕಮತವಿಲ್ಲದೆ ಇರಲಾರದು, ಆ ಪ್ರಕಾಶ ವಿಶ್ವಂಭರ ಸೂರ್ಯಾಸ್ತದ ರೂಪದಲ್ಲಿ ಮೇಲ್ಮೈ ಕಣ್ಣಿಗೆ ಹೊಳೆದು ಹೋದ ಘಟನೆಯಲ್ಲಿ ಕಂಡು ಬಂದಿತು – ಅದು ಶ್ರೀ ಅರವಿಂದರ ದೇಹತ್ಯಾಗದ್ದಾಗಿದ್ದಿತು.

*

## ಅನುಬಂಧ: ಮೃತ್ಯುವನ್ನು ಜಯಿಸುವುದು

(To Thee Our Infinite Gratitude - 'ನಿಮಗೆ ನಮ್ಮ ಅನಂತ ಕೃತಜ್ಞತೆಗಳು' ಶೀರ್ಷಿಕೆ ಇರುವ ಗ್ರಂಥವನ್ನು ಮನೋಜದಾಸ ಅವರು ಬರೆದಿದ್ದಾರೆ. ಅದರ ಮುನ್ನುಡಿಯಿಂದ ಆಯ್ದ ವಿಷಯಗಳನ್ನು ಇಲ್ಲಿ ಕೊಡಲಾಗಿದೆ.)

ತನ್ನ ಅದೃಷ್ಟದಿಂದ ಮೃತ್ಯುವನ್ನು ತೆಗೆದು ಹಾಕುವುದಕ್ಕಾಗಿ ಮನುಷ್ಯನ ಎಡೆಬಿಡದ ಪ್ರಯತ್ನ – ಭೌತಿಕ ವಿಜ್ಞಾನಕ್ಕೆ ಸಂಬಂಧಿಸಿರುವುದರ ಮಟ್ಟಿಗೆ –



ಇಪ್ಪತ್ತನೆಯ ಶತಮಾನದಲ್ಲಿ ದಿಗ್ಭ್ರಮೆಗೊಳಿಸುವಷ್ಟು ಪ್ರಗತಿ ಸಾಧಿಸಿದೆ. ತಪ್ಪಾಗದ ರೀತಿಯಲ್ಲಿ ಇದನ್ನು ಪ್ರಮಾಣೀಕರಿಸುವ ಉದಾಹರಣೆಯನ್ನು ಕೊಡಬಹುದು. ಪ್ರಸಿದ್ಧ ವೈದ್ಯಕೀಯ ಸಂಶೋಧಕ ಮತ್ತು ಲೇಖಕ ಅಲ್ವಿನ್ ಸಿಲ್ವರ್‌ಸ್ಟಾಯನ್ (Alvin Silverstein) Conquest of Death (New York Macmillan 1979) – ಮೃತ್ಯುವನ್ನು ಜಯಿಸುವುದು ಶೀರ್ಷಿಕೆ ಇರುವ ಪ್ರಬಂಧವನ್ನು 'ನಮ್ಮ ತಲೆಮಾರಿನವರಿಗೆ – ಮೊದಲು ಅಮರರಾದರಿಗೆ' ಅರ್ಪಣೆ ಮಾಡಿದ್ದಾರೆ. ಸಾರಾಂಶ ರೂಪದಲ್ಲಿ ಅವರು ಹೇಳಿದ್ದು ಹೀಗಿದೆ: ''1980 ವೈಜ್ಞಾನಿಕ ಪರಾಕಾಷ್ಠೆಯ ದಶಕವಾಗುತ್ತದೆ. ಹೃದಯರೋಗಕ್ಕೀಡಾಗುವವರ ಹಾಗೂ ಅದರಿಂದಾಗಿ ಮರಣ ಹೊಂದುವವರ ಸಂಖ್ಯೆ ಮನತಟ್ಟುವಂತೆ ಕಡಿಮೆ ಯಾಗುವುದು ಈಗಾಗಲೆ ಆವೇಗದಲ್ಲಿದೆ ಹಾಗೂ ಅದರ ಗತಿಯಲ್ಲಿ ವೇಗೋತ್ಕರ್ಷವಾಗುವುದು. ಕ್ಯಾನ್ಸರ ರೋಗದಿಂದ ಉಂಟಾಗುವ ಮರಣಗಳ ಸಂಖ್ಯೆ ಕುಗ್ಗುವುದು ಮತ್ತು ಕೊನೆಗೆ ಇಲ್ಲದಾಗುವುದು. ವಯಸ್ಸಿನಿಂದಾಗುವ ದುಷ್ಪರಿಣಾಮಗಳನ್ನು ನಾಟಕೀಯ ರೀತಿಯಲ್ಲಿ ತಗ್ಗಿಸಲಾಗುವುದರಿಂದಾಗಿ ಲಕ್ಷಾನುಗಟ್ಟಲೆ ಜನರಿಗೆ ಹೊಸ ತಾರುಣ್ಯ ದೊರಕುವುದು. ಈ ದಶಕ ಮುಗಿಯುತ್ತಿದ್ದಂತೆ ರೋಗಗಳು ಕೊನೆ ಕಂಡುಕೊಳ್ಳುತ್ತವೆ ಮತ್ತು ನೋವು ಹಾಗೂ ವೇದನೆಗಳಲ್ಲಿ ಸ್ವಾಗತಾರ್ಹ ಕುಗ್ಗುವಿಕೆ ವಾಸ್ತವ ಸಂಗತಿಯಾಗುತ್ತದೆ. ಹೃದಯ ರೋಗ ಉಂಟಾಗುವುದರ ಪ್ರಮಾಣ 50ನೆಯ ದಶಕದಿಂದ ಕ್ರಮೇಣ ಕುಗ್ಗುತ್ತ ಬಂದಿದೆ. ಕ್ಯಾನ್ಸರ ರೋಗ ಉಂಟಾಗುವುದರ ಪ್ರಮಾಣ ಈಗಾಗಲೆ ಕೆಳಮುಖವಾಗುವತ್ತ ಹೊರಳಿದೆ ಮತ್ತು ಬರುವ ದಶಕಗಳಲ್ಲಿ ಅದು ವೇಗೋತ್ಕರ್ಷ ಪಡೆದ ರೀತಿಯಲ್ಲಿ ಮುಂದುವರಿಯುವುದು. ಮುಂದಿನ ದಶಕದಲ್ಲಿ ಇಂತಹ ಹೊಡೆತಗಳ ವಿರುದ್ಧ ಗಮನಾರ್ಹ ಸುಧಾರಣೆ ಕಂಡುಬರುವುದು. ಮುಂದಿನ ಹತ್ತು ವರ್ಷಗಳಲ್ಲಿ ನೀವು ಜೀವಂತವಾಗಿ ಉಳಿದುಕೊಂಡರೆ ಅನಂತಕಾಲದ ವರೆಗೆ ತಾರುಣ್ಯದಿಂದ, ಉತ್ಸಾಹದಿಂದ ಜೀವಿಸಬಹುದು – ನೀವು ಅಮರರಾಗಬಹುದು.'' ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅಮರರಾಗದೆ ಹೋದರೂ, ಕನಿಷ್ಠಪಕ್ಷ, ಮೃತ್ಯುವಿಗೆ ಈಡಾಗುವ ನಿರ್ಬಂಧಕ್ಕೊಳಗಾಗುವುದಿಲ್ಲ.

ಇದಾದ ನಂತರ ಸುಮಾರು ಒಂದು ವರ್ಷ ಕಳೆದಿರಬಹುದು, ಈ ಭವಿಷ್ಯವಾಣಿಯನ್ನು ನುಚ್ಚುನೂರಾಗಿಸುವ ಮಾರಕ ಮೋಡವೊಂದು ಜಾಗತಿಕ ಆಕಾಶದ ಮೇಲೆ ಹರಡಿಕೊಂಡಿತು ಹಾಗೂ ಅಂಧಕಾರವನ್ನುಂಟುಮಾಡಿತು – ಅದು ಏಡ್ಸ (AIDS) ರೋಗ.

ದೈವೀ ಜೀವನ (Life Divine) ಗ್ರಂಥದಲ್ಲಿರುವ "ಪುನರ್ಜನ್ಮ ಹಾಗೂ ಇತರ ಲೋಕಗಳು" ಶೀರ್ಷಿಕೆಯಿರುವ ಅಧ್ಯಾಯಕ್ಕೆ ಶ್ರೀ ಅರವಿಂದರು ಸೇರಿಸಿದ ಅಡಿಟಿಪ್ಪಣಿ (foot note) ಯಲ್ಲಿ ಇಂತಹ ಬೆಳವಣಿಗೆಯನ್ನು ಪೂರ್ವಭಾವಿಯಾಗಿ ಕಂಡುಕೊಂಡಿದ್ದರು ಎಂದೆನಿಸುತ್ತದೆ:

"ವಿಜ್ಞಾನ – ಭೌತಿಕ ವಿಜ್ಞಾನ ಇಲ್ಲವೆ ರಹಸ್ಯ ವಿಜ್ಞಾನ – ದೇಹ ಅನಿಶ್ಚಿತ ಕಾಲದವರೆಗೆ ಜೀವಂತವಾಗಿರುವ ಸ್ಥಿತಿಗಳನ್ನು ಇಲ್ಲವೆ ಸಾಧನಗಳನ್ನು ಶೋಧಿಸಿದಾಗ್ಯೂ ಕೂಡ, ಆಂತರಿಕ ಬೆಳವಣಿಗೆಗೆ ಯೋಗ್ಯವಾಗುವಂತೆ ದೇಹ ತನ್ನನ್ನು ಹೊಂದಿಸಿಕೊಳ್ಳದೆ ಹೋದರೆ ಆತ್ಮ ಅದನ್ನು ತ್ಯಜಿಸಿಬಿಡುವ, ಹೊಸಜನ್ಮ ತಾಳುವ ಯಾವುದಾದರೊಂದು ಮಾರ್ಗವನ್ನು ಕಂಡುಕೊಳ್ಳುತ್ತದೆ. ಮೃತ್ಯುವಿಗೆ ಪ್ರಾಪಂಚಿಕ ಇಲ್ಲವೆ ಭೌತಿಕ ಕಾರಣಗಳು ನಿಜವಾದ ಕಾರಣಗಳಲ್ಲ. ಅದರ ನಿಜವಾದ ಆಳಾತಿ ಆಳದ ತರ್ಕ ಹೊಸ ಸತ್ತೆಯ ಉತ್ಕ್ರಾಂತಿಗಾಗಿ ಇರುವ ಆಧ್ಯಾತ್ಮಿಕ ಆವಶ್ಯಕತೆಯಾಗಿರುತ್ತದೆ."

ಕೇವಲ ಅಡಿಟಿಪ್ಪಣಿಯ ರೂಪದಲ್ಲಿದ್ದರೂ ಅದು ಸಾರಭೂತ ಸತ್ಯವನ್ನು ಒಳಗೊಂಡಿದೆ: ಹೊಸ ಸತ್ತೆಯ ಉತ್ಕ್ರಾಂತಿಗಾಗಿ ಮೃತ್ಯು ಸಮರ್ಥನೆ ಪಡೆಯುತ್ತದೆ. ಗುರು ನಮ್ಮೆದುರಿಗೆ ತೆರೆದಿರಿಸಿದ ದರ್ಶನದಿಂದ ನಾವು ಹೀರಿಕೊಳ್ಳಬಹುದಾದ ಅಲ್ಪ ಮಟ್ಟಿಗಿನ ಪ್ರಕಾಶದಿಂದ ಈ ಗಂಭೀರ ಹೇಳಿಕೆಗೆ ವಿವರಣೆ ನೀಡಬಹುದು. ಈ ಸನ್ನಿವೇಶ ವಿರೋಧಾಭಾಸದ ಗುರುತನ್ನು ಹೊಂದಿದೆ. ಅಭಿವೃದ್ಧಿ ಹೊಂದಲು ಅಭೀಪ್ಸೆಪಡುವ ಆತ್ಮವನ್ನು ಒಳಗೊಳ್ಳಲು ದೇಹ ಯೋಗ್ಯವಾದ ಉಪಕರಣವಾಗದೆ ಹೋದರೆ, ಅನಿಶ್ಚಿತ ಕಾಲದ ವರೆಗೆ ಭೌತಿಕ ದೇಹ ಜೀವಂತ ಉಳಿದುಕೊಳ್ಳುವ ಸಾಧ್ಯತೆಯಿಲ್ಲ. ಇನ್ನೊಂದೆಡೆಗೆ ಯಾವುದೋ ಪರಿವರ್ತನೆಗೊಳಪಡಿಸುವ ಹೊಸ ಪ್ರಜ್ಞೆಯ ಮಧ್ಯಸ್ಥಿಕೆಯಿಲ್ಲದೆ ಆ ವಿಧಾನಕ್ಕೆ ದೇಹ ಯೋಗ್ಯವಾಗುವುದು ಸಾಧ್ಯವಿಲ್ಲ. ಶ್ರೀ ಅರವಿಂದರ ಬೋಧನೆಯನ್ನು ಅನುಸರಿಸುವ ಶಿಷ್ಯಂದಿರಾದ ನಾವು, ತಿಳಿದುಕೊಂಡಿರುವು– ದೇನೆಂದರೆ: ಇಲ್ಲಿಯವರೆಗೆ ಶೋಧಿಸಲಾಗಿರದ್ದನ್ನು ಶೋಧಿಸುವುದರಲ್ಲಿ ನಮ್ಮ ಗುರು ತೊಡಗಿಕೊಂಡಿದ್ದರು, ತಮ್ಮ ಯೌಗಿಕ ಸಾಮರ್ಥ್ಯವನ್ನು ಆ ವಿರೋಧಾಭಾಸಕ್ಕೆ ಪರಿಹಾರ ಒದಗಿಸುವುದಕ್ಕೆ, ಪರಿವರ್ತನೆಗೊಳಪಡಿಸುವ ಸಾಮರ್ಥ್ಯವನ್ನು ಭೌತಿಕದಲ್ಲಿ ಕೆಳಗಿಳಿಸಿ ತರುವುದಕ್ಕೆ ತಮ್ಮ ಸಮಯವನ್ನು ಉಪಯೋಗಿಸಿದರು ಎಂಬುದಾಗಿದೆ. ನಮ್ಮ ಗುರು ಹಾಗೂ ಶ್ರೀಮಾತೆಯವರು



ಅನುಸರಿಸಿದ ಆ ದೈವೀ ವಿಧಾನವನ್ನು ಮತ್ತು ಅವರು ದೊರಕಿಸಿದ ಯಶಸ್ಸನ್ನು ತಿಳಿದುಕೊಳ್ಳುತ್ತೇವೆ ಎಂದು ನಾವು ಹಕ್ಕು ಸಾಧಿಸಿದರೆ ನಮ್ಮ ಮಟ್ಟದಲ್ಲಿ ಅದು ದುರಹಂಕಾರದ್ದೆನಿಸುವುದು.

*

## ವಾರ್ತಾಪತ್ರ


### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 9ನೇ ನವೆಂಬರ್ 2013 ರ ಶನಿವಾರದಂದು ಬಿಜಾಪುರ ಜಿಲ್ಲೆಯ ಲೋಣಿ ಕೇಂದ್ರದಲ್ಲಿ ಧ್ಯಾನ ಮಂದಿರವನ್ನು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀಯುತ ಎಸ್.ಎಸ್. ಸಿಂಹರವರು ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಶ್ರೀ ಪಿ.ಸಿ. ಗಲಗಲಿ, ಧರ್ಮದರ್ಶಿ, ಶ್ರೀ ಅರವಿಂದೋ ಸಂಕೀರ್ಣ, ಬೆಂಗಳೂರು, ಶ್ರೀ ಕೋರೆ, ಮಾಜಿ ಶಾಸಕರು ಹಾಗೂ ಡಾ॥ ಜಗದೀಶ್, ಸಂಯೋಜಕರು, ಶ್ರೀ ಅರವಿಂದೋ ಸೊಸೈಟಿ ರಾಜ್ಯಸಮಿತಿ ಕರ್ನಾಟಕ ಇವರುಗಳು ಹಾಗೂ ಅನೇಕ ಗುರು–ಬಂಧುಗಳು ಹಾಜರಿದ್ದರು.

ದಿನಾಂಕ 17ನೇ ನವೆಂಬರ್ 2013ರ ಭಾನುವಾರದಂದು ಶ್ರೀಮಾತೆಯವರ ಮಹಾಸಮಾಧಿಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 10.40 ರಿಂದ 11.40ರ ವರೆಗೆ ಶ್ರೀಯುತ ಭಾಸ್ಕರ ರೆಡ್ಡಿಯವರು "KNOW THYSELF" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.

ದಿನಾಂಕ 24ನೇ ನವೆಂಬರ್ 2013ರ ಭಾನುವಾರದಂದು ಶ್ರೀ ಅರವಿಂದರ ಸಿದ್ಧಿಯ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.30ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 10.40 ರಿಂದ 11.40ರ ವರೆಗೆ ಶ್ರೀ ಎಸ್.ವಿ. ಸಬ್ನೀಸ್ (ಶ್ರೀಜಿ) ಯವರು "Significance of Siddhi Day" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.



*"Lord, give us the indomitable courage that comes from a perfect trust in Thee."*

- The Mother

**RNI No. 22511/1971**
No. of Pages **44 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು–ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.